ಜನಶಕ್ತಿ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 24
ಜೂನ್ 16, 2013 ಪುಟ 16 ರೂ. 10/-

ಆಹಾರ ಭದ್ರತೆ

ಬೇಕಿರುವುದು ವಿಶೇಷ ಅಧಿವೇಶನ ಅಲ್ಲ, ವಿಶೇಷ ನಿರ್ಧಾರ





45ನೇ ಅಖಿಲ ಭಾರತ ಕಾರ್ಮಿಕ ಸಮ್ಮೇಳನ : ಯು.ಪಿ.ಎ. ಸರ್ಕಾರದ ಸಂಕಟ



ಡೆಂಗ್ಯೂ ಜ್ವರ : ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿ ರಾಜ್ಯ

'ಒಕ್ಕಲೆಬ್ಬಿಸಬೇಡಿ' ಬಡ ಬಗರ್‌ಹುಕುಂ ಸಾಗುವಳಿದಾರರನ್ನು

ಕೇಂದ್ರ ಮಾಹಿತಿ ಆಯೋಗದ ಆದೇಶ: ಪಕ್ಷ ರಾಜಕಾರಣವನ್ನೇ ದುರ್ಬಲಗೊಳಿಸುತ್ತದೆ



ಅದು ಅನಿಲ ಬೆಲೆಯೋ - 2ಜಿ ಹಂಚಿಕೆಯೋ? ಎಲ್ಲವೂ 'ಅಂಬಾನಿ'ಗಳಿಗಾಗಿ !?



ಚಳುವಳಿಗಳ ಮುಂದಿರುವ ಯಕ್ಷ ಪ್ರಶ್ನೆ

'ಸಹಯಾನ'ದಲ್ಲಿ ಚಿಂತನ-ಮಂಥನ

ಪುಸ್ತಕ ಪರಿಚಯ

ಸೋತ ಒಡಲುಗಳಿಗೊಂದು ಸಾಂತ್ವನ "ಹಸಿವಿನ ಹಾಡು – ಪಾಡು"

– ಸುಬ್ರಾಯ ಮತ್ತೀಹಳ್ಳಿ, ಸಿದ್ಧಾಪುರ

ದೇಶದ ತುಂಬೆಲ್ಲ ಭಕ್ತಿ ಮತ್ತು ಭಾವುಕತೆಯ ಮಹಾ ಪ್ರವಾಹ ಹರಿಯುತ್ತಿರುವಾಗ ವೈಚಾರಿಕತೆ ಎಂಬ ಸೂಕ್ಷ್ಮಧಾರೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬಹುದೊಡ್ಡ ಹೋರಾಟವನ್ನೇ ಮಾಡಬೇಕಾದ ಸ್ಥಿತಿಯಿದೆ.

ಚಾರ್ವಾಕರಿಂದ ಇತ್ತೀಚಿನವರೆಗೂ ವೈಚಾರಿಕರು ಅಲ್ಪಸಂಖ್ಯಾತರೇ ಆಗಿದ್ದಾ-ರೆ. ಸಾಮಾನ್ಯರಿಂದ ಆಳುವ ವರ್ಗದವರೆಗೆ ಸನ್ಯಾಸಿಯಿಂದ ವಿಜ್ಞಾನಿಗಳವರೆಗೆ ಭಕ್ತಿ ಮತ್ತು ಭಾವನೆ ಅದೇನೋ ಪುಳಕ ನೀಡುತ್ತದೆ. ಧರ್ಮ ಕೋಮು ದೇವಾಲಯ ಮಠ ಮಸೀದಿಗಳು, ಸನ್ಯಾಸಿ ಬಾಬಾಗಳು ಅಧ್ಯಾತ್ಮಿಕತೆಯ ರೋಮಾಂಚಕಾರಕ ಅಮಲು ನೀಡುತ್ತವೆ. ಅದೊಂದು ಭಾವನಾಲೋಕದ ಅನೂಹ್ಯ ಜಗತ್ತು. ಬದುಕಿನ ಯಾವ ಘಟನೆ ಬೆಳವಣಿಗೆಗಳೂ ಭಾವದ ತೆಕ್ಕೆಗೆ ಸಿಗದಿದ್ದರೂ ಅದೇನೋ ಆಕರ್ಷಣೆ, ಅದೇನೋ ಸೆಳೆತ, ಒಟ್ಟಿನಲ್ಲಿ ಅವೆಲ್ಲ ಬೇಕು.

ಆದರೆ ಅದು ಎಂದೂ ಭೂತ ಮತ್ತು ಭವಿಷ್ಯವನ್ನು ಅವಾಸ್ತವವಾಗಿ ವೈಭವೀಕರಿಸುತ್ತದೆ. ವಾಸ್ತವದಿಂದ ದೂರ ಸೆಳೆಯುತ್ತದೆ. ಆಸ್ತಿಕರ ದೃಷ್ಟಿಯಲ್ಲಿ ವರ್ತಮಾನವೆಂಬುದು ಭೂತದ ಪ್ರತಿಕೃತಿ ಅಷ್ಟೆ.

ವರ್ತಮಾನಕ್ಕೆ ಹೊಸ ಆಯಾಮ ಹೊಸ ತಿರುವು ನೀಡುವ ಮತ್ತು ವಾಸ್ತವದ ಪ್ರಖರ ಸತ್ಯವನ್ನ ಮನಗಾಣಿಸುವ ತಾಕತ್ತು ಅಪ್ಪಟ ವೈಚಾರಿಕತೆಗೆ ಮಾತ್ರ ದಕ್ಕುತ್ತದೆ ಎಂಬುದು ಮಾತ್ರ ಸತ್ಯ. ಆದರೆ ವೈಚಾರಿಕತೆಗೆ ಒತ್ತು ನೀಡುವ, ಒಮ್ಮೆ ಆತ್ಮವಿಮರ್ಶೆಗೆ ತೊಡಗಿಸುವ ಪುಸ್ತಕಗಳು ಇತ್ತೀಚಿನ ದಿನಗಳಲ್ಲಿ ಅಪರೂಪವಾಗುತ್ತಿವೆ.


ನಮ್ಮ ಜಿಲ್ಲೆಯವರೇ ಉತ್ತರ ಕನ್ನಡ ಆದ ಡಾ॥ ವಿಠ್ಠಲ ಭಂಡಾರಿ ಅಪ್ಪಟ ವಿಚಾರವಾದಿಯಾಗಿ ತಮ್ಮ ವಿಸ್ತಾರ ಓದು ಮತ್ತು ತಲಸ್ಪರ್ಶಿ ಭಾಷಣಗಳಿಂದ ಈಗಾಗಲೇ ಉದಯೋನ್ಮುಖ ವಿಚಾರವಾದಿಗಳ ನಡುವೆ ಮುಂಚೂಣಿಯಲ್ಲಿ ಮಿನುಗುತ್ತಿರುವುದನ್ನು ಕಾಣುತ್ತಿದ್ದೇವೆ. ಅವರದೇ ಆದ ಹಲವು ವೈವಿಧ್ಯಮಯ ಭಾಷಣಗಳು ಮತ್ತು ಪ್ರಬಂಧಗಳ ಸಂಕಲನವೊಂದು ಇತ್ತೀಚೆಗೆ ಬಿಡುಗಡೆ ಗೊಂಡಿದೆ.

"ಹಸಿವಿನ ಹಾಡು ಪಾಡು" ಎಂಬ ಅರ್ಥಪೂರ್ಣ ಶೀರ್ಷಿಕೆ ಹೊಂದಿದ ಈ ಕೃತಿ ಉತ್ತರ ಕನ್ನಡ ಜಿಲ್ಲೆಯ ಚರಿತ್ರೆಯಲ್ಲಿ ಈವರೆಗೂ ಗಮನಕ್ಕೆ ಬಾರದ ಆದ-ರೆ ಅತ್ಯವಶ್ಯವಾಗಿ ಗಮನಿಸಲೇ ಬೇಕಾದ ಜ್ವಲಂತ ಸಂಗತಿಗಳನ್ನ ರೋಚಕವಾಗಿ ಕಣ್ಮುಂದೆ ಕಟ್ಟಿಕೊಟ್ಟ ಒಂದು ಅಪರೂಪದ ಪ್ರಯತ್ನವಾಗಿದೆ.

134 ಪುಟಗಳ ಈ ಪುಟ್ಟ ಪುಸ್ತಕದ ವೈಶಿಷ್ಟ್ಯವಿರುವುದು ಚರಿತ್ರೆಯ ಸತ್ಯವನ್ನ ಆಳವಾಗಿ ಶೋಧಿಸಿ ಅಲಕ್ಷಿಸಲ್ಪಟ್ಟ ಹಲವು ಜನಪರ ಚಳುವಳಿ ಮತ್ತು ಪ್ರಾಣ ಒತ್ತೆಯಿಟ್ಟು ಹೋರಾಡಿದ ಹಲವು ಹೋರಾಟಗಾರರನ್ನು ಮತ್ತೆ ಜೀವಂತಗೊಳಿಸಿದ್ದು.

ಮೊದಲ ಲೇಖನ "ಸ್ವಾತಂತ್ರ್ಯ ಚಳುವಳಿ ಮತ್ತು ಉತ್ತರಕನ್ನಡದ ರೈತ ಹೋರಾಟ" ತನ್ನ ವಿಶಿಷ್ಟ ವಿವರಗಳಿಂದ ಗಮನಸೆಳೆಯುತ್ತದೆ.

"ಭಾರತದ ರಾಷ್ಟ್ರೀಯ ಚಳುವಳಿಯ ಇತಿಹಾಸ ಬರೆದವರಾಗಲೀ ಈ ಜಿಲ್ಲೆಯ ರಾಷ್ಟೀಯ ಚಳುವಳಿಯ ಇತಿಹಾಸ ದಾಖಲಿಸಿದವರಾಗಲೀ, ಆ ಕಾಲದಲ್ಲಿ ನಡೆದ ರೈತ ಚಳುವಳಿಗಳನ್ನು ಸ್ವಾತಂತ್ರ್ಯ ಚಳುವಳಿಯ ಭಾಗವೆಂದು ಪರಿಗಣಿಸಲಿಲ್ಲ. .... ಆದರೆ ಕಳೆದ ಶತಮಾನದಲ್ಲಿ ಸುಮಾರು 120ಕ್ಕೂ ಹೆಚ್ಚು ರೈತ ಹೋರಾಟಗಳು ನಡೆದ ಬಗ್ಗೆ ವಿವರಗಳು ಸಿಗುತ್ತಿದ್ದರೂ ಇವೆಲ್ಲವೂ ಏಕಕಾಲದಲ್ಲಿ ಭೂಮಾಲಿಕರ ಮತ್ತು ಬ್ರಿಟಿಶರ ವಿರುದ್ಧವಿದ್ದರೂ ಅದರ ದಾಖಲೆ ಇಲ್ಲ" ವೆನ್ನುತ್ತ ಲೇಖಕರು ಜಿಲ್ಲೆಯ ರೈತ ಹೋರಾಟದ ಕತ್ತಲೆಯ ಕತೆಯನ್ನ ಬೆಳಕಿಗೆ ತರಲು ಪ್ರಾರಂಭಿಸುತ್ತಾರೆ. ಇಡೀ ದೇಶಮಟ್ಟದಲ್ಲಿ ಘಟಿಸಿದ ರೈತ ಹೋರಾಟದ ಇತಿಹಾಸವನ್ನ ಮತ್ತೊಮ್ಮೆ ನೆನಪಿಸುತ್ತ 1930 ರಷ್ಟು ಹಿಂದೆ-ಯೇ ಉ. ಕ. ಜಿಲ್ಲೆ ರೈತ ಹೋರಾಟಕ್ಕೆ ಧುಮುಕಿದ ಕಡತವನ್ನು ತೆರೆಯುತ್ತಾರೆ.



"ಉತ್ತರಕನ್ನಡ ಜಿಲ್ಲೆಯಲ್ಲಿ ಎರಡು ಮಹಾಕಾವ್ಯಗಳು ಸೃಷ್ಟಿಯಾಗಿದ್ದವು, ಒಂದು ಸ್ವಾತಂತ್ರ್ಯ ಚಳುವಳಿಯಾದರೆ ಇನ್ನೊಂದು ರೈತ ಚಳುವಳಿ" ಎಂದು ಉದ್ಗರಿಸಿದ್ದ ಆರ್.ವಿ. ಭಂಡಾರಿಯವರನ್ನು ನೆನಪಿಸುತ್ತ ಅವೆರಡೂ ಬೇರೆಯಲ್ಲ ಒಂದೇ ಕಾವ್ಯದ ಎರಡು ಸಂಪುಟಗಳು ಎಂದು ನುಡಿಯುತ್ತಾರೆ ಲೇಖಕರು.

1937 ರಲ್ಲಿ ಕಾರವಾರದ ಉಳಗಾ ಹಳಗಾ ಗ್ರಾಮಗಳಲ್ಲಿ ಸೈಯದ್ ಹೈದರ್, ಅಬ್ದುಲ ಹಮೀದ್, ಪುರುಷೋತ್ತಮ ನಾಯ್ಕ, ಮುಂತಾದವರ ನಾಯಕತ್ವದಲ್ಲಿ ಪ್ರಾರಂಭವಾದ ರೈತಚಳುವಳಿ ಸ್ವಾತಂತ್ರ್ಯ ಚಳುವಳಿಗೆ ಸಮಾನಾಂತರವಾಗಿ ಸಾಗಿದ ಕಥೆ ಮೈ ನವಿರೇಳಿಸುವಂಥದ್ದು. ಕಮ್ಯುನಿಸ್ಟ್ ನಾಯಕರ ಮಾರ್ಗದರ್ಶನದಲ್ಲಿ ಚುರುಕುಗೊಂಡ ಹೋರಾಟ ಜಿಲ್ಲಾದ್ಯಂತ ವ್ಯಾಪಿಸುತ್ತದೆ. ಬ್ರಿಟಿಶರ ಮತ್ತು ಭೂಮಾಲಿಕರ ವಿರುದ್ಧ ಹೊತ್ತಿಕೊಂಡ ಹೋರಾಟ ಚಳುವಳಿಯ ಮುಂಚೂಣಿಯಲ್ಲಿರುವ ಹಲವು ಜನರನ್ನು ಅಸಹನೀಯ ಸಂಕಟಗಳಿಗೆ ಈಡುಮಾಡುತ್ತದೆ. ಬಂಧನ ಗಡಿಪಾರು ಮತ್ತು ಸಾವುನೋವುಗಳ ದಾರುಣ ಘಟನೆಗಳ ಸಾಲು ಸಾಲೇ ದಾಖಲಾಗತೊಡಗುತ್ತದೆ. ಪ್ರಸ್ತುತ ಲೇಖನ ಸರಿಸುಮಾರು ಒಂದುವರೆ ದಶಕದ ಹೋರಾಟದ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತನ್ನೊಳಗೆ ಹುದುಗಿಸಿ ಕೊಂಡಿದೆ. ಇದೇ ವಿಷಯವನ್ನು ಲೇಖಕರು ಇನ್ನೂ ವಿಸ್ತೃತವಾಗಿ ಒಂದು ಪುಸ್ತಕರೂಪದಲ್ಲಿ ತಂದರೆ ಜಿಲ್ಲೆಯ ಇತಿಹಾಸಕ್ಕೆ ಮಹತ್ವಪೂರ್ಣ ಕೊಡುಗೆಯಾಗ ಬಹುದಾಗಿದೆ.

ಈ ಲೇಖನವಲ್ಲದೇ ಇನ್ನೂ 11 ಲೇಖನಗಳು ಈ ಕೃತಿಯಲ್ಲಿವೆ. ದಿನಕರ **ದೇಸಾಯಿಯವರ ಜನಪರ ಹೋರಾಟಗಳು, ಗಿರಿ ಪಿಕಳೆ, ದಿನಕರ ದೇಸಾಯಿ ಮತ್ತು ಶಿಕ್ಷಣ ಚಳುವಳಿ,** ಲೇಖನಗಳು ಜಿಲ್ಲೆಯ ಇತ್ತೀಚಿನ ಇತಿಹಾಸವನ್ನು ಹೊಸ ದೃಷ್ಟಿಯಲ್ಲಿ ಚಿತ್ರಿಸಿದ್ದಾರೆ, ಇನ್ನುಳಿದ 9 ಲೇಖನಗಳು ಸಾಹಿತ್ಯ ಸಂಸ್ಕೃತಿ ಮತ್ತು ವಿವಿಧ ಸಾಧಕರ ವ್ಯಕ್ತಿಚಿತ್ರಣಗಳಾಗಿವೆ.

ಕೃತಿಯ ಶೀಷಿಕೆಯ "ಹಸಿವಿನ ಹಾಡು ಪಾಡು" ನಮ್ಮ ದೇಶದ ಜ್ವಲಂತ ಸಮಸ್ಯೆಯಾದ ಹಸಿವನ್ನು ಕುರಿತು ತಲಸ್ಪರ್ಶಿಯಾಗಿ ಧ್ಯಾನಿಸಿದ ಮನಕಲಕುವ ಲೇಖನವಾಗಿ ಗಮನಸೆಳೆಯುತ್ತದೆ.

"ಹಸಿವಿನ ಸಾಮ್ರಾಜ್ಯದ ನೂರಾರು ಚಿತ್ರಗಳು-- ನೋವಿನಚಿತ್ರ;ಅವಮಾನದ ಚಿತ್ರ; ಅಸಹಾಯಕತೆಯ ಚಿತ್ರ; ನರಳಾಟದ ಚಿತ್ರ; ದೈನ್ಯತೆಯ ಚಿತ್ರ; ನಿರಾಶೆಯ ಚಿತ್ರ; ಸಿಟ್ಟಿನ ಚಿತ್ರ; ಕ್ರೌರ್ಯದ ಚಿತ್ರ; ಪ್ರತಿಭಟನೆಯ ಚಿತ್ರ; ಬೇಡವೆಂದರೂ ಎದೆಯ ಗೂಡಿನಲ್ಲಿ ಮೂಡುತ್ತಲೇ ಇರುತ್ತವೆ."

ಎಂದು ಕಾವ್ಯಾತ್ಮಕವಾಗಿ ಆತ್ಮಕತೆ-ಯಂತೆ ಪ್ರಾರಂಭವಾಗುವ ಲೇಖನ, ಹಸಿವು ಎಂಬ ಸಮಸ್ಯೆಯ ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ ಮತ್ತು ರಾಜಕೀಯ ಆಯಾಮಗಳನ್ನು ಗಂಭೀರವಾಗಿ ಶೋಧಿಸ ತೊಡಗುವ ಶ್ರೀಮದ್ಗಂಭೀರ ಲೇಖನವಾಗಿದೆ. ಇದು ಹಸಿವನ್ನು ಕೇಂದ್ರ ಆಶಯವನ್ನಾಗಿಸಿ "ಒಡಲ ಬೆಂಕಿ" ಎಂಬ ಸಂಪಾದಿತ ಕವನ ಸಂಕಲನದ ಸುದೀರ್ಘ ಸಂಪಾದಕೀಯವಾಗಿದೆ.

ದೊಡ್ಡೋರ ಮಕ್ಕೋಗೆ ಬೆಲ್ಲ ಬಾಳೆಹಣ್ಣು
ಏನೂ ಇಲ್ಲದ ಬಡವೇಯ ಮಕ್ಕೋಗೆ
ಹೆತ್ತಬ್ಬೆ ಬತ್ತ ಮೊಲೆ ಹಾಲು॥

ಜನಪದ ಸಾಹಿತ್ಯದಿಂದ ಆಧುನಿಕ ಸಾಹಿತ್ಯದ ವರೆಗಿನ ಹಸಿವು ಕೇಂದ್ರಿತ ಕವನಗಳ ಸೂಕ್ತ ಉದಾಹರಣೆಯೊಂದಿಗೆ ಸಾಗುವ ಅಧ್ಯಯನಪೂರ್ಣ ಲೇಖನ ಕನ್ನಡ ಸಾಹಿತ್ಯಕ್ಕೆ ಒಂದು ಒಳ್ಳೆಯ ಕೊಡುಗೆ ಎಂದರೆ ಅತಿಶಯೋಕ್ತಿಯಲ್ಲ.

ದಕ್ಷಿಣ ಆಫ್ರಿಕಾದ ಪ್ರಿಟೋರಿಯಾ ದಲ್ಲಿ 2010 ರಲ್ಲಿ ನಡೆದ ಅಂತಾರಾಷ್ಟ್ರೀಯ ವಿದ್ಯಾರ್ಥಿ ಯುವಜನೋತ್ಸವದಲ್ಲಿ ಭಾರತವನ್ನು ಪ್ರತಿನಿಧಿಸಿದವರಲ್ಲಿ ಲೇಖ-ಕ ವಿಠ್ಠಲ ಭಂಡಾರಿ ಒಬ್ಬರು. ಅವರ ಪ್ರವಾಸಾನುಭವ "ಅಂತಾರಾಷ್ಟ್ರೀಯ ಉತ್ಸವಕ್ಕೆ ಕಳೆತಂದ ಜಾನಪದ ಕುಣಿತ" ಲೇಖನದಲ್ಲಿ ಹರಳು ಗಟ್ಟಿದೆ. ಆಫ್ರಿಕಾ ಖಂಡದ ವಿವಿಧ ದೇಶಗಳ ಶೋಷಿತ ನಿಗ್ರೋ ಜನಾಂಗಗಳನ್ನು ಅವರ ಜಾನಪದ ಹಾಡು ನೃತ್ಯಗಳ ಮೂಲಕ ಜಗತ್ತಿಗೆ ಪರಿಚಯಿಸಿದ ಆ ಉತ್ಸವ ಯಶಸ್ವೀ ಸಂಘಟನೆಯ ವಿವರಗಳು ಪ್ರಸ್ತುತ ಲೇಖನದಲ್ಲಿ ಮೂಡಿವೆ.

ಇನ್ನೊಂದು ಪ್ರಮುಖ ಲೇಖನ "ಒಕ್ಕೂಟ ವ್ಯವಸ್ಥೆ ಮತ್ತು ಪ್ರಾದೇಶಿಕ ಪಕ್ಷಗಳು" ದೇಶಾದ್ಯಂತ ಹುಟ್ಟಿ ಸಾಯುವ ಕ್ರಿಯೆಯಲ್ಲಿ ನಿರತವಾದ ಪ್ರಾದೇಶಿಕ ಪಕ್ಷಗಳ ಶಕ್ತಿ ದೌರ್ಬಲ್ಯ, ಸಾಧನೆ ವೈಫಲ್ಯಗಳನ್ನ ಶೋಧಿಸುವ ಒಂದು ಪ್ರಯತ್ನ ವಾಗಿದೆ. ರಾಜ್ಯದ ಅಧಿಕಾರ ಮತ್ತು ಕೇಂದ್ರದ ಪ್ರಭುತ್ವಗಳ ನಡುವೆ ನಿಜವಾದ ಜನತಂತ್ರವನ್ನು ಅನ್ವೇಶಿಸುವ, ಮತ್ತು ಜನತಂತ್ರದ ಉಳಿವಿನಲ್ಲಿ ಪ್ರಾದೇಶಿಕ ಪಕ್ಷದ ಪಾತ್ರದ ಬಗೆಗೆ ತಮ್ಮದೇ ಆದ ವಾದವನ್ನು ಮಂಡಿಸುವ ಪ್ರಸ್ತುತ ಲೇಖನ ಒಂದು ಆರೋಗ್ಯಕರ ವಾಗ್ವಾದವನ್ನೇ ಹುಟ್ಟು ಹಾಕುತ್ತದೆ.

ಪುಸ್ತಕದ ಮೂರನೆಯ ಭಾಗ ಉ.ಕ. ಜಿಲ್ಲೆಯ ಜನಪದ ಯಕ್ಷಗಾನ ಮತ್ತು ಸಾಮಾಜಿಕ ಹೋರಾಟ ಕ್ಷೇತ್ರಗಳ, ಅಪ್ರತಿಮ ಸಾಧಕರ ವ್ಯಕ್ತಿಚಿತ್ರಣಕ್ಕೆ ಮೀಸಲಾಗಿದೆ. ಜಿಲ್ಲೆಯೊಳಗಿದ್ದುಕೊಂಡೇ ತಮ್ಮ ತಮ್ಮ ಕ್ಷೇತ್ರದಲ್ಲಿ ಅಸಾಮಾನ್ಯ ಸಾಧನೆ ಗೈದ ಡಾ॥ ಎಲ್.ಆರ್. ಹೆಗಡೆ, ಯಕ್ಷ ಕಲಾ ಸಾ ಧಕ ಶಂಭೂ ಹೆಗಡೆ, ಮತ್ತು ಸಾಮಾಜಿಕ ಸಾಧಕ ಕಾಮ್ರೇಡ್ ಗಿರಿ ಪಿಕಳೆ, ಈ ಮೂವರೂ ಇಂದು ನಮ್ಮೊಂದಿಗಿಲ್ಲ. ಅವರ ವೈವಿಧ್ಯಮಯ ಸಾಧನೆಯ ಕೊಡುಗೆ ಇಡೀ ಕನ್ನಡ ಮಣ್ಣಿಗೆ ಸಂದಿದೆ. ಮೂರೂ ವ್ಯಕ್ತಿಚಿತ್ರಗಳು ಆತ್ಮೀಯವಾಗಿ ಮೂಡಿ ಬಂದಿವೆ.

ಯುವ ಉತ್ಸಾಹಿ ವಿಠ್ಠಲ್ ಭಂಡಾರಿ ಯವರ ಪ್ರಸ್ತುತ ಕೃತಿ ಭವಿಷ್ಯದ ಜಿಲ್ಲೆಯ ಒಬ್ಬ ಸಮರ್ಥ ಬರಹಗಾರರೊಬ್ಬರನ್ನ ಪರಿಚಯಿಸಿದೆ. ಇನ್ನಷ್ಟು ರಚನೆಗಳನ್ನ ಅವರಿಂದ ನಿರೀಕ್ಷಿಸಬಹುದಾಗಿದೆ.

ಹಸಿವಿನ ಹಾಡು ಪಾಡು [ಲೇಖನಗಳು]
ಲೇಖಕ -- ಡಾ॥- ವಿಠ್ಠಲ್ ಭಂಢಾರಿ ಪ್ರೇಜ್ಞ ಪ್ರಕಾಶನ ಬೆಂಗಳೂರು
(ಪುಟ 146 ಬೆಲೆ ರೂ 100)

ಸಂಪಾದಕೀಯ

ಬಡ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಪ್ರಯತ್ನವನ್ನು ಬಲವಾಗಿ ವಿರೋಧಿಸಬೇಕು

ಪ್ರತಿಸಲದಂತೆ ಈ ಸಲವೂ ಮಳೆಗಾಲ ಆರಂಭವಾಗುತ್ತಿದ್ದಂತೆ ಬಗರ್ ಹುಕುಂ ಸಾಗುವಳಿ ತೆರವುಗೊಳಿಸಲು ಅರಣ್ಯ ಮತ್ತು ಕಂದಾಯ ಇಲಾಖೆಗಳು ಕಾರ್ಯೋನ್ಮುಖವಾಗಿವೆ. ಮಳೆ ಬೀಳಲಾರಂಭಿಸುತ್ತಿದ್ದಂತೆ ಅರಣ್ಯ ಇಲಾಖೆಯವರು ಸಸಿ ನೆಡುವ ಕಾರ್ಯಕ್ರಮವನ್ನು ಆರಂಭಿಸುತ್ತಾರೆ. ಆಗ ಅವರಿಗೆ ಬಡ ಭೂಹೀನರು ಕಷ್ಟಪಟ್ಟು ಹದಮಾಡಿದ ಭೂಮಿ ಮಾತ್ರ ಕಾಣುತ್ತದೆಯೇ ಹೊರತು ಶ್ರೀಮಂತರು ಒತ್ತುವರಿ ಮಾಡಿದ ಭೂಮಿಯಲ್ಲ. ಬಡವರು ಸಾಗುವಳಿ ಮಾಡುತ್ತಿರುವ ಭೂಮಿಗೆ ನುಗ್ಗುವ ಇವರು ಬಿತ್ತಿದ ಬೀಜ, ಬೆಳೆದು ನಿಂತ ಪೈರನ್ನೆಲ್ಲಾ ನಾಶಮಾಡಿ ಅರಣ್ಯ ಸಸಿಗಳನ್ನು ನಾಟಿ ಮಾಡುತ್ತಾರೆ. ಅದನ್ನು ತಡೆಯಲು ಬರುವ ಬಡಪಾಯಿ ಬಗರ್ ಹುಕುಂ ಸಾಗುವಳಿದಾರರ ಮೇಲೆ ಹಲ್ಲೆ ಮಾಡುತ್ತಾರೆ. ಅವರ ಕೃಷಿ ಸಲಕರಣೆಗಳನ್ನು, ಎತ್ತು ಚಕ್ಕಡಿ ಮೊದಲಾದವುಗಳನ್ನು ವಶಪಡಿಸಿಕೊಳ್ಳುತ್ತಾರೆ. ಆದರೆ ಎಷ್ಟೋ ವರ್ಷಗಳಿಂದ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ತೋಟದ ಬೆಳೆಗಳನ್ನು ಬೆಳೆಯುತ್ತಾ ಸಾಕಷ್ಟು ಲಾಭಗಳಿಸುತ್ತಿರುವ ಶ್ರೀಮಂತರ ಅಕ್ರಮ ಸಾಗುವಳಿ ತೆರವುಗೊಳಿಸಲು ಅರಣ್ಯ ಇಲಾಖೆಯವರೇ ಆಗಲಿ, ಕಂದಾಯ ಇಲಾಖೆಯವರೇ ಆಗಲಿ ಮುಂದಾಗುವುದಿಲ್ಲ.

ಇತ್ತೀಚೆಗೆ ಈ ವಿಷಯದ ಕುರಿತು ಆಡಳಿತ ಪಕ್ಷ ಮತ್ತು ವಿಪಕ್ಷಗಳ ನಡುವೆ ಸ್ವಾರಸ್ಯಕರವಾದ ವಾದ ವಿವಾದ ನಡೆದಿರುವುದನ್ನು ರಾಜ್ಯದ ಜನತೆ ಗಮನಿಸಿದೆ. ಅರಣ್ಯ ಒತ್ತುವರಿ ಹೆಸರಿನಲ್ಲಿ ಸಾಗುವಳಿದಾರರಿಗೆ ನೋಟಿಸ್ ಕೊಟ್ಟು ಕಿರುಕುಳ ನೀಡಲಾಗುತ್ತಿದೆ ಎಂದು ಬಿಜೆಪಿ – ಕೆಜೆಪಿ ಶಾಸಕರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಆದರೆ ಇವರು ಅಧಿಕಾರದಲ್ಲಿದ್ದ ಈ ಹಿಂದಿನ ಅವಧಿಯಲ್ಲಿ ಅದನ್ನೇ ಮಾಡಿರುವುದನ್ನು ಜನ ಮರೆತು ಬಿಟ್ಟಿರಬಹುದೆಂದು ಭಾವಿಸುತ್ತಿದ್ದಂತೆ ಕಾಣುತ್ತದೆ. ಸುಪ್ರೀಂ ಕೋರ್ಟ್ ಆದೇಶದ ಹಿನ್ನಲೆಯಲ್ಲಿ ಕಾನೂನಿನಂತೆ ಅರಣ್ಯ ಒತ್ತುವರಿ ತೆರವುಗೊಳಿಸಲಾಗುತ್ತಿದೆಯೇ ಹೊರತು ಯಾವುದೇ ಕೃಷಿಕರಿಗೆ ಅನಗತ್ಯ ತೊಂದರೆ ನೀಡಲಾಗುತ್ತಿಲ್ಲ ಎಂದು ಅರಣ್ಯ ಮಂತ್ರಿ ರಮಾನಾಥ ರೈ ವಿಪಕ್ಷಗಳಿಗೆ ಉತ್ತರ ಕೊಟ್ಟಿದ್ದಾರೆ. ಇದೇ ರೀತಿಯ ಉತ್ತರವನ್ನು 1980 ರಿಂದ ಅರಣ್ಯ ಮಂತ್ರಿಗಳಾದವರೆಲ್ಲರೂ ಪಕ್ಷಬೇದವಿಲ್ಲದೆ, ನೀಡುತ್ತಾ ಬಂದಿದ್ದಾರೆ. ಈ ಅವಧಿಯಲ್ಲಿ ಲಕ್ಷಾಂತರ ಬಡ ಬಗರ್ ಹುಕುಂ ಸಾಗುವಳಿದಾರರನ್ನು ಅವರ ಭೂಮಿಯಿಂದ ಒಕ್ಕಲೆಬ್ಬಿಸಿ ಅವರನ್ನು ಬೀದಿಪಾಲು ಮಾಡಿದ್ದಾರೆ.


ಈ ನಡುವೆ ಎಡಪಕ್ಷಗಳ ಒತ್ತಾಯದಿಂದಾಗಿ, 2006 ರ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಗೆ ಬಂದಿದೆ. ಈ ಅವಕಾಶವನ್ನು ಬಳಸಿಕೊಂಡು ಕರ್ನಾಟಕದಲ್ಲಿ ಆದಿವಾಸಿ ಗಿರಿಜನರಿಗೆ ಮತ್ತು ಇತರ ಭೂಹೀನ ಬಡವರಿಗೆ ಭೂಮಿಯ ಒಡೆತನ ನೀಡಲು ಹಿಂದಿನ ಬಿಜೆಪಿ ಸರ್ಕಾರ ಯಾವುದೇ ಗಂಭೀರ ಪ್ರಯತ್ನ ಮಾಡಲಿಲ್ಲ. ಇತರ ಅನೇಕ ರಾಜ್ಯಗಳಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಗಿದ್ದರೂ ಕರ್ನಾಟಕದಲ್ಲಿ ಅದು ಜಾರಿಗೆ ಬರಲಿಲ್ಲ. ಕಾಯ್ದೆಯನ್ನು ಬಳಸಿಕೊಂಡು ಆದಷ್ಟು ಹೆಚ್ಚು ಅರ್ಜಿದಾರರಿಗೆ ಅವರ ಲಾಭ ಸಿಗುವಂತೆ ನೋಡಿಕೊಳ್ಳುವುದು ರಾಜ್ಯ ಸರ್ಕಾರದ ಆದ್ಯತೆ ಆಗಬೇಕಾಗಿತ್ತು.

ಅರಣ್ಯವನ್ನು ಉಳಿಸಿ ಬೆಳೆಸುವುದು ಅಗತ್ಯವಿದೆ. ಮರಗಳಿದ್ದರೆ ಮಾತ್ರ ಮಳೆ ಬರುತ್ತದೆ, ಮರಗಳಿಲ್ಲದೆ ಹೋದರೆ ಮಳೆ ಹೋಗಿಬಿಡುತ್ತದೆ ಎಂಬ ಮಾತು ಪೂರ್ಣ ಸತ್ಯವಲ್ಲ. ಹಿಂದೆ ಭೂಮಿಯ ಮೇಲೆಲ್ಲಾ ಅರಣ್ಯ ಇದ್ದಾಗಲೂ, ಎಲ್ಲಾಕಡೆ ಬಾರೀ ದೊಡ್ಡ ಮರಗಳು ಇದ್ದಾಗಲೂ ಮಳೆ ಹೋಗುತಿತ್ತು, ಬರಗಾಲ ಬರುತಿತ್ತು, ಆದರೆ ಹೆಚ್ಚೆಚ್ಚು ಮರಗಳು ಇರುವುದರಿಂದ ಪರಿಸರ ಶುದ್ಧಗೊಳ್ಳುತ್ತದೆ, ಜೀವ ಸಂಕುಲಗಳಿಗೆ ಆರೋಗ್ಯಕರವಾದ ಪರಿಸರ ಲಭ್ಯವಾಗುತ್ತದೆ. ಹೆಚ್ಚೆಚ್ಚು ಮರಗಳು ಇದ್ದರೆ ಮಳೆಯ ನೀರು ಮರಗಳ ಬೇರುಗಳಗುಂಟ ಭೂಮಿಯೊಳಗೆ ಇಳಿದು ಅಂತರ್ಜಲ ಮಟ್ಟನ್ನು ಹಿಗ್ಗಿಸುತ್ತದೆ. ಆದ್ದರಿಂದ ಅರಣ್ಯ ಭೂಮಿ ಸಾಗುವಳಿ ಭೂಮಿಯಲ್ಲಿ ಎಕರೆಗೆ ಇಂತಿಷ್ಟು ಮರಗಳನ್ನು ಬೆಳೆಸಬೇಕೆಂಬ ಷರತ್ತನ್ನು ವಿಧಿಸಬಹುದು. ಆದರೆ ಅರಣ್ಯ ರಕ್ಷಣೆಯ ಹೆಸರಿನಲ್ಲಿ ಬಡ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಕ್ರಮವನ್ನು ಬಲವಾಗಿ ವಿರೋಧಿಸಬೇಕಾಗಿದೆ.

ಸುಪ್ರೀಂಕೋರ್ಟ್ ಆದೇಶ ಅನುಸರಿಸುವುದೇ ಆದರೆ ಜನರಿಗೆ ವಿಷ ಕೊಡುವುದು ಬಹಳ ಒಳ್ಳೆಯದು ಎಂಬ ಸಭಾಧ್ಯಕ್ಷ ಕಾಗೋಡು ತಿಮ್ಮಪ್ಪ ಹೇಳಿದ್ದು ಸರಿಯಾಗಿಯೇ ಇದೆ. ಹಿಂದೆ ಪ್ರಧಾನಿ ವಾಜಪೇಯಿ ಅವರು ಸುಪ್ರೀಂಕೋರ್ಟ್ ಆದೇಶ ಜಾರಿಮಾಡಬೇಕೆಂದು ರಾಜ್ಯಗಳಿಗೆ ಸುತ್ತೋಲೆ ಕಳುಹಿದಾಗ ಅದನ್ನು ಜಾರಿಗೊಳಿಸಲು ನಿರಾಕರಿಸಿದ್ದು ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಮಾತ್ರ.

ಪುಟ 4 ಕ್ಕೆ

ಗೌರವಾನ್ವಿತ ಸಭಾಧ್ಯಕ್ಷರು ಸದನದ ಗೌರವ ಕಾಪಾಡುವರೇ?



ಮೊದಲ ವಿಧಾನಸಭಾ ಅಧಿವೇಶನ ಆರಂಭಗೊಂಡಿದೆ. ನೂತನ ಶಾಸಕರ ಪ್ರಮಾಣ ವಚನ, ಸಭಾಧ್ಯಕ್ಷರ ಆಯ್ಕೆ, ಅಧಿಕೃತ ವಿರೋಧ ಪಕ್ಷದ ನಾಯಕನ ಘೋಷಣೆ, ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರ ಭಾಷಣ ಇತ್ಯಾದಿ ನಡೆದಿವೆ. ಹೊಸ ಸರಕಾರ, ಹೊಸ ಸನ್ನಿವೇಶ ಒಂದಿಷ್ಟು ಕಾದು ನೋಡುವ ಅನಿಸಿಕೆ ಆರಂಭದಲ್ಲಿ ಇರುವುದು ಸಹಜ. ಹಿಂದಿನ ಬಿಜೆಪಿ ಆಡಳಿತದ ಅವಧಿಯ ಅರಾಜಕ, ಪ್ರಜಾಪ್ರಭುತ್ವ ವಿರೋಧಿ ಕಲಾಪಗಳು, ಕಾರ್ಯವೈಖರಿ, ಸಭಾಧ್ಯಕ್ಷರ ನಡವಳಿಕೆಗಳನ್ನು ನೆನೆದರೆ ಸಾಕು ಅಸಹ್ಯವೆನಿಸುತ್ತದೆ. ಈ ಎಲ್ಲಾ ಕಾರಣಗಳಿಂದಲೇ ಸಿದ್ಧರಾಮಯ್ಯನವರ ಸರಕಾರದ ಬಗ್ಗೆ ಜನರಿಗೆ ಅಪಾರ ನಿರೀಕ್ಷೆಗಳಿರುವುದು. ತಮ್ಮದು ಹಿಂದಿಗಿಂತ ಭಿನ್ನವಾಗಿರುತ್ತದೆ ಎಂದು ತೋರಿಸಲು ಕಸರತ್ತೇನೋ ಆರಂಭಗೊಂಡಿದೆ. ಆದರೆ ಕಾಂಗ್ರೆಸ್‌ನ ಪರಿಪಾಟ ಗೊತ್ತಿರುವವರಿಗೆ ಅನುಮಾನವಂತೂ ಇದ್ದೇ ಇರಲಿದೆ.

ಈ ಅಧಿವೇಶನದ ಮುಖ್ಯ ಸಂಗತಿ ವಿಧಾನಸಭಾಧ್ಯಕ್ಷರನ್ನಾಗಿ ಹಿರಿಯ ಕಾಂಗ್ರೆಸ್ಸಿಗ ಕಾಗೋಡು ತಿಮ್ಮಪ್ಪನವರನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದು. ಸ್ಪರ್ಧೆ ಮಾಡಲು ವಿರೋಧ ಪಕ್ಷಗಳಲ್ಲಿ ಬಹುಮತದ ಬಲವಿಲ್ಲ ಎಂಬುದೂ ಒಂದು ಕಾರಣವಾದರೂ ವಿರೋಧ ಪಕ್ಷಗಳು ಇದನ್ನೇ ರಂಪಾಟ ಮಾಡಿ ಇರುಸು ಮುರುಸು ಮಾಡಿಕೊಳ್ಳಲು ಸಿದ್ಧವಿರಲಿಲ್ಲ. ಜೊತೆಗೆ ಕಾಗೋಡುರವರ ಬಗೆಗಿನ ಗೌರವ ಭಾವನೆಯೂ. ಆರಂಭದಲ್ಲಿ ಎಲ್ಲರಂತೆ ಮಂತ್ರಿಯಾಗಿ ಅಧಿಕಾರ ಚಲಾಯಿಸುತ್ತಾ ಇರಬೇಕೆಂಬ ಇಂಗಿತವಿತ್ತಾದರೂ ಅದಾಗದಿರುವ ಸಾಧ್ಯತೆಗಳು ಗೋಚರವಾದಾಗ ಸಭಾಧ್ಯಕ್ಷರ ಸ್ಥಾನ ಒಪ್ಪಿದವರು. ಕಾಗೋಡು ಭೂ ಚಳುವಳಿಯಲ್ಲಿ ಭಾಗಿಯಾದ, ಲೋಹಿಯಾವಾದದ ಪ್ರಭಾವವೂ ಇರುವ, ಮೃದು ಸ್ವಭಾವದ ಹಿರಿಯನೆಂದು ಅವರನ್ನು ಸ್ಪೀಕರ್ ಸ್ಥಾನಕ್ಕೆ ತಂದುದು ಸ್ವಾಗತಾರ್ಹ.

ಸಭಾಧ್ಯಕ್ಷರ ಸ್ಥಾನ ಗೌರವಯುತವಾದುದು ನಿಜ. ಅದು ಪಕ್ಷಾತೀತವಾದುದು ಎಂದೆಲ್ಲಾ ಬಣ್ಣಿಸಲಾಗುವುದು ಒಂದು ಉತ್ಪ್ರೇಕ್ಷೆ. ಆದರೆ ಪಕ್ಷಾತೀತರಾಗಿರುವ ಉದಾಹರಣೆಗಳು ಕಾಣುವುದೇ ವಿರಳ. ಇತ್ತೀಚಿನ ದಿನಗಳಲ್ಲಿ ಅತ್ಯಂತ ನಿರ್ಣಾಯಕ ಸಂದರ್ಭಗಳು ಬಂದಾಗಲೆಲ್ಲಾ ಸಂವಿಧಾನದ ಎಲ್ಲೆಗಳನ್ನು ಮೀರಿ ಇವರು ಆಳುವ ಪಕ್ಷದ ನಿಲುವಿಗೆ ಬೆಂಬಲಿಸುವುದು, ಮತ ನೀಡಿ ಜೀವದಾನ ಮಾಡುವುದು ಸಾಮಾನ್ಯವಾಗುತ್ತದೆ. ಒಂದು ರೀತಿಯಲ್ಲಿ ಸಂವಿಧಾನಾತ್ಮಕ ಅವಕಾಶಗಳನ್ನು ಬಳಸಿಯೇ ಸಂವಿಧಾನ ವಿರೋಧಿ ಕೃತ್ಯಗಳನ್ನು ರಕ್ಷಣೆ ಮಾಡಲಾಗುತ್ತದೆ. ಕಳೆದ ವಿಧಾನ ಸಭೆಯ ಸ್ಪೀಕರ್ ಬೋಪಯ್ಯನವರು ತಾವಿರುವ ಉನ್ನತ ಸ್ಥಾನದ ಘನತೆಯನ್ನು ಮರೆತು ಸಂಘಪರಿವಾರದ ಸ್ವಯಂಸೇವಕನೆಂದೇ ವರ್ತಿಸಿದರು. ಆಳುವ ಬಿಜೆಪಿಯನ್ನು ರಕ್ಷಿಸಲು ಹಲವಾರು ಬಾರಿ ವಹಿಸಿದ ನಕಾರಾತ್ಮಕ ಪಾತ್ರ ಶಾಸನ ಸಭೆಯ ಇತಿಹಾಸದಲ್ಲೇ ಕಪ್ಪು ಚುಕ್ಕೆಯಾಯಿತು, ಕಳಂಕಿತವೆಂದು ಕುಖ್ಯಾತವಾಯಿತು. ಸುಪ್ರಿಂ ಕೋರ್ಟ್‌ನಿಂದ ಛೀ ಮಾರಿ ಹಾಕಿದರೂ ತಿದ್ದಿಕೊಳ್ಳಲಿಲ್ಲದಿದ್ದದ್ದು ಬ'ಂ ಡ' ತ' ನ' ಕ' ಸಾಕ್ಷಿಯಾಯಿತು.

ಈ ಹಿನ್ನೆಲೆಯಲ್ಲಿ ನೂತನ ಸಭಾಧ್ಯಕ್ಷರ ಪಾತ್ರದ ಕುರಿತು ಎಚ್ಚರದ ಕಣ್ಣುಗಳಿವೆ. ಪ್ರಜಾಪ್ರಭುತ್ವದ ಬಗ್ಗೆ ಕಡು ನಿರ್ಲಕ್ಷ್ಯವಿರುವ ಕಾಂಗ್ರೆಸ್, ಅದರಲ್ಲೂ ಉದಾರೀಕರಣದ ಈ ದಿನಗಳಲ್ಲಿ ಎಂತಹ ತಂತ್ರಗಳನ್ನು ಅನುಸರಿಸಲಿದೆ, ಆಗ ಸಭಾಧ್ಯಕ್ಷರ ಪಾತ್ರ ಹೇಗಿರುತ್ತದೆ ಎಂಬುದು ಕುತೂಹಲವಲ್ಲದ ಕುತೂಹಲವಾಗಿದೆ. ಇಂತಹ ಸ್ಥಿತಿಯಲ್ಲಿ ನೂತನ ಸಭಾಧ್ಯಕ್ಷರು ಸಂವಿಧಾನ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲಿ, ರಕ್ಷಿಸಲಿ, ಜನತೆಯ ಆಶಯಗಳಿಗೆ ಸ್ಪಂಧಿಸಲಿ ಎಂಬ ನಿರೀಕ್ಷೆ ನಮ್ಮದು.

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್
ಪಿ ಮಹಮ್ಮದ್



ಬಡ ಬಗರ್ ಹುಕುಂ...

ಪುಟ 3 ರಿಂದ

ಅರಣ್ಯ ಪ್ರದೇಶಗಳಿರುವ ಜನಪ್ರತಿನಿಧಿಗಳ ಸಭೆ ಕರೆದು ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಹಾಗೂ ಮನೆ ಕಟ್ಟಿಕೊಂಡು ವಾಸಮಾಡುತ್ತಿರುವವರ ಸಮಸ್ಯೆಯ ಬಗ್ಗೆ ವಿವರವಾಗಿ ಚರ್ಚಿಸಿ ಪರಿಹಾರ ಕಂಡು ಹಿಡಿಯಬೇಕೆಂದು ಸಭಾಧ್ಯಕ್ಷರು ನೀಡಿದ ಸೂಚನೆಯನ್ನು ಸರ್ಕಾರ ಒಪ್ಪಿಕೊಂಡಿರುವುದು ಸ್ವಾಗತಾರ್ಹವಾಗಿದೆ. ಆದರೆ ಕೇವಲ ಶಾಸಕರ ಸಭೆಯನ್ನು ಕರೆಯುವುದರಿಂದ ಪ್ರಯೋಜನವಾಗದು. ವಿಪಕ್ಷಗಳ ಶಾಸಕರು, ಸರ್ಕಾರಕ್ಕೆ ಕೆಟ್ಟ ಹೆಸರು ಬಂದಷ್ಟು ಬರಲಿ ಎಂದುಕೊಂಡು ಇದರಲ್ಲಿಯೂ ರಾಜಕೀಯ ಮಾಡಬಹುದು. ಆಡಳಿತರೂಢ ಪಕ್ಷದ ಆಗರ್ಭ ಶ್ರೀಮಂತ ಶಾಸಕರಿಗೆ ಬಡವರ ಕಷ್ಟ ಅರ್ಥ ಆಗದೇ ಇರಬಹುದು. ಬಗರ್ ಹುಕುಂ ಸಾಗುವಳಿದಾರರನ್ನು ಸಂಘಟಿಸಿ ಅವರ ಭೂಮಿಯ ಹಕ್ಕಿಗಾಗಿ ಹೋರಾಟಗಳನ್ನು ನಡೆಸುತ್ತಾ ಬಂದಿರುವ ರೈತ ಹಾಗೂ ಕೃಷಿಕೂಲಿಕಾರ ಸಂಘಟನೆಗಳ ಮತ್ತು ದಲಿತ ಹಾಗೂ ಆದಿವಾಸಿಗಳ ಸಂಘಟನೆಗಳ ಪ್ರತಿನಿಧಿಗಳನ್ನೂ ಸಭೆಗೆ ಕರೆದು ಚರ್ಚಿಸಲು ಸರ್ಕಾರ ತೀರ್ಮಾನಿಸುವುದು ಅಗತ್ಯವಾಗಿದೆ.

ತುಮಕೂರು : ಸಿಐಟಿಯುನ 43ನೇ ಸಂಸ್ಥಾಪನಾ ದಿನಾಚರಣೆ – ಧ್ವಜಾರೋಹಣ

ತುಮಕೂರು ತಾಲ್ಲೂಕು ಸಿಐಟಿಯು ವತಿಯಿಂದ ವಿವಿಧ ಬೇಡಿಕೆ ಈಡೇರಿಸುವಂತೆ ಹಾಗೂ ದೇಶ ವ್ಯಾಪಿ ಕಾರ್ಮಿಕ ವರ್ಗದಲ್ಲಿ ಜನ ಸಾಮಾನ್ಯರ ನಡುವೆ ಕರಪತ್ರ ಹಂಚಿ ಜಾಗೃತಿ ಉಂಟು ಮಾಡಲು ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ವಿನಾಯಕ ಸಿ.ಎನ್.ಸಿ ಸೆಂಟರ್ ಕಾರ್ಖಾನೆ ಮುಂಭಾಗ ಸೇರಿದಂತೆ ವಿವಿದ ಕಡೆ ಧ್ವಜಾರೋಹಣ ನೇರವೇರಿಸಿ ಚಾಲನೆ ನೀಡಲಾಯಿತು.

ಅಗತ್ಯ ವಸ್ತುಗಳ ಬೆಲೆ ಏರಿಕೆ ತಡೆಗಟ್ಟಲು, ಕನಿಷ್ಟ ಕೂಲಿ 10,000/-, ಕಾರ್ಮಿಕ ಕಾನೂನುಗಳ ಸಮರ್ಪಕ ಜಾರಿಗೆ, ಗುತ್ತಿಗೆ ಕಾರ್ಮಿಕರಿಗೂ ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ ಗುತ್ತಿಗೆ ಕಾರ್ಮಿಕರ [ನಿಯಂತ್ರಣ ಮತ್ತು ನಿಷೇದ ಕಾಯ್ದೆ 1970 ಕ್ಕೆ] ತಿದ್ದುಪಡಿಗಾಗಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಖಾತ್ರಿಯಾದ ಪಿಂಚಣಿಗಾಗಿ ಸಾಮಾಜಿಕ ಭದ್ರತೆ ಮಂಡಳಿಯ ಫಲಾನುಭವಿಗಳಿಗೆ ಅಗತ್ಯ ಸಾಮಾಜಿಕ ಭದ್ರತೆ ನಿಧಿ ಸ್ಥಾಪನೆಗಾಗಿ ಹಾಗೂ ಇತರೆ ಬೇಡಿಕೆ ಈಡೇರಿಸುವಂತೆ



ಬೇಡಿಕೆಗಳ ಸಲುವಾಗಿ ಹಾಗೂ ವಿನಾಯಕ ಸಿ.ಎನ್.ಸಿ ವರ್ಕ್‌ರ್ಸ್ ಯೂನಿಯನ್‌ನ ಸಿಐಟಿಯುಗೆ ಸೇರ್ಪಡೆಗೊಂಡಂತೆ ಸಿಐಟಿಯುನ ಧ್ವಜಾರೋಹಣ ಚಾಲನೆ ನೀಡಲಾಯಿತು.

ಸಿಐಟಿಯುನ ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್ ಮಾತನಾಡಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆಯಲು ಸಂಘ ಕಟ್ಟಿಕೊಂಡು ರಚನಾತ್ಮಕವಾಗಿ ಸಂವಿಧಾನಬದ್ಧವಾಗಿ ಶ್ರಮಿಕರ ನ್ಯಾಯೋಚಿತ ಬೇಡಿಕೆಗಳಿಗೆ ಹೋರಾಡುವುದು ಸಾಮಾಜದ ಅಭಿವೃದ್ಧಿಗೆ ಪೂರಕವಾದ ನಡೆ ಎಂದರು. ಆಡಳಿತ ಮಂಡಳಿಯು ಕಾರ್ಮಿಕರ ಸಮಸ್ಯೆಗಳನ್ನು ಕೂತು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವ ಜೊತೆಗೆ ಕೈಗಾರಿಕಾ ಶಾಂತಿ ಕಾಪಾಡಿಕೊಳ್ಳುವಲ್ಲಿ ಕಾರ್ಮಿಕ ವರ್ಗ ಆಡಳಿತ ಮಂಡಳಿಗಳು ಮುಂದಾಗಬೇಕೆಂದರು.

ಸಿಐಟಿಯುನ ಜಿಲ್ಲಾ ಉಪಾಧ್ಯಕ್ಷರಾದಂತಹ ಬಿ.ಉಮೇಶ್ ಮಾತನಾಡಿ ಕಾರ್ಮಿಕರು ತಮ್ಮ ಹಕ್ಕುಗಳ ಈಡೇರಿಕೆಗೆ ಸಂಘವನ್ನು ರಚಿಸಿಕೊಳ್ಳುವುದರ ಜೊತೆಗೆ ಸಮಾಜದ ಬದಲಾವಣೆಗೆ ಶ್ರಮಿಸಬೇಕೆಂದು ಕರೆ ನೀಡಿದರು. ಮತ್ತೊಬ್ಬ ಉಪಾಧ್ಯಕ್ಷರಾದ ಲೋಕೇಶ್, ಕಾರ್ಯದರ್ಶಿ ಎನ್. ಕೆ.ಸುಬ್ರಹ್ಮಣ್ಯ, ವಿನಾಯಕ ಸಿ.ಎನ್.ಸಿಯ ರಘು ಮುಂತಾದವರು ಮಾತನಾಡಿದರು. ಪ್ರಾರಂಭದಲ್ಲಿ ಸಿಐಟಿಯು ತಾಲ್ಲೂಕು ಕಾರ್ಯದರ್ಶಿ ಷಣ್ಮುಖಪ್ಪ ಸ್ವಾಗತಿಸಿ ನಿರೂಪಿಸಿದರು. ತಾಲ್ಲೂಕು ಅಧ್ಯಕ್ಷ ಪು-ಟ್ಟೇಗೌಡ ವಂದಿಸಿದರು.

ಈ ವಾರ ....

ಪುಟ 3 ರಿಂದ

*

ಗುಟ್ಕಾ ನಿಷೇಧ: ಬೇಕಿರುವುದು ಶಬ್ದ ಚಟಾಕಿಯಲ್ಲ, ರೈತರ ರಕ್ಷಣೆ

ಕರ್ನಾಟಕ ಸರಕಾರ ವಿಶ್ವ ತಂಬಾಕು ವಿರೋಧಿ ದಿನದಂದು ಗುಟ್ಕಾ ನಿಷೇಧಿಸಿದರ ಸುತ್ತ ಗಂಭೀರ ವಿವಾದ ನಡೆದಿದೆ. ಹೀಗೆ ದಿಢೀರನೇ ನಿಷೇಧಿಸಿದ್ದು ಸರಿಯೇ? ಇದರ ಪರಿಣಾಮ ಅಡಿಕೆ ಬೆಳೆಗಾರರ ಮೇಲೆ ಏನಾದೀತು, ಈಗಾಗಲೇ ಬಿಕ್ಕಟ್ಟಿನಲ್ಲಿರುವ ಅವರನ್ನು ರಕ್ಷಿಸುವ ಬಗೆ ಹೇಗೆ? ಸರಕಾರದ ಜವಾಬ್ದಾರಿ ಏನು ಎಂಬಿತ್ಯಾದಿ ಪ್ರಶ್ನೆಗಳು ಸರಿಯಾದವೇ.

ಹಾಗೆ ನೋಡಿದರೆ ಈ ವಿಷಯ ಹೊಸದೇನಲ್ಲ. ಹಿಂದೆಯೂ ಸಾಕಷ್ಟು ಚರ್ಚೆಯಾದದ್ದೇ. ಗುಟ್ಕಾ ನಿಷೇಧದ ಪ್ರಶ್ನೆ ಬಂದಾಗ ನಿಷೇಧ ಆಗದಂತೆ ತಡೆಯುವ ಹುನ್ನಾರಗಳು ಮಾರಾಟಗಾರರಿಂದ ನಡೆಯದ್ದೇನಲ್ಲ. ಆಗ ಅವರೂ ಸಹ ಅಡಿಕೆ ಬೆಳೆಗಾರರ ಪ್ರಶ್ನೆಯನ್ನು ಮುಂದೆ ಮಾಡಿ ನಿಷೇಧಗೊಳ್ಳದಂತೆ ಪ್ರಯತ್ನಿಸಿದ್ದೂ ಇದೆ. ಅದೇನೇ ಇದ್ದರೂ ಆರೋಗ್ಯದ ಮೇಲೆ ಅತ್ಯಂತ ಗಂಭೀರ ಪರಿಣಾಮ ಬೀರುತ್ತಿರುವ, ಕ್ಯಾನ್ಸರ್ ತಂದು ಜೀವಗಳನ್ನು ಬಲಿ ತೆಗೆದುಕೊಳ್ಳುವ ವಿಷಕಾರಿ ಗುಟ್ಕಾ ನಿಷೇಧವನ್ನು ವಿರೋಧಿಸುವುದು ಅರ್ಥಹೀನ.

ಗುಟ್ಕಾ ನಿಷೇಧಿಸುವುದರ ಬಗ್ಗೆ ಈ ಸರಕಾರಕ್ಕೆ ಅದೇನಾದರೂ ಒತ್ತಾಸೆ ಇತ್ತೇ ಗೊತ್ತಿಲ್ಲ. ಆದರೆ ಇದೇ 2013ರ ಏಪ್ರಿಲ್ 3ರಂದು ಸುಪ್ರಿಂಕೋರ್ಟ್ ನೀಡಿದ ತೀರ್ಪಿನಲ್ಲಿ ಗುಟ್ಕಾ, ಪಾನ್ ಮಸಾಲದ ಉತ್ಪಾದನೆ, ಶೇಖರಣೆ, ಮಾರಾಟವನ್ನು ನಿಷೇಧಿಸಿ ಕಟ್ಟಪ್ಪಣೆಯ ನಿರ್ದೇಶನ ನೀಡಿದೆ. ತೀರ್ಪಿನ ನಂತರದ ಆರು ವಾರಗಳೊಳಗೆ ರಾಜ್ಯ ಸರಕಾರಗಳು ನಿಷೇಧಿಸಿ ಕ್ರಮ ವಹಿಸದೇ ಹೋದಲ್ಲಿ ಇದು ನ್ಯಾಯಾಂಗ ನಿಂದನೆಯೆಂದು ಸ್ವ-ಯಂ ಪ್ರಕರಣವನ್ನು ದಾಖಲಿಸಿ ಮುಂದಿನ ಕಠಿಣ ಕ್ರಮ ಜರುಗಿಸುವುದಾಗಿ ಎಚ್ಚರಿಸಿದ ಒತ್ತಡವಿದ್ದದ್ದನ್ನು ಮರೆ ಮಾಚಬೇಕಿಲ್ಲ. ಈಗಾಗಲೇ 20ಕ್ಕೂ ಅಧಿಕ ರಾಜ್ಯಗಳು ನಿಷೇಧಿಸಿವೆ.

ಇದೇ ಹೊತ್ತಿನಲ್ಲಿ ಈ ನಿಷೇಧದಿಂದ ಅಡಿಕೆ ಬೆಳೆಗಾರರ ಮೇಲಿನ ಪರಿಣಾಮಗಳ ಬಗ್ಗೆ ಗಂಭೀರವಾಗಿ ಚಿಂತಿಸಿ ಅಗತ್ಯ ರಕ್ಷಣಾ ಕ್ರಮಗಳನ್ನು ಕೈಗೊಳ್ಳಲೇಬೇಕಿದೆ. ಲಕ್ಷಾಂತರ ಜನರ ಬದುಕಿನ ಪ್ರಶ್ನೆ ಅಡಗಿದೆ. ರಾಜ್ಯದಲ್ಲಿ 16 ಜಿಲ್ಲೆಗಳಲ್ಲಿ 1.84 ಲಕ್ಷ ಹೆ.ನಲ್ಲಿ 2.58 ಲಕ್ಷ ಟನ್ ಅಡಿಕೆ ಉತ್ಪಾದನೆಯಾಗುತ್ತಿರುವ ಸಮೀಕ್ಷೆ ಇದೆ. ಇದರಲ್ಲಿ ಗುಟ್ಕಾ ತಯಾರಿ-ಕೆಗೆ ಹೆಚ್ಚಿನ ಪಾಲು ಬಳಕೆಯಾಗುತ್ತಿತ್ತು ಎನ್ನುವುದರಿಂದಾಗಿ ಅಡಿಕೆ ಫಸಲಿಗೆ ಮತ್ತಷ್ಟು ಮಾರುಕಟ್ಟೆಯನ್ನು ಹುಡುಕಬೇಕಾದ ಮತ್ತು ಕಲ್ಪಿಸಬೇಕಾದ ಜರೂರು ಇದೆ. ಮೇಲಾಗಿ ಲಾಭದಾಯಕ ಬೆಲೆಯೂ ಸಿಗಬೇಕು. ಈ ಹಿನ್ನೆಲೆಯಲ್ಲಿ ಸರಕಾರ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯ ತುರ್ತು ಕ್ರಮ ವಹಿಸಿ ಆತಂಕ ನಿವಾರಿಸಬೇಕು. ಅಗತ್ಯವಾದಲ್ಲಿ ಬೆಂಬಲ ಬೆಲೆ ನೀಡಿ ಖರೀದಿಸಲು ಆವರ್ತ ನಿಧಿಯನ್ನು ಸ್ಥಾಪಿಸಬೇಕು. ಇದರ ಸಾಧಕ ಬಾಧಕಗಳು ಮತ್ತು ಪರ್ಯಾಯಗಳ ಬಗ್ಗೆ ಕೇಂದ್ರ ಕೃಷಿ ಕಾರ್ಯದರ್ಶಿ ಗೋರಖ್ ಸಿಂಗರ್ ರವರ ನೇತೃತ್ವದ ಆಯೋಗದ ವರದಿಯನ್ನು ಚರ್ಚಿಸಿ ಅನುಷ್ಠಾನಗೊಳಿಸಲು ಮುಂದಾಗಬೇಕು. ಈ ಕೂಡಲೇ ಆ ಭಾಗದ ಕೃಷಿಕರ, ಸಂಘಟನೆಗಳ ಮತ್ತು ಜನಪ್ರತಿನಿಧಿಗಳ ಸಭೆ ಕರೆದು ಸಮಾಲೋಚಿಸಿ ಕ್ರಮ ವಹಿಸಬೇಕು. ಕೇವಲ ಜನಪ್ರತಿನಿಧಿಗಳ ಸಭೆ ಮಾತ್ರವಲ್ಲ.

ಈ ಹಿಂದೆ ಅಧಿಕಾರದಲ್ಲಿದ್ದಾಗ ಏನೊಂದೂ ಮಾಡದ, ಚಿಂತಿಸದ ಬಿಜೆಪಿ ಈಗ ಶಬ್ದ ಚಟಾಕಿ ಹಾರಿಸುತ್ತಿರುವುದು ವಿಚಿತ್ರವಾದರೂ ರಂಜನೀಯ. ಹಾಗೆಯೇ 2009 ರಲ್ಲಿ ಸಿದ್ಧಗೊಂಡ ಸಿಂಗ್‌ರ ವರದಿಗೆ ಧೂಳು ಹಿಡಿಸುತ್ತಾ ಕಾಲ ತಳ್ಳಿದ ಕೇಂದ್ರ ಯುಪಿಎ–ಕಾಂಗ್ರೆಸ್‌ನದೂ.

ಯಾವುದೇ ಒಂದು ತಪ್ಪು ಪ್ರವೃತ್ತಿಯನ್ನು ನಿಷೇದ ಮಾಡುವುದರಿಂದ ನಿಯಂತ್ರಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನೂ ಮರೆಯಬಾರದು. ಅದು ಭೂಗತವಾಗುತ್ತದೆ. ಗುಟ್ಕಾ ಸೇವನೆಯಂತಹ ದುಷ್ಚಟಗಳ ವಿರುದ್ಧ ಪ್ರಬಲವಾದ ಜನಾಂದೋಲನವನ್ನು ನಡೆಸಬೇಕು. ಇಂತಹ ದುಷ್ಚಟಗಳಿಗೆ ಬಲಿಯಾದವರನ್ನು ಗುಣಮುಖರನ್ನಾಗಿಸಲು ಎಲ್ಲಾ ಮಾನವೀಯ ಕ್ರಮಗಳನ್ನು ಕೈಗೊಳ್ಳಬೇಕು.

*

ಪಿರಿಯಾಪಟ್ಟಣ: ಕಾಂಗ್ರೆಸ್‌ಗೆ ಪ್ರಯಾಸ, ಬಿಜೆಪಿಗೆ ವನವಾಸ!

ವಿಧಾನಸಭಾ ಚುನಾವಣಾ ಪ್ರಕ್ರಿಯೆಗಳ ನಡುವೆಯೇ ಹೃದಯಾಘಾತದಿಂದ ಬಿಜೆಪಿ ಅಭ್ಯರ್ಥಿಯ ಅಕಸ್ಮಿಕ ಮರಣದಿಂದಾಗಿ ಮುಂದೂಡಲ್ಪಟ್ಟಿದ್ದ ಪಿರಿಯಾಪಟ್ಟಣ ಕ್ಷೇತ್ರದ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್ ಗೆದ್ದಿದೆ. ಹಿಂದಿನ ತನ್ನ ಕ್ಷೇತ್ರವನ್ನು ಉಳಿಸಿಕೊಂಡಿದೆ. ಅದರ ಅಭ್ಯರ್ಥಿ ಕೆ.ವೆಂಕಟೇಶ್ ಜೆ.ಡಿ.ಎಸ್‌ನ ಅಭ್ಯರ್ಥಿಗಿಂತ ಕೇವಲ 2,088 ಮತಗಳನ್ನು ಹೆಚ್ಚಿಗೆ ಪಡೆದಿದ್ದಾರೆ. ಇದು ಕಾಂಗ್ರೆಸ್‌ಗೆ ಪ್ರಯಾಸಕರ ಗೆಲುವು.

ರಾಜ್ಯದಲ್ಲಿ ಸರಕಾರ ರಚನೆಯಾದ ಮೇಲೆ ನಡೆದ ಚುನಾವಣೆಯಿದು. ಮೈಸೂರು ಜಿಲ್ಲೆಯ ಈ ಕ್ಷೇತ್ರದಲ್ಲಿ ಗೆಲ್ಲುವುದು ಸಿದ್ಧರಾಮಯ್ಯನವರಿಗೆ ಪ್ರತಿಷ್ಠೆಯ ವಿಷಯವಾಗಿತ್ತಂತೆ. ಇವರಿಗೆ ಮುಖಭಂಗ ಮಾಡಲು ಸ್ವತಃ ಜೆಡಿಎಸ್‌ನ ಕುಮಾರಸ್ವಾಮಿಯೇ ಇಲ್ಲಿ ತಂಗಿ ಹಣಾಹಣಿ ನಡೆಸಿದರಂತೆ. ಒಟ್ಟಾರೆ ಅಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ಕೊನೆ ಕ್ಷಣದವರೆಗೂ ತೀವ್ರ ಸೆಣಸಾಟವಿತ್ತು.

ಇದರೊಂದಿಗೆ ಗಮನ ಸೆಳೆದ ಸಂಗತಿಯೆಂದರೆ, ಮೊನ್ನೆಯವರೆಗೂ ಅಧಿಕಾರದಲ್ಲಿದ್ದ ಬಿಜೆಪಿ ಇಲ್ಲಿ ಪಡೆದ ಮತಗಳು ಕೇವಲ 3731– ಠೇವಣಿ ಜಪ್ತಿ. ವಿಧಾನಸಭಾ ಚುನಾವಣೆಯಲ್ಲಿ ಜನ ನೀಡಿದ ಅಘಾತದಿಂದ ಚೇತರಿಸಿಕೊಳ್ಳುವ ಮೊದಲೇ ಮತ್ತೊಂದು ಅಘಾತಕರ ಏಟು! ಅಲ್ಲಿ ಸ್ಪರ್ದಿಸಿದ್ದ ಕೆಜೆಪಿ ಅಭ್ಯರ್ಥಿ ಚುನಾವಣಾ ಖಾವು ಏರುತ್ತಿರುವಂತೆಯೇ ಕಾಂಗ್ರೆಸ್ ಬೆಂಬಲಿಸಿ ಕಣದಿಂದ ನಿವೃತ್ತಿ ಘೋಷಿಸಿದ್ದು ಅದರೂ 827 ಮತ ಗಳಿಸಿದ್ದು ಜನಪ್ರಿಯತೆಗೆ ಸಾಕ್ಷಿ! ಬಿಎಸ್ಸಾರ್ ಕಾಂಗ್ರೆಸ್ ಗಳಿಸಿದ್ದು 5669. ಅದರದ್ದೂ ಡಿಪಾಸಿಟ್ ಜಪ್ತಿ. ಹೀಗೆ ಕಾಂಗ್ರೆಸ್‌ಗೆ ಮೈಸೂರಿನಲ್ಲಿ ಹಿಂದಿನಂತೆ 11 ಸ್ಥಾನದಲ್ಲಿ 8 ಪಡೆದಿದೆ. ಆದರೆ ಅದರ ಮುನ್ನಡೆ ಅಷ್ಟು ಸುಲಭವಿಲ್ಲ. ಜನತೆಯ ಪ್ರತಿ-ರೋಧ ಜೆಡಿಎಸ್ ಮೂಲಕ ವ್ಯಕ್ತಗೊಂಡಿದೆ ಎಂಬುದನ್ನು ಗಮನಿಸಬೇಕು.

ಜೂನ್ 6, 2013

ಜನಶಕ್ತಿ
ಕನ್ನಡ ವಾರಪತ್ರಿಕೆ

ಡೆಂಗೆ ಮತ್ತು ಸಾಂಕ್ರಾಮಿಕ ರೋಗಗಳ ಸ್ಫೋಟದ ಭೀತಿಯಲ್ಲಿ ರಾಜ್ಯ !!

ಇಲ್ಲಿ ಜನರ ಆರೋಗ್ಯ ಕಾಪಾಡುವ ಹೊಣೆ ಹೊತ್ತ ಬಿಬಿಎಂಪಿ ಮತ್ತು ವೈದ್ಯಕೀಯ ಇಲಾಖೆ ಅಧಿಕಾರಿಗಳು, ಜನ ಪ್ರತಿನಿಧಿಗಳು ತಮ್ಮ ದೈನಂದಿನ ಆಹಾರದಲ್ಲಿ ಏನು ಸೇವಿಸುತ್ತಿದ್ದಾರೆ ಎಂದು ಪರಿಶೀಲಿಸಬೇಕಾದ ಅಗತ್ಯ ಕಾಣುತ್ತಿದೆ. ಯಾಕೆಂದರೆ ಅವರಿಗೆ ಕಣ್ಣು, ಕಿವಿ, ಮೂಗು ಕೆಲಸ ಮಾಡುತ್ತಿರುವ ಲಕ್ಷಣವೇ ಕಾಣುತ್ತಿಲ್ಲ.

ಆರ್. ರಾಮಕೃಷ್ಣ

'ರಾಜ್ಯದಲ್ಲಿ 684 ಡೆಂಗೆ ಪ್ರಕರಣ', 'ಡೆಂಗೆ: ಚಿಕ್ಕೋಡಿಯಲ್ಲಿ ಯುವತಿ ಸಾವು', 'ಹಂದಿರೋಗ – ಮೊದಲ ವೈರಸ್ ಪತ್ತೆ', 'ಕೊಳಚೆ ನೀರು ನುಗ್ಗಿ ಪೀಣ್ಯದಲ್ಲಿ ವ್ಯಕ್ತಿ ಸಾವು', 'ರಾಣಿ ಬೆನ್ನೂರು:ಡೆಂಗೆ ಜ್ವರಕ್ಕೆ ಬಾಲಕಿ ಬಲಿ', 'ಮೈಸೂರು: ಐವರು ಶಂಕಿತ ಡೆಂಗೆ ರೋಗಿಗಳು ಆಸ್ಪತ್ರೆಗೆ', 'ಬೆಂಗಳೂರು ನ[illegible]ಲ್ಲಿ 76 ಡೆಂಗೆ ಪ್ರಕರಣ' ಇವು ಕಳೆದ ಎಂಟು ಹತ್ತು ದಿನಗಳಲ್ಲಿ ಪತ್ರಿಕೆಗಳಲ್ಲಿ ಕಂಡು ಬಂದ ಕೆಲವು ಸುದ್ದಿಗಳ ತಲೆ ಬರಹಗಳು.

ಮೇ ತಿಂಗಳವರೆಗೆ ರಾಜ್ಯದ ನಾನಾ ಊರುಗಳಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಬೀದಿ ಬೀದಿಗಳಲ್ಲಿ ಯಾವ ರೀತಿಯಲ್ಲಿ ಕಸ ರಾಶಿಯಾಗಿ ಕೇಳುವವರಿಲ್ಲದೇ ಬಿದ್ದಿದೆ. ರಸ್ತೆಗಳಲ್ಲಿ, ಚರಂಡಿಗಳಲ್ಲಿ ಹೇಗೆ ಕೊಳಚೆ ಕೊಳೆತು ನಾರುತ್ತಾ ಅಪಾಯಕಾರಿಯಾಗಿ ಮಡುಗಟ್ಟಿದೆ ಎಂಬ ಬಗ್ಗೆ ಪತ್ರಿಕೆಗಳಲ್ಲಿ ನಿರಂತರವಾಗಿ ವರದಿಗಳು ಬರುತ್ತಲೇ ಇದ್ದವು.

ಚುನಾವಣೆ ಬಂತು. ಹೊಸ ಸರ್ಕಾರವೂ ರಚನೆಯಾಯಿತು. ಹೊಸ ಮಂತ್ರಿಗಳೂ ಬಂದರು. ಇವೆಲ್ಲಾ ಆಗುತ್ತ ಆಗುತ್ತಲೇ ಮುಂಗಾರು ಪೂರ್ವ ಮಳೆ ರಾಜ್ಯದ ನಾನಾ ಭಾಗಗಳಲ್ಲಿ ಸುರಿಯಿತು. ಯಾವುದೋ ವಿಷಯದಲ್ಲಿ ಎಂಥೆಂಥದ್ದೋ ಹು[illegible]ಪಿನ ಮಾತುಗಳು ಕೇಳಿ ಬಂದವು. ಕಸದ ರಾಶಿ ಕರಗಲಿಲ್ಲ. ಚರಂಡಿಗಳ ಕಸ ಖಾಲಿಯಾಗಲಿಲ್ಲ. ಕೆಲವು ಪತ್ರಿಕೆಗಳು ಡೆಂಗೆ ಸೇರಿದಂತೆ ಸಾಂಕ್ರಾಮಿಕ ರೋಗಗಳು ಸ್ಫೋಟಿಸಬಹುದಾದ ಅಪಾಯದ ಬಗೆಗೆ ಸಂಪಾದಕೀಯವನ್ನೇ ಬರೆದವು. ಟಿ.ವಿ. ಚಾನೆಲ್‌ಗಳಲ್ಲಿ ಕೂಡ ಇಂತಹ ವರದಿಗಳು ಪ್ರಸಾರವಾದವು.

ಆಮೇಲೆ ಪತ್ರಿಕೆಗಳಲ್ಲಿ 'ಡೆಂಗೆ ಮುನ್ನೆಚ್ಚರಿಕೆ: ಚರ್ಚೆಗೆ ಬಿಬಿಎಂಪಿ ಅಧಿಕಾರಿಗಳ ಸಭೆ', ಎಂಬಂತಹ ಸುದ್ದಿಗಳು ಕಂಡು ಬಂದವು. ಜೂನ್ 1 ರ ಪತ್ರಿಕೆಗಳಲ್ಲಿ ' ಕಾಯಿಲೆ ನಿಯಂತ್ರಣಕ್ಕೆ ವಿಸ್ತೃತ ಕಾರ್ಯಾಚರಣೆ ಕೈಗೊಳ್ಳಲಾಗಿದೆ' ಎಂಬ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತ ಡಾ. ಎಸ್.ಬಿ. ನಾಗರಾಜ್ ಅವರ ಹೇಳಿಕೆಗಳು ಪ್ರಕಟವಾದವು. 'ಕೊಳಚೆ ನೀರಿನಲ್ಲಿ ಲಾರ್ವಾ ಕ್ರಿಮಿಗಳು ಬೆಳೆಯದಂತೆ ಔಷಧಿ ಸಿಂಪಡಿಸಲಾಗುತ್ತಿದೆ. ತಂಡಗಳು ಮನೆಮನೆಗೆ ತೆರಳಿ ಜಾಗೃತಿ ಮೂಡಿಸುತ್ತಿವೆ. ಮನೆ ಮನೆಗೆ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ' ಎಂಬ ವರದಿಗಳು ಕಾಣಿಸಿಕೊಂಡವು. ಜೂನ್ ಒಂದರಂದು ಬೆಂಗಳೂರು ಉಸ್ತುವಾರಿ ಸಚಿವರಾದ ರಾಮಲಿಂಗರೆಡ್ಡಿಯವರು ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣ ಪ್ರದೇಶ ಮತ್ತಿತರ ಭಾಗಗಳಿಗೆ ಭೇಟಿ ನೀಡಿ ಸ್ವಚ್ಛತೆ ಬಗೆಗೆ ಸೂಚನೆ ನೀಡಿದ ಬಗೆಗೆ ವರದಿಗಳು ಬಂದವು.

ಈಗ ಟಿವಿ ಪತ್ರಿಕೆಯ ಪುಟಗಳು, ಟಿವಿ ಪರದೆ ಬಿಟ್ಟು ಕೊಂಚ ವಾಸ್ತವಕ್ಕೆ ಬರೋಣ. ಉದಾಹರಣೆಗಾಗಿ ನಮ್ಮ ಆರೋಗ್ಯ ಇಲಾಖೆಯ ಅಧಿಕಾರಿಗಳು, ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಇತ್ಯಾದಿ ಸಚಿವರು, ಶಾಸಕರು, ಕಾರ್ಪೋರೇಟರುಗಳು ಮುಂತಾದವರೆಲ್ಲ ಕಾಳಜಿ ವಹಿಸಿ ತೊಡಗಿಕೊಂಡಿರುವ ಸ್ವಚ್ಛತೆ-ಯ ಕೆಲಸ ಪರಿಣಾಮ ಹೇಗಾಗಿದೆ ಎಂದು ಕೆಲವು ಕಡೆ ನೋಡೋಣ.

ಬೆಂಗಳೂರಿನ ಕೇಂದ್ರ ಭಾಗದ ಎರಡು ಪ್ರಮುಖ ಬಸ್‌ನಿಲ್ದಾಣಗಳು ಮೆಜೆಸ್ಟಿಕ್ ಬಸ್‌ನಿಲ್ದಾಣ ಮತ್ತು ಸಿಟಿಮಾರ್ಕೆಟ್-ಕಲಾಸಿಪಾಳ್ಯಂಗಳ ಬಸ್ ನಿಲ್ದಾಣಗಳು.

ಪತ್ರಿಕೆಯ ಈ ಪುಟದಲ್ಲಿ ಎರಡು ಸರಣಿಯಲ್ಲಿ ಚಿತ್ರಗಳಿವೆ. ಸರಣಿ ಒಂದರ ಚಿತ್ರಗಳನ್ನು ತೆಗೆದದ್ದು ಮೇ 28, 2013 ರಂದು. ಸರಣಿ ಎರಡರ ಚಿತ್ರಗಳನ್ನು ತೆಗೆದದ್ದು ಜೂನ್ 6, 2013 ರಂದು. ಬೆಂಗಳೂರು ನಗರದ ಹೃದಯ ಮತ್ತು ಶ್ವಾಸಕೋಶ ಎನ್ನಬಹುದಾದ ಜಾಗಗಳಿವು. ಇಂಥ ಕಡೆ ಕಸ ಎಂಬುದು ಕೊಳೆತು, ಹುಳಿತು, ಮಲೆತು, ಗಬ್ಬೆದ್ದು ನಾರುತ್ತಿರುವ ಪರಿಸ್ಥಿತಿಯ ಭಯಾನಕತೆಯನ್ನು ನೋಡಲು ಕಣ್ಣುಗಳೆರಡು ಸಾಲದು.!!!

ಈ ಎರಡು ಚಿತ್ರ ಸರಣಿಗಳ ನಡುವೆ ಏನಾದರೂ ವ್ಯತ್ಯಾಸವಿದೆಯಾ ಅಂತ ನೋಡಿ ? ಈ ಏಳೆಂಟು ದಿನಗಳ ಅವಧಿಯಲ್ಲಿ ಕೆಲವು ಸಾರಿ ಮಳೆ ಬಂದು ಮೊದಲೇ ರಾಶಿ ಬಿದ್ದಿದ್ದ ಕಸ ಇನ್ನಷ್ಟು ಕೊಳೆಯಲು ಸಹಾಯ ಮಾಡಿದೆ ಎಂಬುದು ಬಿಟ್ಟರೆ ಇಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಇಲ್ಲಿನ ಈ ಕಸ, ಕೊಳಚೆ ತೆಗೆಯಲು ಇಲ್ಲಿಗೆ ಯಾರೂ ಬಂದಿಲ್ಲ. ಆರೋಗ್ಯ ಇಲಾಖೆ, ಬಿಬಿಎಂಪಿ ಕಳಿಸಿಕೊಟ್ಟಿರುವ ಯಾವ ಪೌಡರೂ ಇಲ್ಲಿ ಈ ಕಸದ ರಾಶಿಯ ಮೇಲೆ ಬಿದ್ದಿಲ್ಲ. ಇಲ್ಲಿ ಯಾವ ಕ್ರಿಮಿನಾಶಕದ ಸಿಂಪಡಣೆಯೂ ಇಲ್ಲಿ ಆಗಿಲ್ಲ.

ಬೆಂಗಳೂರಿನಲ್ಲಂತೂ ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರೋಗ್ಯ ಇಲಾಖೆ ಎಂಬ ಒಂದು ಇಲಾಖೆ, ಬಿಬಿಎಂಪಿ ಎಂಬ ಸಂಸ್ಥೆ, ನಗರದ ಸ್ವಚ್ಛತೆಯ ದೃಷ್ಟಿಯಿಂದ ನಾಗರೀಕ ಆಡಳಿತ ಎಂಬುದೊಂದು ಇಲ್ಲಿ ಜೀವಂತ ಇದೆ ಎಂದೇ ಜನ ಭಾವಿಸಿರಲಿಲ್ಲ. ಯಾರಿಗೆ ದೂರಿಯೂ ಯಾವ ಪ್ರಯೋಜನವೂ ಇಲ್ಲ ಎಂದು ಜನರಿಗೆ ಮನದಟ್ಟಾಗಿ ಹೋಗಿತ್ತು. ಸಾರ್ವಜನಿಕ ಸ್ವಚ್ಛತೆಗೆ ಸಂಬಂಧಿಸಿದ ಎಲ್ಲ ವ್ಯವಸ್ಥೆಗಳು ಇಲ್ಲಿ ಸತ್ತು ಮಕಾಡೆ ಮಲಗಿದ್ದವು.

ಮಂಡೂರು ಮತ್ತು ನಗರದ ಹೊರ ಭಾಗದಲ್ಲಿ ಕಸ ಸುರಿಯುವ ಜಾಗಗಳಲ್ಲಿ ಸ್ಥಳೀಯರ ವಿರೋಧದಿಂದಾಗಿ ಕಸ ಸುರಿಯಲು ಜಾಗವಿಲ್ಲದೇ ಹೀಗಾಗಿದೆ ಎಂದು ಯಾರೂ ಭಾವಿಸಿಬಾರದು. ಏಕೆಂದರೆ ಈ ಬೆಂಗಳೂರು ಕಸದ ಸಮಸ್ಯೆ ಹಲವಾರು ವರ್ಷಗಳಿಂದಲೇ ರಾಶಿಗೂಡುತ್ತಾ ಬಂದಿರುವರು ಸಮಸ್ಯೆ. ಅದರಲ್ಲಿಯೂ ಕಲಾಸಿ ಪಾಳ್ಯಂ ಬಸ್ ನಿಲ್ದಾಣದಲ್ಲಿ ಕಲೆತು ನಿಂತಿರುವ ಕಸ-ಕೊಳಚೆ . ಹಲವಾರು ದಶಕಗಳಿಂದ 'ಕೊಳೆ ಹಾಕಲಾಗಿರುವ' ಸಮಸ್ಯೆ ಎಂದರು ತಪ್ಪಿಲ್ಲ. ಮನುಷ್ಯ ಮಾತ್ರರಾದವರು, ಅಳ್ಳೆದೆಯವರು ಈ ಕಲಾಸಿಪಾಳ್ಯಂ ಬಸ್ ನಿಲ್ದಾಣದೊಳಕ್ಕೆ ಹೋಗಿ ಬರುವುದು ನಿಜಕ್ಕೂ ಅಸಾಧ್ಯ. ಅದಕ್ಕೆ ಎಂಟೆದೆ ಬೇಕು.

ಬೆಂಗಳೂರಿನ ನಾನಾ ಭಾಗಗಳಿಗೆ ಮಾತ್ರವಲ್ಲ, ರಾಜ್ಯಕ್ಕೂ ಮತ್ತು ದೇಶದ ಉದ್ದಗಲಕ್ಕೂ ಡೆಂಗೆ, ಮಂಗನ ಕಾಯಿಲೆ, ಮಲೇರಿಯಾ, ಚಿಕೂನ್ ಗುನ್ಯಾ, ವಿಷಮ ಶೀತ ಜ್ವರ, ಎಚ್1 ಎನ್1, ಇಲಿ ಜ್ವರದಂತಹ ಸಾಂಕ್ರಾಮಿಕ ರೋಗಕಾರಕ ಕ್ರಿಮಿಗಳನ್ನು ಈ ಕಲಾಸಿ ಪಾಳ್ಯಂ ಬಸ್ ನಿಲ್ದಾಣ ಒಡಲಲ್ಲಿ ಹೊತ್ತು ಕೊಂಡಿದೆಯೇನೋ ಅನಿಸುತ್ತದೆ. ಈಗೀಗ ಮೆಜೆಸ್ಟಿಕ್ ಬಸ್ ನಿಲ್ದಾಣವೂ ಅದೇ ದಿಕ್ಕಿನಲ್ಲಿ ಸಾಗುತ್ತಿದೆ.(ಅಲ್ಲಿ ನಡೆಯುತ್ತಿರುವ ಮೆಟ್ರೋ ಕಾಮಗಾರಿಗೂ ಈ ಸಮಸ್ಯೆಗೂ ಯಾವ ಸಂಬಂಧವೂ ಇಲ್ಲ. ಚಿತ್ರದಲ್ಲಿರುವುದು ಮೆಜೆಸ್ಟಿಕ್‌ನ ಕಡೆಯಿಂದ ಬರುವಾಗ ಸಿಗುವ ಪ್ರವೇಶ ದ್ವಾರದ ಪರಿಸ್ಥಿತಿ.)

'ನಿಜಕ್ಕೂ ತುರ್ತು 'ಜಾಗೃತಿ' ಬೇಕಾಗಿರುವುದು ಯಾರಿಗೆ ? ಆರೋಗ್ಯ ಇಲಾಖೆ, ಬಿಬಿಎಂಪಿಗಳಿಗೆ ತಮ್ಮ ತಿಪ್ಪೆಗುಂಡಿಗಳ ಮೇಲಿನ ಮಹಾ ನಿದ್ರೆಯಿಂದ ಎಬ್ಬಿಸುವ 'ಜಾಗೃತಿ' ಕಾರ್ಯಕ್ರಮ ಬೇಕಾಗಿದೆ. ಬೆಂಗಳೂರು ಮತ್ತು ಕರ್ನಾಟಕ ರಾಜ್ಯವು ಯಾವುದೋ ಸಾಂಕ್ರಾಮಿಕ ರೋಗಗಳ ಸ್ಫೋಟಕ್ಕೆ ಕಾದು ಕೂತಿದೆಯೇನೋ ಅಂತ

ಪುಟ 15 ಕ್ಕೆ

ಇಲ್ಲಿ ಲಾರ್ವಾಗಳು ಬೆಳೆಯುವುದಿಲ್ಲವೇ ?




ಮೇ 28, 2013ರ ಪರಿಸ್ಥಿತಿ : ಚಿತ್ರ 1 ಮತ್ತು 3– ಮೆಜೆಸ್ಟಿಕ್ ಪ್ರವೇಶ ದ್ವಾರದಲ್ಲಿ ಕೊಳಚೆ ಮಡುವಿನ ಮೇಲೆ ನಿಂತಿರುವ ಬಸ್ಸು ಮಧ್ಯದ ಚಿತ್ರ 2 – ಕಲಾಸಿಪಾಳ್ಯ ಬಸ್ ನಿಲ್ದಾಣದ ಪರಿಸ್ಥಿತಿ, ಇವು ಅತ್ಯಂತ ಜನನಿಬಿಡ ಪ್ರದೇಶಗಳು.



ಜೂನ್ 6, 2013 ರಂದು ಅದೇ ಪ್ರದೇಶಗಳಲ್ಲಿ ಇದ್ದ ಸ್ಥಿತಿ. ಡೆಂಗ್ಯು ಮತ್ತು ಸಾಂಕ್ರಾಮಿಕ ರೋಗಗಳು ವ್ಯಾಪಕ ಹಬ್ಬುತ್ತಿವೆ ಎನ್ನುವ ಆತಂಕಗಳ ನಡುವೆಯೂ ಅದೇ ಗತಿ.



ಉಡುಪಿ ಜಿಲ್ಲೆಯಲ್ಲಿ ವಿಶ್ವಕಾರ್ಮಿಕ ದಿನಾಚರಣೆ



ವೆಂಕಟೇಶ ಕೋಣಿ

ಚಾರಿತ್ರಿಕ ಮೇ ದಿನ ದುಡಿಯುವ ವರ್ಗದ ಅಂತರರಾಷ್ಟ್ರೀಯ ಸೌಹಾರ್ದ ದಿನ. ಜಗತ್ತಿನಾದ್ಯಂತ ಆಚರಿಸಲ್ಪಡುತ್ತದೆ. ಮೇ ದಿನದಂದು ಕಾರ್ಮಿಕರು ಕಾರ್ಮಿಕ ವರ್ಗದ ಮತ್ತು ದುಡಿಯುವ ಜನತೆಯ ಐಕ್ಯತೆಯನ್ನು ಬಲಪಡಿಸಲು ದೃಢ ಸಂಕಲ್ಪ ಮಾಡುತ್ತಾರೆ. ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ನಡೆಸಿದ ಹೋರಾಟ, ಮಾಡಿದ ತ್ಯಾಗ ಬಲಿದಾನವನ್ನು ಸ್ಮರಿಸುವ ದಿನವೇ ಮೇ ದಿನ. ಆದರೆ, ಇಂದು ಕಾರ್ಮಿಕರು ದೀರ್ಘಕಾಲದ ಹೋರಾಟಗಳಿಂದ ಪಡೆದ ಹಕ್ಕುಗಳನ್ನು ಕೋಳೆದುಕೊಳ್ಳುತ್ತಿದ್ದಾರೆ. ಹೆಚ್ಚೆಚ್ಚು ಲಾಭಕ್ಕಾಗಿ ಹಾತೊರೆಯುತ್ತಿರುವ ಆಧುನಿಕ ಬಂಡವಾಳಶಾಹಿಗಳು ಕಾರ್ಮಿಕರ ಹಕ್ಕುಗಳನ್ನು ನಿರ್ಧಯವಾಗಿ ದಮನ ಮಾಡುತ್ತಾರೆ. ಬಂಡವಾಳಶಾಹಿ ಸರ್ಕಾರಗಳು ನವ ಉದಾರೀಕರಣ ನೀತಿಗಳ ಹೆಸರಿನಲ್ಲಿ ಬಂಡವಾಳಗಾರರ ಸುಲಿಗೆಗೆ ಅನುಕೂಲತೆಗಳನ್ನು ಒದಗಿಸುತ್ತವೆ. ಆದ್ದರಿಂದ ಕಾರ್ಮಿಕ ಸಂಘಟನೆಗಳು ಕಳೆದ ಫೆಬ್ರವರಿ 20–21 ರಂದು ನಡೆಸಿದಂತೆ ಜಂಟಿ ಹೋರಾಟಗಳನ್ನು ಹೆಚ್ಚೆಚ್ಚು ನಡೆಸುವ ಮೂಲಕ ಬಂಡವಾಳ ಶಾಹಿ ಶೋಷಣೆಗೆ ತೀವ್ರ ಪ್ರತಿರೋಧವನ್ನು ಒಡ್ಡಬೇಕು ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ನಿತ್ಯಾನಂದ ಸ್ವಾಮಿ ಹೇಳಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮೇ ದಿನಾಚರಣೆಯ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಷಣ ಮಾಡುತ್ತಾ ಜಾಗತೀಕರಣ ನೀತಿಗಳು ಬಡವರ, ಶ್ರಮಿಕರ, ದುಡಿಯುವ ಜನರ ಬದುಕನ್ನು ಕಿತ್ತು ತಿನ್ನುತ್ತಿದೆ. ಮತ್ತೊಂದೆಡೆ ನಮ್ಮನ್ನಾಳುವ ರಾಜಕಾರಣಿಗಳು ಮತ್ತು ಅಧಿಕಾರಿಗಳು ಸೇರಿ ಅಭಿವೃದ್ಧಿ ಹೆಸರಿನಲ್ಲಿ ಸಾರ್ವಜನಿಕ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಶೇ. 90% ರಷ್ಟು ಇರುವ ದುಡಿಯುವ ಜನರ ಬೆವರಿನ ಗಳಿಕೆಯನ್ನು ಶೇ. 10 ರಷ್ಟು ಇರುವ ಬಂಡವಾಳಶಾಹಿ ದೋಚುತ್ತಿದೆ ಎಂದು ಹೇಳಿದರು.

ಸಿಐಟಿಯುಗೆ ಸಂಯೋಜಿಸಲ್ಪಟ್ಟ–ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ, ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘ, ಅಂಗನವಾಡಿ, ಅಕ್ಷರ ದಾಸೋಹ, ಆಶಾ ಕಾರ್ಯಕರ್ತೆಯರ ಸಂಘ, ಬೀಡಿ ಕಾರ್ಮಿಕರ ಸಂಘ, ರಿಕ್ಷಾ ಚಾಲಕರ ಸಂಘ, ಗ್ರಾಮ ಪಂಚಾಯತ್, ನೌಕರರ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ಮುಖಂಡರಾದ ವಿ. ನರಸಿಂಹ, ಯು. ದಾಸ ಭಂಡಾರಿ, ಮಹಾಬಲ ವಡೇರಹೋಬಳಿ, ಬಲ್ಕೀಸ್, ಶಾರದಾ ಬೈಂದೂರು, ರಾಜೀವ ಪಡುಕೋಣೆ, ರಮೇಶ, ವೆಂಕಟೇಶ ಕೋಣಿ, ಸಿಐಟಿಯು ಜಿಲ್ಲಾಧ್ಯಕ್ಷ



ಕೆ. ಶಂಕರ ಉಪಸ್ಥಿತರಿದ್ದರು. ಸಿಐಟಿಯು ತಾಲೂಕು ಅಧ್ಯಕ್ಷ ಎಚ್. ನರಸಿಂಹ ಅಧ್ಯಕ್ಷತೆ ವಹಿಸಿದ್ದರು, ಕಾರ್ಯದರ್ಶಿ ಸುರೇಶ ಕಲ್ಲಾಗರ ಕಾರ್ಯಕ್ರಮ ನಿರೂಪಿಸಿದರು.

ಮೇ ದಿನಾಚರಣೆಯ ಸಮಾರಂಭದ ಪೂರ್ವಭಾವಿಯಾಗಿ ಎಲ್ಲ ವಿಭಾಗದ ಕಾರ್ಮಿಕರ ಬೃಹತ್ ರ್ಯಾಲಿ–ಮೆರವಣಿಗೆ ಕುಂದಾಪುರ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕುಂದಾಪುರ ನೆಹರೂ ಮೈದಾನದಲ್ಲಿ ಸಮಾವೇಶಗೊಂಡಿತು. ಮೆರವಣಿಗೆ ಉದ್ದಕ್ಕೂ ಸಿಡಿಮದ್ದು ಪಟಾಕಿಗಳ ಆರ್ಭಟ, ಬ್ಯಾಂಡ್ ವಾದ್ಯ–ತಾಳಮೇಳಗಳು ಮೇ ದಿನಾಚರಣೆಗೆ ಮೆರುಗು ನೀಡಿದವು.

ಬ್ರಹ್ಮಾವರ : ಕಾರ್ಮಿಕ ಸಂಘಟನೆಗಳಿಂದ ಬೃಹತ್ ಮೆರವಣಿಗೆ

ನಗರದ ಬೀಡಿ ಕಾರ್ಮಿಕರ ಸಂಘ, ರಿಕ್ಷಾ ಚಾಲಕರ ಸಂಘ ಮತ್ತು ಬ್ರಹ್ಮಾವರ, ಸ್ಯಾಬರಕಟ್ಟೆ, ಹಾವಂಜೆ, ಪೇತ್ರಿ, ಸಾಸ್ತಾನ, ಹೆಸ್ಕತ್ತೂರಿನ ಕಟ್ಟಡ ಕಾರ್ಮಿಕರ ಸಂಘದ ಸದಸ್ಯರು ಕಾರ್ಮಿಕ ದಿನಾಚರಣೆಯ ಪ್ರಯುಕ್ತ ಬೃಹತ್ ಮೆರವಣಿಗೆ ನಡೆಸಿದರು. ವಿವಿಧ ಸಂಘಟನೆಗಳ ನೂರಾರು ಕಾರ್ಮಿಕರು ನಗರದ ಪ್ರವಾಸಿ ಬಂಗಲೆಯಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬೆಲೆ ಏರಿಕೆ ವಿರುದ್ಧ ಘೋಷಣೆ ಕೂಗಿ ಪ್ರತಿಭಟಿಸಿದರು.

ನಂತರ ಬಸ್ ನಿಲ್ದಾಣದ ಬಳಿ ನಡೆದ ಸಭೆಯಲ್ಲಿ ಮಾತನಾಡಿದ ಕಾರ್ಮಿಕ ಮುಖಂಡ ವಿಠಲ ಪೂಜಾರಿ " ನಿರುದ್ಯೋಗ ಸಮಸ್ಯೆ, ಬೆಲೆ ಏರಿಕೆ ವಿರುದ್ಧ ಕಾರ್ಮಿಕ ಸಂಘಟನೆಗಳು ಹೋರಾಟ ನಡೆಸಬೇಕಾದ ಅನಿವಾರ್ಯತೆ ಇದೆ, ಜನಪ್ರತಿನಿಧಿಗಳು ಕಾರ್ಮಿಕರ ಬಗ್ಗೆ ಸದನಗಳಲ್ಲಿ ಯಾವ ಮಾತೂ ಆಡುವುದಿಲ್ಲ. ಕಾರ್ಮಿಕರು ಜನಪ್ರತಿನಿಧಿಗಳ ವಿರುದ್ಧ ಎದ್ದಲ್ಲಿ ಸರಕಾರ ಉಳಿಯುವುದಿಲ್ಲ" ಎಂದು ಎಚ್ಚರಿಸಿದರು. ಅವರು ಕಾರ್ಮಿಕರ ಕಲ್ಯಾಣಕ್ಕಾಗಿ ಜನ ಪ್ರತಿನಿಧಿಗಳು ಗಮನ ನೀಡಬೇಕು ಎಂದು ಅಗ್ರಹಿಸಿದರು.

ಸರಕಾರವನ್ನು ನಿಯಂತ್ರಣ ಮಾಡುವ ಶಕ್ತಿ ಕಾರ್ಮಿಕರಲ್ಲಿ ಇದೆ. ಪ್ರತಿಯೊಬ್ಬ ಕಾರ್ಮಿಕರೂ ಜಾಗೃತರಾಗಿ ಸಂಘಟನೆ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಅವರು ಸಲಹೆ ನೀಡಿದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಪಿ. ವಿಶ್ವನಾಥ ರೈ ಮಾತನಾಡಿದರು. ಕಟ್ಟಡ ಕಾರ್ಮಿಕರ ಸಂಘದ ಗಣಪತಿ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಮಿಕ ಮುಖಂಡರಾದ ಗಾಡ್ವಿನ್ ಫೆರ್ನಾಂಡೀಸ್, ಸದಾಶಿವ ಪೂಜಾರಿ, ರಾಮ ಕಾರ್ಕಡ, ಭವಾನಿ, ಕವಿತಾ, ಸುಭಾಷ ನಾಯಕ್, ಕೃಷ್ಣ ಮರಕಾಲ, ಶಂಕರ ಕುಲಾಲ ಉಪಸ್ಥಿತರಿದ್ದರು.

ಉಡುಪಿ : ಸಿಐಟಿಯು ನೇತೃತ್ವದಲ್ಲಿ ರ್ಯಾಲಿ :

ಕೇಂದ್ರದ ಉದಾರೀಕರಣ ನೀತಿಯಿಂದ ಭವಿಷ್ಯದಲ್ಲಿ ಕಾರ್ಮಿಕರು ತೀವ್ರ ಆರ್ಥಿಕ ಸಂಕಷ್ಟ ಎದುರಿಸಲಿದ್ದು ಈ ನಿಟ್ಟಿನಲ್ಲಿ ಕಾರ್ಮಿಕ ಸಂಘಟನೆಗಳು ಐಕ್ಯತೆಯಿಂದ ಹೋರಾಡುವ ಅನಿವಾರ್ಯತೆಯಿದೆ ಎಂದು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಬಾಲಕೃ ಶೆಟ್ಟಿ ಹೇಳಿದರು.

ಅವರು ಉಡುಪಿ ಸರ್ವಿಸ್ ಬಸ್ ನಿಲ್ದಾಣದ ಗಾಂಧಿ ಪ್ರತಿಮೆ ಬಳಿ ಕಾರ್ಮಿಕ ದಿನಾಚರಣೆ ಪ್ರಯುಕ್ತ ಸಿಐಟಿಯು ಹಮ್ಮಿಕೊಂಡ ಕಾರ್ಮಿಕರ ರ್ಯಾಲಿಯಲ್ಲಿ ಮಾತನಾಡಿದರು. ಸಂಪತ್ತಿನ ಹಂಚಿಕೆಗಾಗಿ ಕಾರ್ಮಿಕರು ಏಕತೆಯಿಂದ ಹೋರಾಟ ಮಾಡಬೇಕಾಗಿದೆ. ಕಾರ್ಮಿಕರ ಕೆಲಸದ ಅವಧಿ 8 ಗಂಟೆ ಆದರೆ 10–12 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಕೆಲಸದ ಅವಧಿಯನ್ನು 10 ಗಂಟೆಗೆ ಏರಿಕೆ ಮಾಡಿದೆ. ಇದರಿಂದ ಕಾರ್ಮಿಕರ ಶೋಷಣೆ ಆಗುತ್ತಿದೆ ಎಂದು ಅವರು ಹೇಳಿದರು. ಅಗತ್ಯ ವಸ್ತುಗಳ ಬೆಲೆ ಏರಿಕೆಗಳಿಂದ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರ ಕಾರ್ಮಿಕರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ. ಚಿಲ್ಲರೆ ಮಾರಾಟದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅನುಮತಿ ನೀಡಿ ಸಣ್ಣ ವ್ಯಾಪಾರಸ್ಥರ ಮೇಲೆ ದಾಳಿ ಮಾಡಲು ಹೊರಟಿದೆ ಎಂದು ಅವರು ಟೀಕಿಸಿದರು.

ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಪಿ. ವಿಶ್ವನಾಥ ರೈ, ಮುಖಂಡರಾದ ದೋಗು ಸುವರ್ಣ, ಕೆ. ಲಕ್ಷ್ಮಣ, ಉಮೇಶ ಕುಂದರ್, ವಾಮನ ಬಂಗೇರ, ಸುಜಾತ ಶೆಟ್ಟಿ, ವಿಶ್ವನಾಥ ಉಪಸ್ಥಿತರಿದ್ದರು.

ಜೋಡುಕಟ್ಟೆಯಿಂದ ಸರ್ವಿಸ್ ಬಸ್ ನಿಲ್ದಾಣದವರೆಗೆ ನಡೆದ ರ್ಯಾಲಿಯಲ್ಲಿ ವಿವಿಧ ವಿಭಾಗಗಳ ಕಾರ್ಮಿಕರು ಪಾಲ್ಗೊಂಡಿದ್ದರು.

ನೀವು 'ಜನಶಕ್ತಿ'ಯ ಚಂದಾದಾರರೇ? ಏಜೆನ್ಸಿದಾರರೇ? ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಚೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು–560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಹೌರಾ ಲೋಕಸಭಾ ಉಪಚುನಾವಣೆ :
ಗಮನಾರ್ಹವಾಗಿ ಹೆಚ್ಚಿದ ಸಿಪಿಐ(ಎಂ) ಮತಗಳಿಕೆ
ತೃಣಮೂಲ ಕಾಂಗ್ರೆಸ್‌ಗೆ ಬಿಜೆಪಿ ಮತ ವರ್ಗಾವಣೆ

ತೃಣಮೂಲ ನಾಯಕಿ ಮಮತಾ ಬ್ಯಾನರ್ಜಿ ಈ ಚುನಾವಣಾ ಗೆಲುವಿನ ಬಗೆಗೆ ಮಾತನಾಡಿ ನಾವು ಏಕಾಂಗಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಬಲ್ಲೆವು ಎಂದು ಈ ಚುನಾವಣೆ ತೋರಿಸಿಕೊಟ್ಟಿದೆ ಎಂದಿದ್ದಾರೆ. ಅವರ 'ಏಕಾಂಗಿ ಹೋರಾಟ'ದ ಸ್ವರೂಪ ಹೀಗಿದೆ.

ಹೆಚ್.ಆರ್. ನವೀನಕುಮಾರ್


ಜೂನ್ 2 ರಂದು ಪಶ್ಚಿಮ ಬಂಗಾಳದ ಹೌರಾದಲ್ಲಿ ನಡೆದ ಲೋಕಸಭಾ ಉಪಚುನಾವಣೆ 2011 ರ ವಿಧಾನ ಸಭಾ ಚುನಾವಣೆಯ ನಂತರದ ಎರಡನೇ ಉಪ ಚುನಾವಣೆಯಾಗಿದೆ. ಈ ಉಪ ಚುನಾವಣೆಯಲ್ಲೂ ಆಡಳಿತರೂಢ ತೃಣಮೂಲ ಕಾಂಗ್ರೆಸ್ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಆದರೆ ಗೆಲುವಿನ ಅಂತರ ಅತ್ಯಂತ ಕಡಿಮೆಯಾಗಿದೆ. ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಪ್ರಸನ್ ಬ್ಯಾನರ್ಜಿ 4,26,276 ಮತಗಳನ್ನು, ಸಿಪಿಐ(ಎಂ)ನ ಅಭ್ಯರ್ಥಿ ಶ್ರೀದೀಪ್ ಭಟ್ಟಾಚಾರ್ಜಿ 3,99,258 ಮತಗಳನ್ನು, ಕಾಂಗ್ರೆಸ್ ಅಭ್ಯರ್ಥಿ 96,727 ಮತಗಳನ್ನು ಪಡೆದಿದ್ದಾರೆ. 2011 ರಲ್ಲಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿದ್ದ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಮೈತ್ರಿ ಮಾಡಿಕೊಂಡು 1,84,000 ಮತಗಳ ಅಂತರದಿಂದ ಗೆಲುವನ್ನು ಪಡೆದಿದ್ದವು. ಆದರೆ ಈ ಚುನಾವಣೆಯಲ್ಲಿ ಗೆಲುವಿನ ಅಂತರ ಕೇವಲ ಸು. 27,000 ಕ್ಕೆ ಕುಸಿದಿದೆ.

ಪ್ರಾಥಮಿಕ ಲೆಕ್ಕಾಚಾರದ ಪ್ರಕಾರ ತೃಣಮೂಲ ಕಾಂಗ್ರೆಸ್ ಶೇ. 44.53, ಸಿಪಿಐ(ಎಂ) ಶೇ. 41.71 ಮತ್ತು ಕಾಂಗ್ರೆಸ್ ಶೇ. 10 ರಷ್ಟು ಮತಗಳನ್ನು ಪಡೆದಿವೆ. 2011 ರ ಚುನಾವಣೆಯಲ್ಲಿ ಎಡರಂಗ ಶೇ. 37 ರಷ್ಟು ಮತಗಳನ್ನು ಪಡೆದು ಎಲ್ಲ ಏಳು ವಿಧಾನ ಸಭಾ ಕ್ಷೇತ್ರಗಳಲ್ಲೂ ಸೋಲನ್ನು ಕಂಡಿತ್ತು.

2011 ರ ಚುನಾವಣೆಗೆ ಹೋಲಿಸಿದರೆ ಏಳು ವಿಧಾನ ಸಭಾ ಕ್ಷೇತ್ರಗಳ ಪೈಕಿ ಐದರಲ್ಲಿ ಈ ಬಾರಿ ಎಡರಂಗಕ್ಕೆ ಸಿಕ್ಕಿರುವ ಮತಗಳ ಪ್ರಮಾಣ ಹೆಚ್ಚಾಗಿದೆ. ಉದಾ ಉತ್ತರ ಹೌರಾ ಕ್ಷೇತ್ರದಲ್ಲಿ ಶೇ. 33.54 ರಿಂದ ಶೇ 40.52ಕ್ಕೆ, ಕೇಂದ್ರ ಹೌರಾ ಕ್ಷೇತ್ರದಲ್ಲಿ ಶೇ. 31.59 ರಿಂದ 38.02ಕ್ಕೆ, ಶಿಬಪುರ ಕ್ಷೇತ್ರದಲ್ಲಿ ಶೇ. 33 ರಿಂದ ಶೇ. 42ಕ್ಕೆ, ಹೌರಾ ದಕ್ಷಿಣ ಕ್ಷೇತ್ರದಲ್ಲಿ ಶೇ. 38.63 ರಿಂದ ಶೇ. 45.76ಕ್ಕೆ, ಸಂಕ್ರೈಲ್ ಕ್ಷೇತ್ರದಲ್ಲಿ ಶೇ. 40.82 ರಿಂದ ಶೇ 43.06ಕ್ಕೆ ಮತಗಳಿಕೆ ಹೆಚ್ಚಾಗಿದೆ.

ಈ ಚುನಾವಣೆಯಲ್ಲಿ ಒಂದು ಕುತೂಹಲಕರ ಸಂಗತಿ ಎಂದರೆ ಬಿಜೆಪಿ ತನ್ನ ಅಭ್ಯರ್ಥಿಯನ್ನು ಕಣದಿಂದ ವಾಪಸ್ ಪಡೆದು ತೃಣಮೂಲ ಕಾಂಗ್ರೆಸ್‌ಗೆ ಬೆಂಬಲವನ್ನು ಸೂಚಿಸಿತು. ಚುನಾವಣೆಗೂ ಮುನ್ನ ಬಿಜೆಪಿಯ ರಾಜ್ಯ ಅಧ್ಯಕ್ಷರು ಪತ್ರಿಕಾಗೋಷ್ಠಿಯಲ್ಲಿ ಕ್ಷೇತ್ರದ ಜನತೆಗೆ ಸಿಪಿಐ(ಎಂ) ಮತ್ತು ಕಾಂಗ್ರೆಸ್‌ಗೆ ಮತ ನೀಡಬೇಡಿ ಎಂದು ಕರೆ ನೀಡಿದರು. ಈ ಕ್ರಮ ತೃಣಮೂಲ ಕಾಂಗ್ರೆಸ್‌ಗೆ ಅನುಕೂಲ ಮಾಡಿಕೊಡುವ ಯೋಜನೆ ಎಂದು ಬಿಡಿಸಿ ಹೇಳಬೇಕಾಗಿಲ್ಲವಷ್ಟೆ. 2009 ರ ಲೋಕಸಭಾ





ಚುನಾವಣೆಯಲ್ಲಿ ಇದೇ ಕ್ಷೇತ್ರದಲ್ಲಿ ಬಿಜೆಪಿ 37 ಸಾವಿರ ಮತಗಳನ್ನು ಪಡೆದಿತ್ತು.

ಗೆಲುವನ್ನು ಸಾಧಿಸಿರುವ ತೃಣಮೂಲ ಕಾಂಗ್ರೆಸ್ ಬಹುತೇಕ ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲೂ ಭಯೋತ್ಪಾದಕ ತಂತ್ರಗಾರಿಕೆಯನ್ನು ಅನುಸರಿಸಿದೆ. ಸಿಪಿಐ(ಎಂ) ಕಛೇರಿಗಳ ಮತ್ತು ಕಾರ್ಯಕರ್ತರ ಮೇಲೆ ನಿರಂತರವಾಗಿ ದಾಳಿಮಾಡಲಾಗಿದೆ. ಇವುಗಳ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ದಾಖಲಿಸಿದ್ದರೂ ಚುನಾವಣೆಯ ದಿನದಂದು ಆಡಳಿತರೂಢ ಪಕ್ಷದ ಕಾರ್ಯಕರ್ತರು ಮೋಟಾರ್ ಬೈಕ್‌ಗಳಲ್ಲಿ ತೆರಳಿ ಹಲವು ಮತಗಟ್ಟೆಗಳಲ್ಲಿ ಸಿಪಿಐ(ಎಂ)ನ ಬೂತ್ ಏಜೆಂಟ್‌ರನ್ನು ಹೆದರಿಸಿ ಬಲವಂತದಿಂದ ಹೊರಹಾಕಿರುವ ಘಟನೆಗಳು ವರದಿಯಾಗಿವೆ. ಉತ್ತರ ಹೌರಾ ಮತ್ತು ಪಾಂಚ್ಲಾಗಳಲ್ಲಿ ಒಟ್ಟು ಸು. 68 ಬೂತ್‌ಗಳಲ್ಲಿ ರಿಗ್ಗಿಂಗ್ ನಡೆದಿದೆ ಎಂದು ಎಡರಂಗ ಗುರುತಿಸಿದೆ. ಸುಮಾರು 15 ಮತಗಟ್ಟೆಗಳನ್ನು ತೃಣಮೂಲ ಕಾಂಗ್ರೆಸ್ ಗೂಂಡಾಗಳು ತಮ್ಮ ವಶಕ್ಕೆ ತೆಗೆದುಕೊಂಡು ಎಡರಂಗದ ಮತದಾರರು ಮತಗಟ್ಟೆ ಹತ್ತಿರಕ್ಕೆ ಸುಳಿಯದಂತೆ ನೋಡಿಕೊಂಡಿದ್ದಾರೆ.

ಮತ್ತೊಂದೆಡೆ ಚುನಾವಣಾ ಪ್ರಚಾರ 'ಲಿತಾಂಶ' ಪ್ರಕಟವಾದ ನಂತರ ಬಿಜೆಪಿಯ ರಾಜ್ಯ ಅಧ್ಯಕ್ಷರಾದ ರಾಹುಲ್ ಸಿನ್ಹಾ ಮಾತನಾಡಿ ಹೌರಾ ಲೋಕಸಭಾ ಚುನಾವಣೆಯಲ್ಲಿ 'ಬಿಜೆಪಿ ಅಭ್ಯರ್ಥಿಯನ್ನು ವಾಪಸ್ ಪಡೆದಿದ್ದರಿಂದಲೇ ತೃಣಮೂಲ ಕಾಂಗ್ರೆಸ್ ಗೆದ್ದಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ' ಎಂದು ಹೇಳಿದ್ದಾರೆ. ತೃಣಮೂಲ ಕಾಂಗ್ರೆಸ್‌ನ ಮತಗಳಿಕೆಯಲ್ಲಿ ಗಣನೀಯ ಕುಸಿತವಾಗಿದೆ ಎಂಬ ವಿಷಯ ಆ ಪಕ್ಷಕ್ಕೆ 'ಒಂದು ಎಚ್ಚರಿಕೆಯ ಗಂಟೆ' ಎಂದೂ ಹೇಳಿದ್ದಾರೆ.

ಚಳುವಳಿಗಳ ಮುಂದಿರುವ......

ಪುಟ 16 ರಿಂದ

ಹೊಸ ತಲೆಮಾರಿನ ಚಳುವಳಿಗಳ ಬಗ್ಗೆ ಚರ್ಚೆ

ಚಳುವಳಿಗೆ ಹೊಸ ತಲೆಮಾರಿನಲ್ಲಿ ಭೂಮಿಕೆ ಸಿದ್ಧ ಪಡಿಸಲು ಶಿಕ್ಷಣದಲ್ಲಿ ಅದರಲ್ಲೂ ಪಠ್ಯಪುಸ್ತಕಗಳ ಮತ್ತು ಇತರ ಪಠ್ಯಗಳ ರಚನೆ, ಶಿಕ್ಷಣ ಲಾಬಿ ಮತ್ತು ಕೋಮುವಾದಿ ಬೆಂಬಲಿಗರ 'ಸಾಂಸ್ಕೃತಿಕ' ಇಮೇಜ್ ಬೆಳೆಸುವ 'ಉತ್ಸವ'ಗಳಲ್ಲಿ ಭಾಗವಹಿಸುವ ಮೂಲಕ ಅವರಿಗೆ ವಿಶ್ವಾಸಾರ್ಹತೆ ಕೊಡುವ ಪ್ರಗತಿಪರರ ಆತ್ಮಾವಲೋಕನದ ಅಗತ್ಯ, ಸಾಮಾಜಿಕ ವಿಘಟನೆಯ ಫಲವಾಗಿ ಚಳುವಳಿಯಲ್ಲಿ ಬಹುಭಾಗ ಜನತೆಯ ನಿರ್ಲಕ್ಷ್ಯ ಮತ್ತು ಸಾಮೂಹಿಕ ಪಾಲ್ಗೊಳ್ಳುವಿಕೆಯ ಅಭಾವ, ಚಳುವಳಿಗಳ ವಿರುದ್ಧ ಮಾಧ್ಯಮಗಳ ಸತತ ಅಪಪ್ರಚಾರ, ಯುವಜನತೆಯನ್ನು ಚಳುವಳಿ ಒಳಗೊಳ್ಳಲು ಪರಿಭಾಷೆ-ತಂತ್ರ-ಮಾಧ್ಯಮಗಳನ್ನು ಸಮಕಾಲೀನಗೊಳಿಸಬೇಕಾದ ತುರ್ತು, ವಚನ ಚಳುವಳಿ ಮತ್ತು 70-80ರ ದಶಕಗಳ ಚಳುವಳಿಗಳ ಹಲವು ಅಂಶಗಳು ಎಷ್ಟರ ಮಟ್ಟಿಗೆ ಇಂದು ಪ್ರಸ್ತುತ ಮತ್ತು ಅವುಗಳ ನಾಸ್ಟಾಲ್ಜಿಯದ ಬಗ್ಗೆ ಎಚ್ಚರ, ವಿದೇಶಿ ಅಥವಾ ದೇಶೀ ನಿಧಿ ಪಡೆಯುವ ಎನ್.ಜಿ.ಓ.ಗಳಿಂದಾಗಿ ಪ್ರಗತಿಪರ ಸಂಘಟನೆಗಳಿಗೆ ಕಾರ್ಯಕರ್ತರ ಅಭಾವ, ಜಾಗತೀಕರಣವನ್ನು ಸಾಮಾನ್ಯ ಜನತೆ (ಉದಾ. ಗುಲ್ಬರ್ಗದ ಮಹಿಳಾ ಕಟ್ಟಡ ಕಾರ್ಮಿಕರು ತಮ್ಮ ಉದ್ಯೋಗ ನಷ್ಟಕ್ಕೆ ಕಂಡುಕೊಂಡ ಬದಲಿ) ಎದುರಿಸುವ ಬಗೆಯಿಂದ ಕಲಿಯಬೇಕಾದ ಪಾಠ, ಚಳುವಳಿಯ ನಾಯಕರು ಕಾರ್ಯಕರ್ತರು ಖಾಸಗಿ ಬದುಕಿನಲ್ಲೂ ನೈತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕಾದ ಅಗತ್ಯ, ವ್ಯಾಪಕ ಸಾರ್ವತ್ರಿಕ ದೊಡ್ಡ ಚಳುವಳಿಗಳ ಸಾಧ್ಯತೆ ಮತ್ತು ಅಗತ್ಯತೆ,

ಚಳುವಳಿಗಳು ಸಂಘಟನೆಯಾಗಿ ಗಟ್ಟಿಗೊಳ್ಳುವುದರ ಅಭಾವ, ಲ್ಯಾಟಿನ್ ಅಮೆರಿಕನ್ ಚಳುವಳಿಗಳಿಂದ ಕಲಿಯಬಹುದಾದ ಪಾಠಗಳು - ಹೀಗೆ 'ಚಳುವಳಿ: ಹೊಸ ತಲೆಮಾರು' ವಿಷಯದ ಹತ್ತು ಹಲವು ಆಯಾಮಗಳ ಬಗ್ಗೆ ಉತ್ತಮ ಚರ್ಚೆ ನಡೆಯಿತು.

ಸಾಂಸ್ಕೃತಿಕ ವೈವಿಧ್ಯತೆ ಮೆರೆಸಿದ ಸಹಯಾನ

ಕೆ.ಎಸ್.ವಿಮಲ ಸಂಯೋಜನೆ ಮಾಡಿದ 'ಚಳುವಳಿ - ಹೊಸ ತಲೆಮಾರಿನ ಪ್ರಶ್ನೆಗಳು' ಸಂವಾದದಲ್ಲಿ ವೈ.ಬಿ.ಹಿಮ್ಮಡಿ, ಕೆ.ಎಸ್.ಲಕ್ಷ್ಮಿ, ನವೀನ್ ಸೂರಿಂಜೆ, ವಸಂತರಾಜ್ ಭಾಗವಹಿಸಿದ್ದರು. ಸಮಾರೋಪದಲ್ಲಿ ಕೆ.ನೀಲಾ ಮತ್ತು ಕುವೆಂಪು ವಿಶ್ವವಿದ್ಯಾಲಯದ ಡಾ.ಕೇಶವ ಶರ್ಮಾ ಭಾಗವಹಿಸಿದ್ದರು. ಎಂದಿನಂತೆ ಈ ಬಾರಿಯ ಸಹಯಾನ ಸಾಹಿತ್ಯೋತ್ಸವದಲ್ಲೂ ಸ್ಥಳೀಯ ಸಂಸ್ಕೃತಿಯ ಸೊಗಡು ಮತ್ತು ಬರಿಯ ವೈಚಾರಿಕ ಚರ್ಚೆಗಳಿಗೆ ಸೀಮಿತವಾಗದ ಸಾಂಸ್ಕೃತಿಕ ವೈವಿಧ್ಯತೆಯ ಸಂಭ್ರಮ ಕಂಡು ಬಂತು. ವೇದಿಕೆಯ ವಿನ್ಯಾಸ ಮತ್ತು ಉದ್ಘಾಟನೆ ಮಾಡಿದ ರೀತಿಯಿಂದ ಆರಂಭವಾಗಿ ಊಟವೂ ಸೇರಿದಂತೆ ಇಡೀ ದಿನದ ಕಾರ್ಯಕ್ರಮದಲ್ಲಿ ಇದು ಕಂಡು ಬಂತು.

ಜೊಯ್ಡಾದ ಮಾದೇವ ವೇಳಿಪ ಡೊಳ್ಳು ಬಾರಿಸುವ ಮೂಲಕ ಉದ್ಘಾಟನೆ ಮಾಡಿದ ರೀತಿ ವಿಶಿಷ್ಟವಾಗಿತ್ತು. ಮಾದೇವ ವೇಳಿಪ ಮತ್ತು ಅವರ ತಂಡ ಪ್ರಸ್ತುತ ಪಡಿಸಿದ ಕುಣಬಿ ರಾಮಾಯಣ, ಜೆನ್ನಿಯವರ ಹೋರಾಟದ ಹಾಡುಗಳು, ಪಂಚವಾದ್ಯ, ಗುಮಟೆಪಾಂಗ್ ಸಹಯಾನದ ಸಾಂಸ್ಕೃತಿಕ ವೈವಿಧ್ಯತೆ ಮೆರೆಸಿದವು. ಖ್ಯಾತ ಪತ್ರಕರ್ತ-ಲೇಖಕ ಆರ್.ಜಿ.ಹಳ್ಳಿ ನಾಗರಾಜ್ ಆರ್.ವಿ. ಅವರ 'ಮಕ್ಕಳಿಗೆ ರಾಮಾಯಣ ದರ್ಶನಂ' ಪುಸ್ತಕ ಬಿಡುಗಡೆ ಮಾಡಿ ಪುಸ್ತಕದ ಮತ್ತು ಆರ್.ವಿ. ಜತೆ ಒಡನಾಟಗಳ ಬಗ್ಗೆ ಮಾತನಾಡಿದರು. ಹಿರಿಯ ಕವಿ ಸತೀಶ ಕುಲಕರ್ಣಿ ನಡೆಸಿ ಕೊಟ್ಟ 20ಕ್ಕೂ ಹೆಚ್ಚು ಕವಿಗಳು ಭಾಗವಹಿಸಿದ ಕವಿಗೋಷ್ಠಿ, ಡಾ.ಶ್ರೀಪಾದ ಭಟ್ ನಿರ್ದೇಶನದಲ್ಲಿ ಚಿಂತನ ರಂಗ ಅಧ್ಯಯನ ಕೇಂದ್ರದಿಂದ ಸಾವಿರ ವರ್ಷಗಳ ಹರವಿನ ಕನ್ನಡ ಕವಿಗಳ ಆಯ್ದ ಕವನಗಳ ವಾಚನಾಭಿನಯದ ವಿಶಿಷ್ಟ ರೂಪ 'ಕಾವ್ಯರಂಗ'ದ ಪ್ರಸ್ತುತಿ - ಶ್ರೀಮಂತ ಸಾಂಸ್ಕೃತಿಕ ಅನುಭವ ನೀಡಿದವು.

ಆಹಾರ ಭದ್ರತೆ: ಬೇಕಾಗಿರುವುದು ವಿಶೇಷ ಅಧಿವೇಶನವಲ್ಲ – ವಿಶೇಷ ನಿರ್ಧಾರ

ಸೀತಾರಾಮ ಯೆಚೂರಿ

100 ದಿನಗಳಲ್ಲಿ ತರುತ್ತೇನೆಂದು ಭರವಸೆ ಕೊಟ್ಟು ನಾಲ್ಕು ವರ್ಷಗಳಾದರೂ ತರದಿದ್ದ ಮಸೂದೆಯನ್ನು ತರಲು ಈಗ ವಿಶೇಷ ಸಂಸತ್ ಅಧಿವೇಶನದ ಬಗ್ಗೆ ಮಾತಾಡಲಾಗುತ್ತಿದೆ. ಈ ಮೂಲಕ ಅದನ್ನು ರಾಜಕೀಯ ಬಂಡವಾಳ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ. ಆದರೆ ವಾಸ್ತವವಾಗಿ ಯುಪಿಎ-2 ಸರಕಾರ ಜನತೆಯ ಕಣ್ಣಿಗೆ ಮಣ್ಣೆರಚುತ್ತಿದೆ. ಆಹಾರ ಭದ್ರತಾ ಮಸೂದೆಯಾಗಲೀ, ನಗದು ವರ್ಗಾವಣೆ ಯೋಜನೆಯಾಗಲೀ ಜನಗಳಿಗೆ ಬಹು ಅಗತ್ಯವಾಗಿರುವ ಪರಿಹಾರವನ್ನೇನೂ ಕೊಡುವುದಿಲ್ಲ.

ಸಂಸತ್ತಿನ ಒಂದು ವಿಶೇಷ ಅಧಿವೇಶನವನ್ನು ಕರೆಯಲಾಗುವುದು ಎಂಬ ಊಹಾಪೋಹಗಳಿವೆ. ಸರಕಾರ ಈ ಬಗ್ಗೆ ಏನೂ ಹೇಳಿಲ್ಲ. ಸಂಸದೀಯ ವ್ಯವಹಾರಗಳ ಮಂತ್ರಿಗಳು ಒಂದು ಸರ್ವಪಕ್ಷ ಸಭೆಯನ್ನು ಕರೆಯಬಹುದೆಂದು ಸೂಚಿಸಿದ್ದಾರೆ. ಆದರೆ ಅದು, ಇತ್ತೀಚೆಗೆ ಛತ್ತಿಸ್‌ಗಡದಲ್ಲಿ ನಡೆದ ಅಮಾನುಷ ದಾಳಿಯ ಹಿನ್ನೆಲೆಯಲ್ಲಿ ಮಾವೋವಾದಿ ಪಿಡುಗನ್ನು ಹೇಗೆ ಎದುರಿಸಬೇಕು ಎಂಬುದರ ಮೇಲೆ ಒಂದು ರಾಜಕೀಯ ಒಮ್ಮತವನ್ನು ಬೆಸೆಯುವುದಕ್ಕಾಗಿ. ಆದರೆ, ಮಾಧ್ಯಮ ವರದಿಗಳ ಪ್ರಕಾರ ಆಹಾರ ಭದ್ರತಾ ಮಸೂದೆಯ್ನನ್ನು ಅಂಗೀಕರಿಸಲು ಅನುಕೂಲವಾಗುವಂತೆ ಸಂಸತ್ತಿನ ಒಂದು ವಿಶೇಷ ಅಧಿವೇಶನವನ್ನು ಕರೆಯಲಾಗುತ್ತಿದೆ. ನಮ್ಮ ಓದುಗರಿಗೆ ನೆನಪಿರಬಹುದು– ಯುಪಿಎ-2 ಸರಕಾರ ಅಧಿಕಾರ ವಹಿಸಿಕೊಂಡಾಗ ಆಗಿನ ರಾಷ್ಟ್ರಪತಿಗಳು ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತಾಡಿದ್ದರು. ಆ ಭಾಷಣದಲ್ಲಿ ಅವರು ಯುಪಿಎ-2 ಸರಕಾರ ತನ್ನ ಮೊದಲ 100ದಿನಗಳಲ್ಲಿ ಕೈಗೊಳ್ಳಲಿರುವ ಕ್ರಮಗಳ ರೂಪುರೇಷೆ ನೀಡಿದ್ದರು. ಆ ಪಟ್ಟಿಯಲ್ಲಿ ಆಹಾರ ಭದ್ರತಾ ಮಸೂದೆ ಪ್ರಧಾನವಾಗಿತ್ತು.


ಅದಾಗಿ ನಾಲ್ಕು ವರ್ಷಗಳೇ ಕಳೆದು ಹೋಗಿವೆ. ಇಂತಹ ಒಂದು ಮಸೂದೆಯನ್ನು ಸಂಸತ್ತಿನ ಮುಂದೆ ತಂದು ಅದರ ಅಂಗೀಕಾರ ಪಡೆಯಲು ಸರಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಹೀಗೆ ಮಾಡದಂತೆ ಯಾರೂ ಅದನ್ನು ತಡೆದಿರಲಿಲ್ಲ. ಇಂತಹ ಒಂದು ಮಸೂದೆಯನ್ನು ತರುವ ಬಗ್ಗೆ ಯೋಚಿಸಿದ್ದರೆ ಯಾರೂ ಅದನ್ನು ತಪ್ಪಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಅದು ದೇಶಕ್ಕೆ ಮತ್ತು ಜನತೆಗೆ ಕೊಟ್ಟ ವಚನವನ್ನು ಈಡೇರಿಸದಿದ್ದರೆ ಅದಕ್ಕೆ ತನ್ನನ್ನೇ ಅಲ್ಲದೆ ಬೇರೆ ಯಾರನ್ನೂ ದೂಷಿಸುವಂತಿಲ್ಲ.

ಜನತೆಗೆ ವಿಶ್ವಾಸಘಾತ

ಭಾರತದ ಸಂವಿಧಾನದಲ್ಲಿ ಯಾವುದೇ ವಿಶೇಷ ಅಧಿವೇಶನಕ್ಕೆ ಅವಕಾಶವಿಲ್ಲ. "ರಾಷ್ಟ್ರಪತಿಗಳು ಸಮಯ-ಸಮಯಕ್ಕೆ ತನಗೆ ಯೋಗ್ಯವೆಂದು ಅನಿಸಿದ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸಂಸತ್ತಿನ ಪ್ರತಿಯೊಂದು ಸದನದ ಸಭೆ ಸೇರಬೇಕೆಂದು ಕರೆಯಬಹುದು, ಆದರೆ ಒಂದು ಅಧಿವೇಶನದ ಕೊನೆಯ ಸಭೆ ಮತ್ತು ಮುಂದಿನ ಅಧಿವೇಶನದ ಮೊದಲ ಸಭೆಯ ನಡುವೆ ಆರು ತಿಂಗಳು ಆಗಿರಬಾರದು" ಎನ್ನುತ್ತದೆ ಸಂವಿಧಾನದ ಕಲಮು 85(1). ಆದ್ದರಿಂದ ಕೇಂದ್ರ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಪತಿಗಳು, ಬಜೆಟ್, ಮಳೆಗಾಲ ಮತ್ತು ಚಳಿಗಾಲ ಈ ಮೂರು ಪಾರಂಪರಿಕ ಅಧಿವೇಶನಗಳಲ್ಲದೆ ಹೆಚ್ಚಿನ ಸಭೆಗಳನ್ನೂ ಕರೆಯಬಹುದು. ಆದರೆ ಮಳೆಗಾಲದ ಅಧಿವೇಶನವನ್ನು ಸಾಮಾನ್ಯವಾಗಿ ಜುಲೈ ತಿಂಗಳಲ್ಲಿ ಕರೆಯಲಿರುವುದರಿಂದ, ಈಗ ಅದಕ್ಕೆ ಮೊದಲು ಯಾವುದೇ ಅಧಿವೇಶನವನ್ನು ಕರೆಯುವುದಕ್ಕೆ ಅರ್ಥವಿಲ್ಲ.

ಸಂಸತ್ತಿನ ಒಂದು ವಿಶೇಷ ಅಧಿವೇಶನವನ್ನು ಕರೆಯುವ ಪ್ರಶ್ನೆಯನ್ನು ಮಾಧ್ಯಮಗಳಲ್ಲಿ ಊಹಾಪೋಹದ ಒಂದು ಅಜೆಂಡಾವಾಗಿಸಲಾಗುತ್ತಿದೆ. ಯುಪಿಎ-2 ಸರಕಾರ ಈ ಮೂಲಕ ಜನಗಳಿಗೆ ಆಹಾರ ಭದ್ರತೆಯನ್ನು ಕಲ್ಪಿಸಲು ತನ್ನ ವಚನಬದ್ಧತೆಯನ್ನು ಪ್ರದರ್ಶಿಸಿ ಅದನ್ನು ರಾಜಕೀಯ ಬಂಡವಾಳ ಮಾಡಿಕೊಳ್ಳುವ ಪ್ರಯತ್ನದಲ್ಲಿರುವಂತೆ ಕಾಣುತ್ತದೆ. ತದ್ವಿರುದ್ಧವಾಗಿ, ಈ ವಿಷಯದಲ್ಲಿ ಒಂದು ಶಾಸನ ತರುವ ಭರವಸೆ ಕೊಟ್ಟು ನಾಲ್ಕು ವರ್ಷಗಳ ವಿಳಂಬವೇಕಾಗಿದೆ ಎಂದು ಸರಕಾರವನ್ನೇ ಕೇಳಬೇಕಾಗುತ್ತದೆ. ಈ ವಿಷಯದಲ್ಲಿ ಜನತೆಗೆ ವಿಶ್ವಾಸಘಾತ ಬಗೆದಿರುವುದು ಸರಕಾರವೇ.

ಒಟ್ಟಾರೆಯಾಗಿ 25 ಕೆ.ಜಿ. ಆಹಾರಧಾನ್ಯಗಳನ್ನು, ಅಕ್ಕಿ ಕೆಜಿಗೆ 3ರೂ., ಗೋದಿ 2ರೂ. ಮತ್ತು ರಾಗಿ, ಜೋಳ ಮುಂತಾದವನ್ನು 1ರೂ. ದರದಲ್ಲಿ ಒದಗಿಸುವ ಪ್ರಸ್ತಾವವನ್ನು ಸರಕಾರ ಇಡುತ್ತಿದೆ ಎಂದು ವರದಿಯಾಗಿದೆ. ಬಹಳಷ್ಟು ಆಂತರಿಕ ಜಗ್ಗಾಟದ ನಂತರವೇ ಅಂತಿಮವಾಗಿ ಈ ಪ್ರಸ್ತಾವ ಬಂದಿದೆ ಎಂಬುದು ಸ್ಪಷ್ಟ. 67ಶೇ. ಭಾರತೀಯ ಕುಟುಂಬಗಳು ಈ ಯೋಜನೆಯ ಅಡಿಯಲ್ಲಿ ಬರುತ್ತದೆ ಎನ್ನಲಾಗಿದೆ– 75ಶೇ. ಗ್ರಾಮೀಣ ಭಾರತದಲ್ಲಿ ಮತ್ತು 50ಶೇ. ನಗರ ಪ್ರದೇಶದಲ್ಲಿ. ಹಿಂದೆ ಹಲವು ಬಾರಿ ಈ ಅಂಕಣದಲ್ಲಿ ತೋರಿಸಿ ಕೊಟ್ಟಿರುವಂತೆ, ಇದು ದೇಶದಲ್ಲಿ ಹಸಿವು ಮತ್ತು ಅಪೌಷ್ಟಿಕತೆಯನ್ನು ನೀಗಲು ಏನೇನೂ ಸಾಲದು. ದೇಶದಲ್ಲಿ ಎಲ್ಲ ಕುಟುಂಬಗಳಿಗೆ–ಕನಿಷ್ಟ 90ಶೇ.– ತಿಂಗಳಿಗೆ 35 ಕೆಜಿ ಆಹಾರಧಾನ್ಯಗಳನ್ನು ಹೆಚ್ಚೆಂದರೆ ಕೆಜಿಗೆ 2ರೂ. ದರದಲ್ಲಿ ಒದಗಿಸಿದರೆ ಮಾತ್ರವೇ ನಮ್ಮ ಜನರಿಗೆ ಯಾವುದೇ ಅರ್ಥಪೂರ್ಣ ಆಹಾರ ಭದ್ರತೆ ಸಾಧ್ಯ. ಆದರೆ, ಈ ಯುಪಿಎ-2 ಸರಕಾರ ಅದನ್ನು ಒಪ್ಪಲು ನಿರಾಕರಿಸಿದೆ.




ಅಪೌಷ್ಟಿಕತೆಯಿಂದ ನರಳುತ್ತಿರುವ ಮಗು

ಆಹಾರ ಭದ್ರತೆಯಿಲ್ಲ

ಅಲ್ಲದೆ, ಜನತೆಗೆ ಯಾವುದೇ ಅರ್ಥಪೂರ್ಣ ಆಹಾರ ಭದ್ರತೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರೀಕರಿಸಿದರೆ, ಮತ್ತು ದೇಶದ ಜನಸಂಖ್ಯೆಯನ್ನು ಸಮಗ್ರವಾಗಿ ಒಳಗೊಂಡರೆ ಮಾತ್ರ ಒದಗಿಸಲು ಸಾಧ್ಯ. ಆದರೆ ಇದನ್ನು ಮಾಡುವ ಬದಲು ಸರಕಾರ ಆವಶ್ಯಕ ಸರಕುಗಳನ್ನು ನ್ಯಾಯಬೆಲೆಗಳಲ್ಲಿ ರೇಶನ್ ಅಂಗಡಿಗಳ ಮೂಲಕ ಒದಗಿಸುವುದಕ್ಕೆ ಪರ್ಯಾಯವಾಗಿ ನೇರ ನಗದು ವರ್ಗಾವಣೆಯ ಯೋಜನೆಯನ್ನು ಮುಂದಿಟ್ಟಿದೆ. ಈ ಬಗ್ಗೆ ಮುಂದೆ ನೋಡೋಣ. ಆದರೆ, ಈ ಕ್ರಮಗಳನ್ನು ಜಾರಿಗೆ ತಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯೇ ನಿರರ್ಥಕವಾಗುತ್ತದೆ. ಏಕೆಂದರೆ ನಿಮಗೆ ವರ್ಗಾಯಿಸಿದ ನಗದು ಹಣದಿಂದ ಬೇಕಾದ್ದನ್ನು ಬಹಿರಂಗ ಮಾರುಕಟ್ಟೆಯಿಂದ ಖರೀದಿಸಿ ಎಂದು ಸರಕಾರ ಜನಗಳಿಗೆ ಹೇಳುತ್ತದೆ. ಇದು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿ ಹಾಕುವ ಅತ್ಯುತ್ತಮ ಉಪಾಯ.

ಹಣದುಬ್ಬರ ಹೆಚ್ಚಿದಂತೆ, ಜನಗಳಿಗೆ ವರ್ಗಾಯಿಸಿದ ನಗದಿನ ಬೆಲೆ ಮಾರುಕಟ್ಟೆಯಲ್ಲಿ ಇಳಿಮುಖಗೊಳ್ಳುತ್ತದೆ. ಒಟ್ಟು ಫಲಿತಾಂಶವೆಂದರೆ ಜನರಿಗೆ ಒಂದು ಕನಿಷ್ಟ ಮಟ್ಟದ ಆಹಾರ ಭದ್ರತೆ



ಕೃಪೆ : ದಿ. ಹಿಂದೂ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

45ನೇ ಭಾರತ ಕಾರ್ಮಿಕ ಸಮ್ಮೇಳನದಲ್ಲಿ 'ಯುಪಿಎ ಸರ್ಕಾರ'ದ ಸಂಕಟ
ಅಕ್ಕಿ ಮೇಲೆ ಆಸೆ–ನೆಂಟರ ಮೇಲೆ...?

45ನೇ ಭಾರತ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ವು 17–18 ಮೇ 2013 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಿತು. ಅಲ್ಲಿ ನಡೆದ ಚರ್ಚೆ ಏನು ? ವಿವರಿಸಿದ್ದಾರೆ ಈ ಸಮ್ಮೇಳನದಲ್ಲಿ ಪಾಲ್ಗೊಂಡು ಕಾರ್ಮಿಕ ವರ್ಗದ ಪರ ತಮ್ಮ ವಿಚಾರ ಮಂಡಿಸಿದ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಎಸ್. ಪ್ರಸನ್ನ ಕುಮಾರ್

ಎಸ್. ಪ್ರಸನ್ನ ಕುಮಾರ್

ಭಾರತ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ವು ಕಾರ್ಮಿಕ ಪ್ರಶ್ನೆಗಳ ಕುರಿತ ದೇಶದ ಅತ್ಯುನ್ನತವಾದ ತ್ರಿಪಕ್ಷೀಯ ವೇದಿಕೆಯಾಗಿದೆ. 45ನೇ ಭಾರತ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದಲ್ಲಿ ಕೇಂದ್ರ ಸರಕಾರದ ಪ್ರಧಾನ ಮಂತ್ರಿ ಡಾ: ಮನಮೋಹನ ಸಿಂಗ್ ಅದನ್ನು ಉದ್ಘಾಟನೆ ಮಾಡುವುದರ ಮೂಲಕ ಭಾಗವಹಿಸಿದ್ದರು. ಕೇಂದ್ರ ಕಾರ್ಮಿಕ ಮಂತ್ರಿ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯನ್ನು ವಹಿಸಿದ್ದರು. ಮತ್ತು ಎಲ್ಲಾ ಕೇಂದ್ರ ಸರಕಾರ ಇಲಾಖೆಗಳ ಪ್ರತಿನಿಧಿಗಳು, ಎಲ್ಲಾ ರಾಜ್ಯ ಸರಕಾರಗಳ ಪ್ರತಿನಿಧಿಗಳು, ಉದ್ಯಮಪತಿಗಳ 21 ಪ್ರತಿನಿಧಿಗಳು ಮತ್ತು ಕಾರ್ಮಿಕರ ಸಂಘಟನೆಗಳ 21 ಪ್ರತಿನಿಧಿಗಳು ಭಾಗವಹಿಸಿದ್ದರು. ಸಿಐಟಿಯು ಪರವಾಗಿ ಇಬ್ಬರು ಪ್ರತಿನಿಧಿಗಳು ಮತ್ತು ಇಬ್ಬರು ಸಲಹೆಗಾರರಾಗಿ ಭಾಗವಹಿಸಿದ್ದರು. ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಹಾಗೂ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿಗಳಾದ ಹೇಮಲತಾ, ಎಸ್.ಪ್ರಸನ್ನಕುಮಾರ್ ಮತ್ತು ಎ.ಆರ್.ಸಿಂಧೂ ಅವರುಗಳು ಭಾಗವಹಿಸಿದ್ದರು.

ಪ್ರಧಾನಿಗಳು ತಮ್ಮ ಭಾಷಣದಲ್ಲಿ ಫೆಬ್ರವರಿ 20, 21 ರಂದು ನಡೆದ ಮುಷ್ಕರದ ಕುರಿತು ಪ್ರಸ್ತಾಪ ಮಾಡಿದ್ದೂ ವಿಷೇಶವಾಗಿತ್ತು. ರಾಷ್ಟ್ರದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ 48 ಗಂಟೆಗಳ ಐಕ್ಯ ಮುಷ್ಕರವು ಪ್ರಧಾನ ಮಂತ್ರಿ ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಲೇಬೇಕಾದ ಪ್ರಭಾವನ್ನು ಬೀರಿತ್ತು. ಮುಷ್ಕರದ ಬೇಡಿಕೆಗಳ ಕುರಿತು ಪ್ರಸ್ತಾಪಿಸಿ ಈ ಬೇಡಿಕೆಗಳು ಕಾರ್ಮಿಕ ಸಂಘಟನೆಗಳು ಮುಂದಿಟ್ಟಿದ್ದರೂ ಕೇವಲ ಕಾರ್ಮಿಕರಿಗೆ ಸಂಬಂಧಿಸಿದವುಗಳಿಗೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಇಡೀ ದೇಶದ ಎಲ್ಲಾ ಜನರಿಗೆ ಸಂಬಂಧಿಸಿವೆ ಎಂದು ವಿಶ್ಲೇಷಣೆ ಮಾಡಿದರು.

ಭಿನ್ನಾಭಿಪ್ರಾಯವಿಲ್ಲ– ಆದರೆ....

"ಮುಷ್ಕರದ ಬೇಡಿಕೆಗಳ ಕುರಿತು ಭಿನ್ನಾಭಿಪ್ರಾಯ ಇರಲು ಸಾಧ್ಯವಿಲ್ಲ. ಆದರೆ ಸದರಿ ಬೇಡಿಕೆಗಳನ್ನು ಪರಿಹರಿಸುವ ವಿಧಾನ, ಕ್ರಮಗಳ ಕುರಿತು ವ್ಯತ್ಯಾಸಗಳಿರಬಹುದು" ಎಂದು ಪ್ರಧಾನಿಗಳು ತಮ್ಮ ಸರಕಾರದ ಧೋರಣೆಯ ವಿಮುಖತೆಯನ್ನು ಪರೋಕ್ಷವಾಗಿ ಹೊರಹಾಕಿದರು.

ತಿರುಚಿದ ಬೇಡಿಕೆ

ಕನಿಷ್ಟ ಕೂಲಿಯ ಕುರಿತು ಕಾರ್ಮಿಕ ಸಂಘಟನೆಗಳು ಕನಿಷ್ಟ ರೂ.10,000/– ಗಳನ್ನು ಪ್ರತಿ ತಿಂಗಳು 15ನೇ ಭಾರತ ಕಾರ್ಮಿಕ ಸಮ್ಮೇಳನದ ಮಾರ್ಗಸೂಚಿಯಂತೆ ಹಾಗೂ 'ರಪ್ತಕೋಸ್ ಬ್ರೆಕ್ಟ್' ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ತೀರ್ಪಿನ ಸಾರಾಂಶ ಒಳಗೊಂಡು ನಿಗದಿ ಮಾಡಬೇಕು. ಹಾಗೂ ಷೆಡ್ಯೂಲ್‌ಗಳಲ್ಲಿ ಪಟ್ಟಿ ಮಾಡಿದ ಕೈಗಾರಿಕೆಗಳಿಗೆ ಮಾತ್ರ ಕನಿಷ್ಟ ವೇತನ ಎಂಬ ಪರಿಕಲ್ಪನೆ ಬದಲಾಗಿ ಯಾವುದೇ ಷಡ್ಯೂಲ್ ವ್ಯತ್ಯಾಸವಿಲ್ಲದೆ ದೇಶದ ಎಲ್ಲಾ ದುಡಿಯುವ ಕಾರ್ಮಿಕರಿಗೆ ಕನಿಷ್ಟ ವೇತನ ನಿಗದಿ ಮಾಡಬೇಕೆಂದು ಹಕ್ಕೊತ್ತಾಯ ಮಾಡಲಾಗಿದೆ. ಆದರೆ ಪ್ರಧಾನ ಮಂತ್ರಿಗಳ ಭಾಷಣದಲ್ಲಿ 'ರಾಷ್ಟ್ರೀಯ ತಳ ಮಟ್ಟದ ಕನಿಷ್ಟ ವೇತನ' ಕುರಿತು ಕೇಂದ್ರ ಮಂತ್ರಿಮಂಡಲದಲ್ಲಿ ಪರಿಗಣಿಸಲಾಗುತ್ತಿದೆ ಎಂದು ಪ್ರಸ್ತಾಪಿಸಿರುವುದು ಕಾರ್ಮಿಕ ಸಂಘಟನೆಗಳ ಪ್ರಮುಖ ಬೇಡಿಕೆಯನ್ನು ತಿರುಚಿದಂತಾಯಿತು.

ನುಣುಚಿಕೊಳ್ಳುವ ಜಾಣತನ.

ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಕಾರ್ಮಿಕ ಸಮ್ಮೇಳನದ 4 ಪ್ರಮುಖ ಚರ್ಚಾ ವಿಷಯಗಳ ಕುರಿತು ಸೂಕ್ತ ರೀತಿಯಲ್ಲಿ ಪ್ರಸ್ತಾಪ ಮಾಡದಿರುವುದು ಕೇಂದ್ರ ಸರಕಾರದ ನುಣುಚಿಕೊಳ್ಳುವ ಪ್ರವೃತ್ತಿಯನ್ನು ಎತ್ತಿ ತೋರುತ್ತದೆ. ಅದರಲ್ಲೂ ಮೊದಲನೆಯ ಚರ್ಚಾ ವಿಷಯವಾಗಿದ್ದ ಕೇಂದ್ರ ಸರಕಾರದ ವಿವಿಧ ಯೋಜನೆಗಳಲ್ಲಿ ನೇಮಕವಾಗಿ ದುಡಿಯುತ್ತಿರುವ ಅಂಗನವಾಡಿ, ಬಿಸಿ ಊಟ, ಆಶಾ ಮತ್ತು ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ಕೋಟ್ಯಂತರ ಮಹಿಳಾ ನೌಕರರು ದುಡಿಯುತ್ತಿರುವ ಕುರಿತಾಗಲಿ ಅವರ ಸೇವಾ ಸೌಲಭ್ಯಗಳನ್ನು ನಿರ್ಧಿಷ್ಟಗೊಳಿಸುವ ಕುರಿತಾಗಲಿ ಒಂದು ಶಬ್ದವನ್ನೂ ಪ್ರಸ್ತಾಪ ಮಾಡದಿರುವುದು ಸರಕಾರದ ಧೋರಣೆಯನ್ನು ಬಯಲು ಮಾಡುತ್ತದೆ.

ಭಾರತ ಕಾರ್ಮಿಕ ಸಮ್ಮೇಳನದಲ್ಲಿ ಆರಂಭಿಕವಾಗಿ ವಿವಿಧ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಮತ್ತು ಮಾಲೀಕರ ಸಂಘಟನೆಗಳ ಪ್ರತಿನಿಧಿಗಳು ಹಾಗೂ ರಾಜ್ಯ ಸರಕಾರಗಳ ಪ್ರತಿನಿಧಿಗಳು ಕ್ರಮವಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಸಿಐಟಿಯು ಪರವಾಗಿ ತಪನ್ ಸೇನ್ ಅವರು ಮಾತನಾಡಿ ಪ್ರಧಾನ ಮಂತ್ರಿಗಳು ಅವರ ಭಾಷಣದಲ್ಲಿ ಇಂದಿನ ಭಾರತ ಕಾರ್ಮಿಕ ಸಮ್ಮೇಳನದ ಪ್ರಮುಖ ಚರ್ಚಾ ವಿಷಗಳಲ್ಲಿ ಮೊದಲನೆಯದಾಗಿರುವ ಸರಕಾರದ ಸ್ಕೀಂಗಳಲ್ಲಿ ನೇಮಕವಾಗಿ ದುಡಿಯುತ್ತಿರುವ ಅಂಗನವಾಡಿ, ಬಿಸಿಊಟ, ಆಶಾ ಮುಂತಾದ ನೌಕರರ ಸೇವಾ ಪರಿಸ್ಥಿತಿಗಳ ಕುರಿತು ಪ್ರಸ್ತಾಪ ಮಾಡದಿರುವುದು ನಾಗರೀಕ ಸಮಾಜದಲ್ಲಿ ಸಮ್ಮತವಾಗಿರದ ವಿಚಾರವಾಗಿದೆ. ಸಮಾಜದ ಮುಂದಿನ ಪೀಳಿಗೆಯಾಗಿರುವ ಮಕ್ಕಳ ಮತ್ತು ಗರ್ಭಿಣಿಯರ ಮತ್ತು ಮಹಿಳೆಯರ ಉಪಚಾರ, ಆರೈಕೆ ಮತ್ತು ಶಿಕ್ಷಣ ನೀಡುವ ಮಹತ್ವದ ಕೆಲಸದಲ್ಲಿ ತೊಡಗಿರುವ ಸ್ಕೀಂ ಕಾರ್ಮಿಕರ ಬಗ್ಗೆ ಕಾಳಜಿ ವಹಿಸುವುದು ಸರಕಾರದ ಆದ್ಯ ಕರ್ತವ್ಯವಾಗಿದೆ ಎಂದು ಒತ್ತಿ ಹೇಳಿದರು. ಇಂದಿನ ಸಮ್ಮೇಳನವು ಈ ವಿಷಯದ ಪರಿಹಾರಕ್ಕಾಗಿ ಹೆಚ್ಚಿನ ಗಮನ ನೀಡಬೇಕೆಂದು ವಿಚಾರ ಮಂಡಿಸಿದರು.





ಪಿಪಿಪಿ ಮಾದರಿ ಸರಿಯಲ್ಲ

ಪ್ರಧಾನ ಮಂತ್ರಿಗಳು ಕಾರ್ಮಿಕ ಮುಷ್ಕರದ ಬೇಡಿಕೆಗಳ ಕುರಿತು ಪ್ರಸ್ತಾಪಿಸಿ ಬೇಡಿಕೆಗಳ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳು ಇರಲು ಸಾಧ್ಯವಿಲ್ಲ ಎಂದಿರುವುದನ್ನು ತಪನ್ ಸ್ವಾಗತಿಸಿದರು. ಬೇಡಿಕೆಗಳ ಪರಿಹಾರದ ಕಡೆಗೆ ಪ್ರಮುಖ ಕ್ರಮಗಳನ್ನು ಕೈಗೊಳ್ಳಲು ಸರಕಾರ ಮುಂದಾಗಬೇಕೆಂದು ಒತ್ತಾಯಿಸಿದರು. ಅಲ್ಲದೇ ಸರಕಾರವು ಸರಕಾರ ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿ ಅನುಸರಿಸಲು ಒತ್ತು ನೀಡುತ್ತಿರುವುದು ಸರಿಯಲ್ಲ. ಇಂತಹ ಪಿಪಿಪಿ ಮಾದರಿಯಿಂದಾಗಿಯೇ ಹಲವು ಅನಾಹುತಗಳಾಗುತ್ತಿವೆ ಎಂದು ವಿವಿಧ ಪ್ರಕರಣಗಳನ್ನು ಉದಾಹರಿಸಿದರು. ಕಾರ್ಮಿಕ ಕಾನೂನುಗಳ ಜಾರಿಯಲ್ಲಿ ವಿಳಂಬವು ಮತ್ತು ನಿರ್ಲಕ್ಷವು ಸಲ್ಲದು ಎಂದು ಅವರು ಪ್ರತಿಪಾದಿಸಿದರು.

ದಮನ ಕಾರ್ಯ ನಿಲ್ಲಲಿ

ಕಾರ್ಮಿಕರು ಹೋರಾಟಗಳಲ್ಲಿ ಭಾಗವಹಿಸಿದ್ದಕ್ಕಾಗಿ 20, ಫೆಬ್ರವರಿ ರಂದು ಮುಷ್ಕರದಲ್ಲಿ ಭಾಗವಹಿಸಿದ್ದಕ್ಕಾಗಿ ಉತ್ತರ ಪ್ರದೇಶದ ನೊಯಿಡಾದಲ್ಲಿ 200ಕ್ಕೂ ಅಧಿಕ ಕಾರ್ಮಿಕರನ್ನು ಜೈಲುಪಾಲು ಮಾಡಿದ್ದೂ ಇದುವರೆಗೆ ಬೇಲ್ ನೀಡದೇ ಕಿರುಕುಳ ನೀಡಲಾಗುತ್ತಿದೆ. ಹಾಗೂ ಮಾರುತಿ ಸುಜುಕಿ ಕಾರ್ಮಿಕರು ಅವರ ನ್ಯಾಯವಾದ ಬೇಡಿಕೆಗಳನ್ನು ಮಂಡಿಸಿ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ ಹರಿಯಾಣ ರಾಜ್ಯ ಸರಕಾರ ಮತ್ತು ಮಾರುತಿ ಸುಜುಕಿ ಮಾಲೀಕರು ಶಾಮೀಲಾಗಿ 1 8 5 ಕಾರ್ಮಿಕರನ್ನು ಜೈಲಿಗೆ ತಳ್ಳಲಾಗಿದೆ ಹಾಗೂ 500ಕ್ಕೂ ಹೆಚ್ಚಿನ ಖಾಯಂ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿ ಅನ್ಯಾಯ ಮಾಡಲಾಗಿದೆ. ಇದರಲ್ಲಿ ಮಾಲೀಕರ ಲಾಭ ಹೆಚ್ಚಿಸಿಕೊಳ್ಳಲು ಅನುಕೂಲ ಮಾಡುವ ಸರಕಾರದ ಧೋರಣೆ ಮಾತ್ರ ಸಾಬೀತಾಗುತ್ತದೆ ಎಂದು ಇಂತಹ ಪ್ರಕರಣಗಳನ್ನು ಸಿಐಟಿಯು ಪರವಾಗಿ ತಪನ್ ಖಂಡಿಸಿದರು.

ಬಂಡವಾಳಿಗರ ಲೂಟಿ ನಿಲ್ಲಲಿ

ಸರಕಾರವು ತೆರಿಗೆ ಸಂಗ್ರಹ ವಿಧಾನದಲ್ಲೂ ಮಾಲೀಕರಿಗೆ ಹಲವು ಉಡುಗೊರೆಗಳನ್ನು ನೀಡುತ್ತಿದೆ. ಅದರಲ್ಲಿ 2012 ವರ್ಷದಲ್ಲಿ ಸು. 5 ಲಕ್ಷ ಕೋಟಿಗಳ ತೆರಿಗೆಯನ್ನು ದೊಡ್ಡ ಕಂಪನಿಗಳಿಂದ ವಸೂಲಿ ಮಾಡದೇ ರಿಯಾಯತಿ ಕೊಡಲಾಗಿದೆ. ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವ ನೆಪದಲ್ಲಿ ಕಾರ್ಮಿಕರನ್ನು ಸುಲಿಗೆ ಮಾಡಲು ಅವಕಾಶ ಮಾಡಿಕೊಡುವುದಷ್ಟೇ ಅಲ್ಲ, ದೇಶದ ಖಜಾನೆಗೆ ಜನರಿಂದ ಸಂಗ್ರಹಿಸಿದ ಹಣವನ್ನು ಲೂಟಿ ಮಾಡಲು ಅನುವು ಮಾಡಿಕೊಡಲಾಗುತ್ತಿದೆ. ಆದರೆ ದೇಶದ ಒಟ್ಟು ಸಂಪತ್ತಿನ ಸೃಷ್ಟಿಯಲ್ಲಿ ಪ್ರಧಾನ

ಪುಟ 12 ಕ್ಕೆ

ಶಿಕ್ಷಣ ಕ್ಷೇತ್ರವನ್ನು ಶುದ್ಧೀಕರಿಸಲು ಎಸ್‌ಎಫ್‌ಐ ಒತ್ತಾಯ

ಹಿಂದಿನ ಸರ್ಕಾರ ಅನುಸರಿಸಿದ ತಪ್ಪು ನೀತಿಗಳನ್ನು ಬದಲಾಯಿಸಿ ವಿದ್ಯಾರ್ಥಿ-ಶಿಕ್ಷಕರ ಪರವಾದ ನೀತಿಗಳನ್ನು ಜಾರಿಗೊಳಿಸಿ ಶಿಕ್ಷಣ ಕ್ಷೇತ್ರವನ್ನು ಶುದ್ಧೀಕರಿಸಬೇಕೆಂದು ಹೊಸ ಸರ್ಕಾರಕ್ಕೆ ಭಾರತ ವಿದ್ಯಾರ್ಥಿ ಫೆಢರೇಷನ್ (SFI) ನ ಮನವಿ

ಚಿಕ್ಕರಾಜು .ಎಸ್

2008ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಶಿಕ್ಷಣದ ವ್ಯಾಪಾರೀಕರಣ-ಖಾಸಗೀಕರಣ-ಕೇಸರೀಕರಣವನ್ನು ತೀವ್ರಗೊಳಿಸಿ. ಶಿಕ್ಷಣ ಕ್ಷೇತ್ರವನ್ನು ಅಧೋಗತಿಗೆ ತಳ್ಳಿತ್ತು. ರಾಜ್ಯದಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದಿರುವ ರಾಜ್ಯ ಸರ್ಕಾರದ ಮೇಲೆ ಸಹಜವಾಗಿ ವಿದ್ಯಾರ್ಥಿ-ಯುವಜನರು ಅನೇಕ ನಿರೀಕ್ಷೆಗಳನ್ನಿಟ್ಟುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂದಿನ ಸರ್ಕಾರ ಅನುಸರಿಸಿದ ತಪ್ಪು ನೀತಿಗಳನ್ನು ಬದಲಾಯಿಸಿ ವಿದ್ಯಾರ್ಥಿ-ಶಿಕ್ಷಕರ ಪರವಾದ ನೀತಿಗಳನ್ನು ಜಾರಿಗೊಳಿಸಿ ಶಿಕ್ಷಣ ಕ್ಷೇತ್ರವನ್ನು ಶುದ್ಧೀಕರಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಯು ಜೂನ್ 6, 2013 ರಂದು ಬೆಂಗಳೂರಿನಲ್ಲಿ ಮತ ಪ್ರದರ್ಶನ ನಡೆಸಿತು.


ಸಾರ್ವಜನಿಕ ಶಿಕ್ಷಣ ಇಲಾಖೆ ಕಚೇರಿಯ ಮುಂದೆ ನಡೆದ ಪ್ರದರ್ಶನವನ್ನುದ್ದೇಶಿಸಿ ವಿವಿಧ ಮುಖಂಡರು ಮಾತನಾಡಿದರು. ಸಂಘಟನೆಯ ರಾಜ್ಯ ಆಧ್ಯಕ್ಷರಾದ ಅನಂತ ನಾಯ್ಕ್. ಎನ್., ಜಿಲ್ಲಾ ಅಧ್ಯಕ್ಷ ಮುಜನಿರಾಜು. ಎಂ., ಜಿಲ್ಲಾ ಕಾರ್ಯದರ್ಶಿ ಚಿಕ್ಕರಾಜು. ಎಸ್., ಉಪಾಧ್ಯಕ್ಷರಾದ ಯುವರಾಜ್, ಬೆಂಗಳೂರು ದಕ್ಷಿಣ ಸಂಚಾಲಕರಾದ ವೆಂಕಟೇಶ್. ಕೆ, ಸಹ ಸಂಚಾಲಕ ಚಲುವರಾಜು .ಬಿ.ಸಿ. ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಉಮಾಶಂಕರ್‌ರವರು ಪ್ರತಿಭಟನಾ ನಿರತ-ರಿಂದ ಮನವಿ ಸ್ವೀಕರಿಸಿ ಈ ಬೇಡಿಕೆಗಳ ಕುರಿತು ಚರ್ಚಿಸಲು ಶಿಕ್ಷಣ ಸಚಿವರು, ಅಧಿಕಾರಿಗಳು ಹಾಗು ಸಂಘಟನೆಯ ಮುಖಂಡರನ್ನೊಳಗೊಂಡ ಸಭೆಯನ್ನು ವ್ಯವಸ್ಥೆಗೊಳಿಸುವುದಾಗಿ ಭರವಸೆ ನೀಡಿದರು. ಮನವಿ ಪತ್ರದ ಪ್ರಮುಖ ಬೇಡಿಕೆಗಳು ಇಂತಿವೆ.

ಶಿಕ್ಷಣ ಹಕ್ಕು ಕಾಯ್ದೆ ಜಾರಿ

ಸಂವಿಧಾನಬದ್ಧ ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ- 2009ನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಗೊಳಿಸುವ ಬದಲಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾಗಿ ಹಿಂದಿನ ಸರ್ಕಾರ ನಿಯಮಗಳನ್ನು ರೂಪಿಸಿತ್ತು. ಕಾಯ್ದೆಯ ಪ್ರಕಾರ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲೂ ಖಾಸಗಿ ಶಾಲೆಗಳಲ್ಲಿ ಸಾಮಾಜಿಕವಾಗಿ-ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶೇ.25 ರಷ್ಟು ಪ್ರವೇಶ ನೀಡಬೇಕಾದರೆ ಇನ್ನಷ್ಟು ಶುಲ್ಕ ಹೆಚ್ಚಿಸುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕ ವರ್ಗ ಸರ್ಕಾರದ ಮೇಲೇ ಒತ್ತಡ ಹೇರುತ್ತಿದೆ. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಖಾಸಗಿ ಶಾಲೆಗಳ ಒತ್ತಡಕ್ಕೆ ಮಣಿಯಬಾರದು. ಶುಲ್ಕ ಹೆಚ್ಚಳ ಮಾಡಬಾರದು. ಸಂವಿಧಾನ ಬದ್ಧ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಲು ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ನೀಡಬೇಕು.

ಡೊನೇಷನ್ ಸುಲಿಗೆ

ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತೆ ಬೆಳೆದಿವೆ. ಸರ್ವರಿಗೂ



ಶಿಕ್ಷಣ ನೀಡಬೇಕೆನ್ನುವ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಖಾಸಗಿ ಶಾಲೆಗಳು ದಲಿತ-ಹಿಂದುಳಿದ-ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನಿರಾಕರಿಸುತ್ತಿವೆ. ವಿದ್ಯಾರ್ಥಿ-ಪೋಷಕರಿಂದ ಲಕ್ಷಾಂತರ ರೂಪಾಯಿಗಳನ್ನು ವಂತಿಗೆ-ಡೊನೇಷನ್ ಹೆಸರಿನಲ್ಲಿ ವಸೂಲಿ ಮಾಡುತ್ತಿವೆ. 1983ರ ಕರ್ನಾಟಕ ಶಿಕ್ಷಣ ಅಧಿನಿಯಮದ ಪ್ರಕಾರ ಡೊನೇಷನ್ ಹಾವಳಿ ನಿಯಂತ್ರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 'ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ'ವನ್ನು ರಚಿಸಬೇಕೆಂಬ ನಿಯಮವಿದ್ದರೂ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅದು ಅಸ್ತಿತ್ವದಲ್ಲಿಲ್ಲ. ಇದ್ದರೂ ಕ್ರಿಯಾಶೀಲವಾಗಿಲ್ಲ. ಆದ್ದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿ ತಡೆಗಟ್ಟಲು ಎಲ್ಲಾ ಜಿಲ್ಲೆಗಳಲ್ಲಿ ಈ 'ಪ್ರಾಧಿಕಾರ'ವನ್ನು ರಚಿಸಿ ಅದು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಕ್ರಮಕೈಗೊಳ್ಳಬೇಕು.

ಮುಚ್ಚಿರುವ ಸರ್ಕಾರಿ ಶಾಲೆಗಳನ್ನು ಪುನರಾಂಭಿಸಿ

ರಾಜ್ಯದಲ್ಲಿ ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಿ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಬೇಕಿದ್ದ ರಾಜ್ಯಸರ್ಕಾರ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ನೆಪವೊಡ್ಡಿ ರಾಜ್ಯದ 3,174 ಸರ್ಕಾರಿ ಶಾಲೆಗಳನ್ನು ಮುಚ್ಚಿದೆ. ಪ್ರೊ. ಗೋವಿಂದ ವರದಿಯ ಶಿಫಾರಸ್ಸಿನಂತೆ ಒಟ್ಟು 12,740 ಶಾಲೆಗಳನ್ನು ಮುಚ್ಚಲು ಹಿಂದಿನ ಬಿಜೆಪಿ ಸರ್ಕಾರ ಹುನ್ನಾರ ನಡೆಸಿತ್ತು. ರಾಜ್ಯದ ಲಕ್ಷಾಂತರ ದಲಿತ-ಹಿಂದುಳಿದ-ಅಲ್ಪಸಂಖ್ಯಾತ ಬಡ ವಿದ್ಯಾರ್ಥಿಗಳು ಓದುತ್ತಿರುವ ಸರ್ಕಾರಿ ಶಾಲೆಗಳನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು. ಈಗಾಗಲೇ ಮುಚ್ಚಿರುವ ಶಾಲೆಗಳನ್ನು ಮತ್ತೆ ತೆರೆಯಬೇಕು ಮತ್ತು ಅಗತ್ಯ ಮೂಲ ಸೌಲಭ್ಯಗಳನ್ನು ನೀಡಬೇಕು.

ಮೂಲಸೌಕರ್ಯಗಳು ರಾಜ್ಯದಲ್ಲಿ 38 ಸಾವಿರ ಶಿಕ್ಷಕರ ಹುದ್ದೆಗಳು ಮತ್ತು ಶೇ. 27ರಷ್ಟು ಕಾಲೇಜು ಹಾಗೂ ವಿ.ವಿ. ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇವೆ. ಶೇ. 68 ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿನಿಯರ ಪ್ರತ್ಯೇಕ ಶೌಚಾಲಯಗಳಿಲ್ಲ. ಕುಡಿಯುವ ನೀರು, ಗ್ರಂಥಾಲಯ, ಆಟದ ಮೈದಾನಗಳಿಲ್ಲದೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗಿದೆ. ರಾಜ್ಯದ 11 ಲಕ್ಷ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದಿದ್ದಾರೆ. ಆದ್ದರಿಂದ ರಾಜ್ಯದ ಎಲ್ಲಾ ಶಾಲಾ-ಕಾಲೇಜು-ವಿ.ವಿ.ಗಳಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಮುಂದಾಗಬೇಕು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಅಗತ್ಯವಿರುವ ಶಿಕ್ಷಕ-ಉಪನ್ಯಾಸಕ ಹಾಗೂ ಸಿಬ್ಬಂದಿಗಳನ್ನು ನೇಮಿಸಬೇಕು.

ಶಿಕ್ಷಣದ ಕೇಸರೀಕರಣ

ಹಿಂದಿನ ಬಿಜೆಪಿ ಸರ್ಕಾರ 5 ಮತ್ತು 8 ನೇ ತರಗತಿಯ ಪಠ್ಯ ಪುಸ್ತಕಗಳ ಪರಿಷ್ಕರಣೆಯ ಹೆಸರಿನಲ್ಲಿ ಜಾತಿ ಪದ್ಧತಿಯನ್ನು ಪುಷ್ಟಿಗೊಳಿಸುವ, ಧರ್ಮಾಂಧತೆ, ದ್ವೇಷವನ್ನು ಹುಟ್ಟಿಸುವ, ವೈದಿಕ ವ್ಯವಸ್ಥೆಯನ್ನು ವೈಭವೀಕರಿಸುವ ಅನೇಕ ವಿಚಾರಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸಿದೆ. ಶಾಲಾ ಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನು ಲೆಕ್ಕಿಸದೇ ಹೊರೆಯಾಗಿರುವ, ಸುಳ್ಳು ಇತಿಹಾಸವಿರುವ ಪಠ್ಯಪುಸ್ತಕಗಳನ್ನು ರಚಿಸಲಾಗಿದೆ. ಶಿಕ್ಷಣ ತಜ್ಞರ ಅಭಿಪ್ರಾಯಗಳ ಬದಲಾಗಿ ಸಂಘಪರಿವಾರದ ಅಭಿಪ್ರಾಯಗಳನ್ನು ತುಂಬುವ ಮೂಲಕ ಸಂವಿಧಾನದ ಮೌಲ್ಯಗಳನ್ನು ಗಾಳಿಗೆ ತೂರಲಾಗಿದೆ. ಆರ್‌ಎಸ್‌ಎಸ್‌ಗೆ ಸೇರಿದ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್‌ನ ಪುಸ್ತಕಗಳ ಖರೀದಿಗೆ 17 ಕೋಟಿ, ಗಂಗಾಜಲ, ಲಾಡು ವಿತರಣೆ ನೂರಾರು ಕೋಟಿ ಹಣ ನೀಡಿದ್ದೆ ಮತ ಬ್ಯಾಂಕ್ ಮಾಡಿಕೊಳ್ಳಲು 396 ಕೋಟಿ ರೂಪಾಯಿಗಳಷ್ಟು ಜನತೆಯ ತೆರಿಗೆಯ ಹಣವನ್ನು ಮಠಗಳಿಗೆ ನೀಡಲಾಗಿದೆ. ಆದ್ದ-ರಿಂದ ಕೇಸರೀಕರಣಗೊಂಡಿರುವ ಪಠ್ಯಗಳನ್ನು ಮರುಪರಿಷ್ಕರಣೆ ನಡೆಸಬೇಕು. ಶಿಕ್ಷಣ ತಜ್ಞರು, ಸಾಹಿತಿ ಚಿಂತಕರನ್ನೊಳಗೊಂಡ 'ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ' ರಚಿಸಬೇಕು. ಮಠಗಳಿಗೆ ಹಣ ನೀಡುವುದನ್ನು ನಿಲ್ಲಿಸಬೇಕು.

ಹಾಸ್ಟೇಲ್ ವಿದ್ಯಾರ್ಥಿಗಳ ನಿರ್ಲಕ್ಷ್ಯ

ರಾಜ್ಯದಲ್ಲಿ ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಸಿಗುತ್ತಿಲ್ಲ. ಹಾಸ್ಟೆಲ್‌ಗಳಲ್ಲಿ ಕನಿಷ್ಟ ಮೂಲ ಸೌಕರ್ಯಗಳಿಲ್ಲ. ಪೌಷ್ಟಿಕ ಆಹಾರ ಸಿಗುತ್ತಿಲ್ಲ. ಜೈಲಿನಲ್ಲಿರುವ ಖೈದಿಗಳಿಗೆ ಪ್ರತಿದಿನ 120 ರೂ. ಖರ್ಚು ಮಾಡುತ್ತಿರುವ ಸರ್ಕಾರ ಹಾಸ್ಟೆಲ್ ವಿದ್ಯಾರ್ಥಿಗಳ ಆಹಾರ ಭತ್ಯೆಗೆ ಕೇವಲ ರೂ. 28 ಮಾತ್ರ ಖರ್ಚು ಮಾಡುತ್ತಿದೆ. ಅಲ್ಲದೇ ಪರಿಶಿಷ್ಟ ಜಾತಿ ಪಂಗಡಗಳ ವಿದ್ಯಾರ್ಥಿಗಳಿಗೆ ಸಮರ್ಪಕವಾ ವಿದ್ಯಾರ್ಥಿವೇತನ ಬಿಡುಗಡೆಯಾಗುತ್ತಿಲ್ಲ. ಆದ್ದರಿಂದ ಅರ್ಜಿಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಒದಗಿಸಬೇಕು. ಹೊಸ ಹಾಸ್ಟೆಲ್‌ಗಳನ್ನು ತೆರೆಯಬೇಕು. ಮೆಟ್ರಿಕ್ ಪೂರ್ವ ಹಾಸ್ಟೆಲ್ ವಿದ್ಯಾರ್ಥಿಗಳಿಗೆ-ತಿಂಗಳಿಗೆ 3,000/- ಮೆಟ್ರಿಕ್ ನಂತರದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ತಿಂಗಳಿಗೆ 3,500/- ಆಹಾರ ಭತ್ಯೆಯನ್ನು ಹೆಚ್ಚಿಸಬೇಕು.

ಖಾಸಗಿ ವಿ.ವಿ.ಗಳ ಸ್ಥಾಪನೆ ಕೈಬಿಡಿ

ರಾಜ್ಯದಲ್ಲಿ ಸರ್ಕಾರಿ ವಿ.ವಿ.ಗಳು ಮೂಲ ಸೌಕರ್ಯಗಳಿಲ್ಲದೇ ನರಳುತ್ತಿವೆ. ವಿ.ವಿ.ಗಳನ್ನು ಅಭಿವೃದ್ಧಿಪಡಿಸಲು ಅಗತ್ಯ ಹಣಕಾಸನ್ನು ಒದಗಿಸುವ ಬದಲು ಹಿಂದಿನ ಸರ್ಕಾರ 22 ಖಾಸಗಿ ವಿ.ವಿ.ಗಳಿಗೆ ಅನುಮತಿ ನೀಡಿದೆ. ರಾಜ್ಯದಲ್ಲಿ ಈಗಾಗಲೇ ಡೀಮ್ಡ್ ವಿ.ವಿ. ಗಳಾಗಿ ಅಕ್ರಮಗಳನ್ನು ನಡೆಸಿ ಕಪ್ಪುಪಟ್ಟಿಗೆ ಸೇರಿ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ನೂತನ ಸರ್ಕಾರಕ್ಕೆ ಯುವಜನರ ಮನವಿ:

ನಿರುದ್ಯೋಗ ನಿವಾರಣೆ : ಸರ್ಕಾರದ ಪ್ರಮುಖ ಆದ್ಯತೆಯಾಗಲಿ – ಡಿವೈಎಫ್ಐ ಆಗ್ರಹ

ರಾಜ್ಯದಲ್ಲಿ ಬಿಜೆಪಿಯ ದುರಾಡಳಿತ ಕೊನೆಗೊಂಡು ಜನತೆಗೆ ಅನ್ಯ ಪರ್ಯಾಯವಿಲ್ಲದೆ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಸಾಮಾನ್ಯ ಜನತೆಯೂ ಸೇರಿದಂತೆ ಯುವಜನರು ಬಿಜೆಪಿಯ ಅವಧಿಯಲ್ಲಿ ತೀವ್ರವಾಗಿ ಬೇಸತ್ತಿದ್ದು, ಸಹಜವಾಗಿ ಹೊಸ ಸರ್ಕಾರದ ಮೇಲೆ ಸಾಮಾನ್ಯ ಜನತೆಯೂ ಸೇರಿದಂತೆ ಯುವಜನರು ಒಳ್ಳೆಯ ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭ್ರಷ್ಟತೆ ಇಲ್ಲದ ಮತ್ತು ಜನಪರ ಸರ್ಕಾರವನ್ನು ನೀಡುತ್ತೇವೆಂದು ಭರವಸೆ ನೀಡಿದ್ದಾರೆ. ಮಾತು ಮತ್ತು ಭರವಸೆಗಳು ವಾಸ್ತವವಾಗಿ ಸಾಕಾರಗೊಳ್ಳಬೇಕು. ಮುಖ್ಯಮಂತ್ರಿಯವರು ಆರಂಭದಲ್ಲೇ ಕಡುಬಡವರಿಗೆ ಒಂದೆರಡು ಅನುಕೂಲಕರ ಕ್ರಮಗಳನ್ನು ಘೋಷಿಸಿದ್ದಾರೆ. ಜೊತೆಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೇಳಿಕೊಂಡಿರುವಂತೆ ಎಲ್ಲಾ ವರ್ಗದ ಅದರಲ್ಲೂ ವಿಶೇಷವಾಗಿ ಯುವಜನರ ಸಮಸ್ಯೆ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಬದ್ಧತೆಯನ್ನು ಪ್ರದರ್ಶಿಸಬೇಕಿದೆ.


ಈ ಹಿನ್ನೆಲೆಯಲ್ಲಿ ರಾಜ್ಯದ ಯುವಜನರ ಸಮಸ್ಯೆಗಳನ್ನು ಕಾಂಗ್ರೆಸ್ ಸರಕಾರ ಹಂತ ಹಂತವಾಗಿ ಬಗೆಹರಿಸಲು ಮುಂದಾಗಬೇಕು. ಅದರಲ್ಲೂ ದಿನೇ ದಿನೇ ಉಲ್ಬಣಗೊಳ್ಳುತ್ತಿರುವ ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮೊದಲ ಆದ್ಯತೆ ನೀಡಬೇಕಿದೆ. ಬಹುಮುಖ್ಯವಾಗಿ ಕಳೆದ ಜನದ್ರೋಹಿ ಬಿಜೆಪಿ ಸರ್ಕಾರ ಅನುಸರಿಸಿದ್ದ ಉದ್ಯೋಗನಾಶದ ನೀತಿಗಳನ್ನು ಕೈಬಿಡಬೇಕಿದೆ. ಈ ಅಂಶಗಳ ಆಧಾರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ನೂತನ ರಾಜ್ಯ ಸರ್ಕಾರಕ್ಕೆ ಯುವಜನರ ಪರವಾಗಿ ಮನವಿಯನ್ನು ಮೇ 30, 2013 ರಂದು ರಾಜ್ಯದಾದ್ಯಂತ ತಾಲ್ಲೂಕು-ಜಿಲ್ಲಾಧಿಕಾರಿಗಳ ಮುಖಾಂತರ ಈ ಕೆಳಕಂಡ ಪ್ರಮುಖ ಅಂಶಗಳ ಆಧಾರದಲ್ಲಿ ಸಲ್ಲಿಸಿದೆ.

-ಕೇಂದ್ರದಲ್ಲಿ ಇದೇ ಕಾಂಗ್ರೆಸ್‌ನ ನೇತೃತ್ವದಲ್ಲಿರುವ ಯುಪಿಎ ಸರ್ಕಾರ ಖಾಸಗಿ ದೇಶಿ-ವಿದೇಶಿ ಕಾರ್ಪೋರೇಟ್ ಕಂಪನಿಗಳ ಪರವಾಗಿ ನವ ಉದಾರೀಕರಣದ ನೀತಿಗಳನ್ನು ಅನುಸರಿಸುತ್ತಿರುವುದರಿಂದ ಮತ್ತದೇ ನೀತಿಗಳನ್ನು ಕಳೆದ ರಾಜ್ಯದಲ್ಲಿ ಬಿಜೆಪಿಯೂ ಅಷ್ಟೇ ಪೈಪೋಟಿಯಿಂದ ಕಾರ್ಪೋರೇಟ್ ಕಂಪನಿಗಳಿಗೆ ರೆಡ್ ಕಾರ್ಪೆಟ್ ಹಾಸಿ ಇದ್ದಷ್ಟು ಉದ್ಯೋಗಗಳನ್ನೂ ನಾಶ ಮಾಡತೊಡಗಿತ್ತು. ಇಂತಹ ನೀತಿಗಳನ್ನು ತಕ್ಷಣದಲ್ಲೇ ನೂತನ ರಾಜ್ಯ ಸರ್ಕಾರ ಕೈಬಿಡಬೇಕು. ಮುಖ್ಯಮಂತ್ರಿಯವರ ಮಾತಿನಂತೆ ಇದು ನಿಜಕ್ಕೂ 'ಜನಪರ ಸರ್ಕಾರ'ವೆನಿಸಿಕೊಳ್ಳಬೇಕಾದರೆ ಮೊದಲಿಗೆ

ಬಿಜೆಪಿ ಸರ್ಕಾರ ತೊಲಗಿ ರಾಜ್ಯದಲ್ಲಿ ಹೊಸದೊಂದು ಸರ್ಕಾರ ಅಧಿಕಾರಕ್ಕೆ ಬಂದಿದೆ. ರಾಜ್ಯದ ಜನಸಂಖ್ಯೆಯ ಸರಿ ಸುಮಾರು ಅರ್ಧದಷ್ಟಿರುವ ಯುವಜನರ ದೃಷ್ಟಿಯಿಂದ ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳೇನು ? ಯುವಜನರ ಬದುಕಿನ ಬವಣೆಗಳಿಗೆ ನೀಡಬೇಕಾದ ತುರ್ತು ಪರಿಹಾರವೇನು ? ಓದಿ, ಈ ವಿಷಯದಲ್ಲಿ ಡಿವೈಎಫ್ಐ ಸಂಘಟನೆಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಸೂಚನೆ ಏನು.

ಸಾಮಾನ್ಯ ಬಡಜನತೆ ತಮ್ಮ ಕೆಲಸ ಕಾರ್ಯಗಳಿಗೆ ಸರ್ಕಾರಿ ಇಲಾಖೆಗಳಿಗೆ ಎಡತಾಕಿದಾಗ ಸತಾಯಿಸದೆ ಟೇಬಲ್ ಕೆಳಗಡೆ ಹಣ ವಸೂಲಿ ಮಾಡದೆ ಕಾನೂನು ರಿತ್ಯ ಕೆಲಸಗಳನ್ನು ಮಾಡಿಕೊಡುವಂತಾಗಬೇಕು. ಆದರೆ ಇಂತಹ ಕೆಲಸಗಳನ್ನು ಮಾಡಿಕೊಡಬೇಕಾದ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಮಂಜೂರಾಗಿರುವಷ್ಟು ಅಧಿಕಾರಿವರ್ಗ ಮತ್ತು ನೌಕರರಿಲ್ಲದೆ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ, ಸಂಭಾವನೆ, ತರಬೇತಿ, ಪ್ರಯೋಗ ದಿನಗಳು, ಗೌರವಧನ, ಅತಿಥಿ ಸೇವೆ ಮುಂತಾದ ಸೇವೆಗಳ ಹೆಸರಿನಲ್ಲಿ ಅತ್ಯಂತ ಕಡಿಮೆ ವೇತನ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಅಗಾಧವಾಗಿ ದುಡಿಸಿಕೊಂಡು ಶೋಷಿಸಲಾಗುತ್ತಿದೆ.

ಹೀಗಾಗಿ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ, ಕಾಷ್ಯೂಯಲ್ ಪದ್ಧತಿಯನ್ನು ರದ್ದುಗೊಳಿಸಿ, ಖಾಲಿ ಇರುವ 1.70 ಲಕ್ಷ ಸರ್ಕಾರಿ ಹುದ್ದೆಗಳನ್ನು ಕೂಡಲೇ ರಾಜ್ಯ ಸರ್ಕಾರ ಭರ್ತಿಮಾಡಿಕೊಳ್ಳುವಂತಾಗಬೇಕು. ಹಾಗೆಯೇ ಸರ್ಕಾರದ ಅಧೀನದಲ್ಲಿರುವ ಎಲ್ಲ ಅರೆ ಸರ್ಕಾರಿ, ಅನುದಾನಿತ ಮತ್ತು ಕಾರ್ಖಾನೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿಮಾಡಬೇಕು. ಜನ ಸಾಮಾನ್ಯರ ಅಗತ್ಯಕ್ಕೆ ತಕ್ಕಂತೆ ಸೇವೆ ಒದಗಿಸಲು, ಆ ಮೂಲಕ ಉದ್ಯೋಗ ಸೃಷ್ಟಿಗೂ ಪೂರಕವಾಗಿ ಸರ್ಕಾರಿ ಶಿಕ್ಷಣ-ಆರೋಗ್ಯ-ಸಾಮಾಜ ಕಲ್ಯಾಣ ಮತ್ತು ಸೇವಾ ಕ್ಷೇತ್ರ ಮುಂತಾದ ಅಗತ್ಯ ವಲಯಗಳನ್ನು ವಿಸ್ತರಿಸಬೇಕು. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಲಕ್ಷಾಂತರ ಯುವಜನತೆ ಕನಿಷ್ಠ ವೇತನ ರೂ. 10,000-00ವನ್ನು ಕೂಡಲೇ ನಿಗದಿ ಮಾಡುವಂತಹ ಕಾಯ್ದೆಯನ್ನು ಜಾರಿಗೊಳಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತ್ರಿಯೋಜನೆಯನ್ನು ಸಂಪೂರ್ಣವಾಗಿ ಸ್ಥಳೀಯ ಪಟ್ಟಭದ್ರರಿಗೆ ಕಾಂಟ್ರಾಕ್ಟ್ ಕೊಟ್ಟು ಭ್ರಷ್ಟಗೊಂಡಿದೆ. ಇದನ್ನು ಶುದ್ಧೀಕರಿಸಿ ಸಮಗ್ರವಾಗಿ ಜಾರಿಗೆ ತರುವ ಮೂಲಕ ನ್ಯಾಯಾಲಯಗಳ ಅದೇಶದಂತೆ ಅನುಷ್ಠಾನಗೊಳಿಸಬೇಕು. ಉದ್ಯೋಗ ನೇಮಕಾತಿ ಸಂದರ್ಭದಲ್ಲಿ ಅರ್ಜಿ ಶುಲ್ಕ, ಡಿ.ಡಿ.ಮುಂತಾದ ಹೆಸರಿನಲ್ಲಿ ನಿರುದ್ಯೋಗಿಗಳಿಂದಲೇ ನೂರಾರು ರೂಪಾಯಿಗಳನ್ನು ವಸೂಲಿ ಮಾಡುವುದನ್ನು ಕೂಡಲೇ ತಡೆಗಟ್ಟಬೇಕು. ಕೌಶಲ್ಯ ಅಭಿವೃದ್ಧಿ ಸಂಸ್ಥೆ ಮತ್ತು ಕಿಯೋನಿಕ್ಸ್ ಹೆಸರಿಗೆ ಮಾತ್ರ ಇದ್ದು ಎಲ್ಲಾ ಕೌಶಲ್ಯ ಅಭಿವೃದ್ಧಿ ಮತ್ತು ತರಬೇತಿಗಳನ್ನು ಖಾಸಗಿ ಕಂಪನಿಗಳಿಗೆ



ಗುತ್ತಿಗೆ ನೀಡಲಾಗುತ್ತಿದೆ. ಖಾಸಗಿ ಕಂಪನಿಗಳು ಭ್ರಷ್ಟಾಚಾರವೆಸಗಿ ಕೇವಲ ಸುಳ್ಳು ಮಾಹಿತಿಗಳನ್ನು ನೀಡಿ ಹಣ ದೋಚುತ್ತಿವೆ. ಇದನ್ನು ತಡೆಗಟ್ಟಿ ಸರ್ಕಾರಿ ಸಂಸ್ಥೆಗಳೇ ಎಲ್ಲಾ ಕೌಶಲ್ಯ ಮತ್ತು ತರಬೇತಿಗಳನ್ನು ನೀಡುವಂತಾಗಬೇಕು. ದಲಿತರಿಗೆ ಖಾಸಗಿ ರಂಗದಲ್ಲಿ ಮೀಸಲಾತಿ ಹಾಗೂ ಅಂಗವಿಕಲರಿಗೆ ಮತ್ತು ಮಹಿಳೆಯರಿಗೆ ಎಲ್ಲಾ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಜಾರಿಗೆ ತರಬೇಕು. ಉದ್ಯೋಗ ನೇಮಕಾತಿಯಲ್ಲಿನ ಭ್ರಷ್ಟಾಚಾರವನ್ನು ತಡೆಗಟ್ಟಿ ಪಾರದರ್ಶಕತೆಯನ್ನು ಪ್ರದರ್ಶಿಸಬೇಕು. ಮಹಾನಗರಗಳ ಕೇಂದ್ರೀಯ ಭಾಗಗಳಲ್ಲಿ ಮನೆ ಬಾಡಿಗೆಗಳು ವಿಪರೀತ ಏರಿದ್ದು, ದುಡಿಯುತ್ತಿರುವ ಅಸಂಘಟಿತ ಉದ್ಯೋಗಿಗಳಿಗೆ ಹಾಸ್ಟೆಲ್‌ಗಳನ್ನು ನಿರ್ಮಿಸಬೇಕು. ಅರ್ಹ ಎಲ್ಲಾ ತರದ ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವವರೆಗೂ ನಿರುದ್ಯೋಗ ಭತ್ಯೆಯನ್ನು ನೀಡಬೇಕು. ಇನ್ನೂ ಉದ್ಯೋಗ ಸೃಷ್ಟಿಗೆ ವ್ಯಾಪಕವಾಗಿ ಅವಕಾಶ ಇರುವ, ಸ್ಥಳಿಯವಾಗಿ ಕೃಷಿ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಆಧರಿಸಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ಸಾರ್ವಜನಿಕ ಉದ್ದಿಮೆಗಳನ್ನು ಆರಂಭಿಸಬೇಕು. ಆಗ ಸ್ವಾಭಾವಿಕವಾಗಿ ಸ್ವಯಂ ಉದ್ಯೋಗಗಳ ಅವಕಾಶಗಳೂ ಹೆಚ್ಚುತ್ತವೆ.

ಶಿಕ್ಷಣ ಮತ್ತು ಯುವಜನ :

ಕಳೆದ ಬಿಜೆಪಿ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆ ಶಾಮೀಲಾಗಿ ಶಿಕ್ಷಣ ವ್ಯಾಪಾರೀಕರಣ ಮಾಡಿದ್ದಲ್ಲದೆ, ಇಡೀ ಸಮಾಜವನ್ನೇ ಕೇಸರೀಕರಣ ಮಾಡಲು ಶಿಕ್ಷಣ ಕ್ಷೇತ್ರವನ್ನು ಕೋಮುವಾದೀಕರಣದ "ಸಂವಹನ ಕೇಂದ್ರ"ವನ್ನಾಗಿಸಿಕೊಂಡಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿ ಇಡೀ ಶಿಕ್ಷಣ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಶೋಧಿಸಿ ಕೋಮುವಾದೀಕರಣವನ್ನು ನಿವಾರಿಸಿ, ಪಠ್ಯಕ್ರಮವನ್ನು ಪುನರ್‌ರಚಿಸಬೇಕು. ಶಿಕ್ಷಣ ವ್ಯಾಪಾರ ತಡೆಗಟ್ಟಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಬೇಕು. ಬಡ, ದಲಿತ-ಹಿಂದುಳಿದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮತ್ತು ವಿದ್ಯಾರ್ಥಿ ವೇತನ ಹೆಚ್ಚಿಸಬೇಕು. ಸರ್ಕಾರಿ ಶಾಲಾ-ಕಾಲೇಜು-ಹಾಸ್ಟೆಲ್-ವಿ.ವಿ.ಗಳಿಗೆ ಮೂಲ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಅಗತ್ಯಕ್ಕೆ ತಕ್ಕಂತೆ ಎಲ್ಲಾ ಹಂತದ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಬೇಕು. ಬಿಜೆಪಿ ಸರ್ಕಾರ ಅನುಮತಿ ನೀಡಿರುವ ಖಾಸಗಿ ವಿವಿಗಳ ಆರಂಭವನ್ನು ತಡೆಹಿಡಿದು ಅನುಮತಿ ರದ್ದು ಮಾಡಬೇಕು. ಸಾಮಾಜಿಕ ನ್ಯಾಯ ವಿರೋಧಿಯಾದ 'ಜ್ಞಾನ ಅಯೋಗ'ವನ್ನು ರದ್ದು ಮಾಡಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ಕೇಂದ್ರೀಯ ಶಾಸನಕ್ಕಾಗಿ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಬೇಕು.

ಸಮಾಜ ಕಲ್ಯಾಣ ಮತ್ತು ಯುವಜನ:

ಪರಿಶಿಷ್ಟಜಾತಿ ಮತ್ತು ಪಂಗಡ, ಹಿಂದುಳಿದ, ಅಲ್ಪ ಸಂಖ್ಯಾತ ಅಭಿವೃದ್ಧಿ ನಿಗಮಗಳಿಂದ ಪಡೆದಿದ್ದ ಫಲಾನುಭವಿಗಳಿಗೆ ಸಾಲ ರದ್ದು ಮಾಡಿರುವುದು ಸ್ವಾಗತಾರ್ಹ ಕ್ರಮ. ಮೂರು ಇಲಾಖೆಗಳಿಂದ 960 ಕೋಟಿ ಹಣವನ್ನು ಸರ್ಕಾರ ಭರಿಸುವಂತಾಗಿದೆ. ಇದು ಈ ವಿಭಾಗದ ಜನಸಂಖ್ಯೆ ಮತ್ತು ಜೀವನದ ಪರಿಸ್ಥಿತಿ ನೋಡಿದರೆ ಏನೇನು ಸಾಲದು. ಹೀಗಾಗಿ ಈ ಮೂರು ನಿಗಮಗಳಿಗೆ ಈಗ ನಿಗದಿ ಮಾಡಿರುವ ಬಜೆಟ್‌ಗಿಂತ ಹತ್ತು ಪಟ್ಟು ಹೆಚ್ಚು ಹಣವನ್ನು ಒದಗಿಸಬೇಕು. ಸಾಲ ಸೌಲಭ್ಯವನ್ನು ನೀಡುವ ಸಂಬಂಧದ ಷರತ್ತುಗಳು ಮತ್ತು ಪ್ರಕಿಯೆಯನ್ನು

ಪುಟ 15 ಕ್ಕೆ

ಆಹಾರ ಭದ್ರತೆ : ಬೇಕಾಗಿರುವುದು........

ಪುಟ 8 ರಿಂದ

ಬೇಕಾದಷ್ಟು ಹಣ ಸಿಗುವುದಿಲ್ಲ. ಆದ್ದರಿಂದ, ಅಂತಿಮವಾಗಿ, ಸಾರ್ವಜನಿಕ ವಿತರಣಾ ವ್ಯವಸ್ಥೆ ಕಳಚಿ ಬಿದ್ದಿರುತ್ತದೆ. ಜನಗಳು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲಾಗದೆ ಇನ್ನಷ್ಟು ಸಂಕಟಗಳ ಕೂಪಕ್ಕೆ ಜಾರುತ್ತಾರೆ.

ರೈತರಿಗೂ ಬೆಂಬಲ ಬೆಲೆಯಿಲ್ಲ

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿ ಹಾಕುವುದರಿಂದ ಇನ್ನೊಂದು ಗಂಭೀರ ಪರಿಣಾಮವೂ ಉಂಟಾಗುತ್ತದೆ. ಸದ್ಯಕ್ಕೆ ಸರಕಾರ ರೈತರಿಗೆ ನಿಗದಿಯಾದ ಕನಿಷ್ಟ ಬೆಂಬಲ ಬೆಲೆಗಳನ್ನು ಕೊಟ್ಟು ಆಹಾರಧಾನ್ಯಗಳನ್ನು ಪಡೆಯುತ್ತದೆ. ಅವನ್ನು ರೇಶನ್ ಅಂಗಡಿಗಳ ಮೂಲಕ ಜನರಿಗೆ ನಿರ್ದಿಷ್ಟ ಬೆಲೆಗಳಲ್ಲಿ ಹಂಚುತ್ತದೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಕಳಚಿ ಹೋದರೆ, ಸರಕಾರ ಇನ್ನು ಮುಂದೆ ರೈತರಿಂದ ಆಹಾರಧಾನ್ಯಗಳನ್ನು ಖರೀದಿಸುವುದಿಲ್ಲ. ಹೀಗೆ ರೈತರಿಗೆ ನ್ಯಾಯಬೆಲೆಗಳನ್ನು ಕೊಡಿಸುವ ಜವಾಬ್ದಾರಿ ಅದಕ್ಕಿರುವುದಿಲ್ಲ. ಈ ಮೂಲಕ ರೈತರು ಈಗ ಇರುವ ಅಲ್ಪ-ಸ್ವಲ್ಪ ಆರ್ಥಿಕ ಭದ್ರತೆಯಿಂದಲೂ ವಂಚಿತರಾಗುತ್ತಾರೆ.

ಹೊಣೆ ಜಾರಿಕೆ

ಹೀಗೆ ನೇರ ನಗದು ವರ್ಗಾವಣೆ ಜನಗಳಿಗೆ ಆಹಾರಧಾನ್ಯಗಳನ್ನು ಒದಗಿಸುವ ಹೊಣೆಯಿಂದ ಜಾರಿಕೊಳ್ಳಲು, ಆಮೂಲಕ ಅವರನ್ನು ಹಸಿವು ಮತ್ತು ಅಪೌಷ್ಟಿಕತೆಗೆ ಬಲಿಯಾಗದಂತೆ ರಕ್ಷಿಸುವ ಹೊಣೆಯನ್ನೂ ಕೈಬಿಡಲು ಅವಕಾಶ ಮಾಡಿ ಕೊಡುತ್ತದೆ. ಇನ್ನೊಂದೆಡೆ, ರೈತರಿಗೆ ಕನಿಷ್ಟ ಬೆಂಬಲ ಬೆಲೆ ಕೊಡಿಸುವ ಜವಾಬ್ದಾರಿಯಿಂದ ಕೈತೊಳೆದುಕೊಳ್ಳಲು ಕೂಡ ಸರಕಾರ-ಕ್ಕೆ ಸಾಧ್ಯವಾಗುತ್ತದೆ. ಇಂತಹ ಒಂದು ವ್ಯವಸ್ಥೆಯ ಮೂಲಕ ಸರಕಾರ ಜನಗಳನ್ನು ಹಸಿವು ಮತ್ತು ಅಪೌಷ್ಟಿಕತೆಯಿಂದ ದೂರವಿಡಬಲ್ಲ ಸಬ್ಸಿಡಿಗಳು ಈಗಾಗಲೇ ಅಲ್ಪ ಪ್ರಮಾಣಕ್ಕೆ ಇಳಿದಿದ್ದರೂ, ಅದನ್ನು ಸತತವಾಗಿ ಕಡಿತ ಮಾಡುತ್ತಲೇ ಇರುತ್ತದೆ; ಅದೇ ವೇಳೆಗೆ ರೈತರಿಗೆ ಕನಿಷ್ಟ ಬೆಂಬಲ ಬೆಲೆ ಕೊಡಲು ಬೇಕಾಗುವ ಸಬ್ಸಿಡಿಗಳನ್ನೂ ಹೊಂದಿಸಬೇಕಾಗಿಲ್ಲ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸರಕಾರ ಜನತೆಯ ಕಣ್ಣಿಗೆ ಮಣ್ಣೆರಚುತ್ತಿದೆ. ಆಹಾರ ಭದ್ರತಾ ಮಸೂದೆಯಾಗಲೀ, ನಗದು ವರ್ಗಾವಣೆ ಯೋಜನೆಯಾಗಲೀ ಜನಗಳಿಗೆ ಬಹು ಅಗತ್ಯವಾಗಿರುವ ಪರಿಹಾರವನ್ನೇನೂ ಕೊಡುವುದಿಲ್ಲ. ಬದಲಿಗೆ, ಸಮಯ ಕಳೆದಂತೆ, ಏರುತ್ತಿರುವ ಬೆಲೆಗಳಿಂದಾಗಿ, ಇಂತಹ ನಗದು ವರ್ಗಾವಣೆಗಳು ಕುಟುಂಬದ ಪೌಷ್ಟಿಕತೆಯ ಅಗತ್ಯಗಳನ್ನು ಪೂರೈಸಲು ಸಾಲದಾಗುತ್ತ ಹೋಗುತ್ತವೆ. ಹೀಗೆ ಈ ಯುಪಿಎ-2 ಸರಕಾರ ನಮ್ಮ ಬಹುಪಾಲು ಜನಸಮೂಹಗಳನ್ನು ಇನ್ನಷ್ಟು ಹೆಚ್ಚಿನ ಸಂಕಟಗಳತ್ತ ನೂಕುತ್ತಿದೆ.

ಆದ್ದರಿಂದ, ಕೊನೆಗೂ ಬೇಕಾಗಿರುವುದು ಸಂಸತ್ತಿನ ವಿಶೇಷ ಅಧಿವೇಶನವಲ್ಲ; ಬೇಕಾಗಿರುವುದು ಜನತೆಗೆ ಒಂದು ನೈಜ, ಪ್ರಾಮಾಣಿಕ ಆಹಾರ ಭದ್ರತೆಯನ್ನು ಒದಗಿಸಬೇಕೆಂಬ ಸರಕಾರದ ಒಂದು ವಿಶೇಷ ನಿರ್ಧಾರ. ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಲು ಬೇಕಾಗುವ ಪ್ರಮಾಣದಲ್ಲಿ ಒದಗಿಸಬೇಕು, ಆಮೂಲಕ ಜನಗಳಿಗೆ ಮೊದಲು ಬದುಕುಳಿಯಲು ಬೇಕಾಗುವ, ನಂತರ ತಮ್ಮ ಬದುಕಿನ ಮಟ್ಟವನ್ನು ಉತ್ತಮಪಡಿಸಲು ಬೇಕಾಗುವ ಸಾಮಗ್ರಿಗಳನ್ನು ಒದಗಿಸಲು ಸಾಧ್ಯವಾಗಬೇಕು. ●

ಅಕ್ಕಿ ಮೇಲೆ ಆಸೆ, ನಂಟರ....

ಪುಟ 9 ರಿಂದ

ಪಾತ್ರವನ್ನು ವಹಿಸುತ್ತಿರುವ ಕಾರ್ಮಿಕರನ್ನು ಕಡೆಗಣಿಸಲಾಗುತ್ತಿರುವುದು ಸಮಂಜಸವಾಗಿಲ್ಲ. ಒಂದು ಕಡೆ ಮಾಲೀಕರ ಲಾಭಕೋರತನಕ್ಕೆ ಸರಕಾರವು ಒತ್ತಾಸೆ ನೀಡುತ್ತಾ ಮತ್ತೊಂದು ಕಡೆ ಕಾರ್ಮಿಕರಿಗೆ ಕುಶಲತೆ ನೀಡುವ ನೆಪದಲ್ಲಿಯೂ ಬಂಡವಾಳಗಾರರಿಗೆ ಹಣ ಮರುಪಾವತಿ ಹೆಸರಲ್ಲಿ ತರಬೇತಿ ನೀಡದೇ ಕೋಟ್ಯಂತರ ರೂಪಾಯಿಗಳನ್ನು ಕೊಡಮಾಡಲಾಗಿದೆ. ಇಂತಹ ಮೋಸದ ಪ್ರಕರಣಗಳ ಕುರಿತು ಹಲವು ದೂರುಗಳನ್ನು ಸಲ್ಲಿಸಿದ ನಂತರ ಈಗ ಸಿಬಿಐ ವಿಚಾರಣೆ ನಡೆಯುತ್ತಿದೆ. ಆದ್ದರಿಂದ ದೇಶದ ಸಂಪತ್ತನ್ನು ಲೂಟಿ ಮಾಡುವ (ಪಿಪಿಪಿ) ಸರಕಾರ ಮತ್ತು ಖಾಸಗಿ ಸಹಭಾಗಿತ್ವದ ಪರಿಕಲ್ಪನೆಯನ್ನು ಕೈಬಿಟ್ಟು, ಮೂಲ ಸೌಕರ್ಯಗಳ ಅಭಿವೃದ್ಧಿ, ಕುಶಲತೆಯ ತರಬೇತಿ ಮತ್ತು ಸಮಾಜ ಮುಖಿ ಕೆಲಸಗಳನ್ನು ಸರಕಾರವು ತನ್ನ ಕರ್ತವ್ಯವಾಗಿ ಅನುಷ್ಟಾನ ಗೊಳಿಸಬೇಕೆಂದು ತಪನ್ ಸೇನ್ ಒತ್ತಾಯಿಸಿದರು.

45ನೇ ಭಾರತ ಕಾರ್ಮಿಕ ಸಮ್ಮೇಳನದಲ್ಲಿ 4 ಪ್ರಮುಖ ವಿಷಯಗಳ ಕುರಿತು ಪ್ರತ್ಯೇಕ ಗುಂಪುಗಳಲ್ಲಿ ಚರ್ಚೆ ತು. ನಾಲ್ಕು ಗುಂಪುಗಳಲ್ಲಿ ಚರ್ಚಿಸಿದ ಬಳಿಕ ಪ್ರಧಾನ ಅಧಿವೇಶನದ ಅನುಮೋದನೆಗಾಗಿ ಮಂಡಿಲಾಯಿತು. ಅದರಲ್ಲಿ 1. ಸರಕಾರದ ವಿವಿಧ ಸ್ಕೀಂ ಗಳಲ್ಲಿ ನೇಮಕವಾಗಿರುವ ಕಾರ್ಮಿಕರ ಸೇವಾ ಪರಿಸ್ಥಿತಿಗಳು, ಸಂಬಳ ಮತ್ತು ಸಾಮಾಜಿಕ ಭದ್ರತಾ ಕ್ರಮಗಳ ಕುರಿತು ಚರ್ಚೆಯಲ್ಲಿ ಸಿಐಟಿಯು ಪರವಾಗಿ ಹೇಮಲತಾ ಭಾಗವಹಿಸಿ ಸಿಐಟಿಯು ನಿಲುಮೆಗಳನ್ನು ಮಂಡಿಸಿದರು. 2. ಸಣ್ಣ ಮತ್ತು ಚಿಕ್ಕ ಉದ್ಯಮಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಅಳವಡಿಸುವ ಕುರಿತು ನಡೆದ ಗುಂಪು ಚರ್ಚೆಯಲ್ಲಿ ಸಿಐಟಿಯು ಪರವಾಗಿ ಎಸ್.ಪ್ರಸನ್ನಕುಮಾರ್ ಭಾಗವಹಿಸಿ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸುತ್ತಿರುವಲ್ಲಿ ಕೊರತೆಗಳು ಸರಿಪಡಿಸುವ ವಿಧಾನ ಕುರಿತು ವಿಚಾರ ಮಂಡಿಸಿದರು. 3. ಸಾಮಾಜಿಕ ಭದ್ರತೆ ಅದರಲ್ಲೂ ಎಲ್ಲರಿಗೂ ಅಂ-ದರೆ ಸ್ವಯಂ ಉದ್ಯೋಗದಲ್ಲಿ ತೊಡಗಿದ ದುಡಿಯುವವರಿಗೂ ಒಳಗೊಂಡು ನಿವೃತ್ತಿ ವೇತನವನ್ನು ಬೆಲೆ ಸೂಚ್ಯಂಕಕ್ಕೆ ಹೊಂದಿಸಿ ಪಿಂಚಣಿ ನೀಡುವ ಕುರಿತು ನಡೆದ ಚರ್ಚೆಯಲ್ಲಿ ತಪನ್ ಸೇನ್ ಅವರು ಭಾಗವಹಿಸಿದ್ದರು. 4. ಕುಶಲತೆಯನ್ನು ತರಬೇತಿ ನೀಡಿ ಉದ್ಯೋಗ ಸಾಮರ್ಥ್ಯವನ್ನು ಉನ್ನತೀಕರಿಸುವ ಗುಂಪು ಚರ್ಚೆಯಲ್ಲಿ ಎ.ಆರ್.ಸಿಂಧೂ ಭಾಗವಹಿಸಿ ವಿಚಾರಗಳನ್ನು ಮಂಡಿಸಿದರು.

ನೌಕರರೆನ್ನಿ, ಕಾರ್ಮಿಕರೆನ್ನಿ ಅದು ಬಿಟ್ಟು...

ಸ್ಕೀಂ ಕಾರ್ಮಿಕರ ಕುರಿತು ಗುಂಪು ಚರ್ಚೆಯಲ್ಲಿ 09 ಶಿಫಾರಸ್ಸುಗಳನ್ನು ಮಾಡಿದ್ದೂ ಅದರಲ್ಲಿ ಮುಖ್ಯವಾಗಿ ಅಂಗನವಾಡಿ, ಬಿಸಿಊಟ, ಆಶಾ ಕಾರ್ಮಿಕರನ್ನು 'ಗೌರವಾರ್ಥ ಕೆಲಸಗಾರರು' ಅಥವಾ 'ಸ್ವಯಂ ಸೇವಕ'ರೆಂದು ಕರೆಯುವುದನ್ನು ನಿಲ್ಲಿಸಿ ಸರಕಾರದ ಅಡಿಯಲ್ಲಿ 'ಕಾರ್ಮಿಕರು' ಎಂದು ಪರಿಗಣಿಸಬೇಕು. ಕನಿಷ್ಟವೇತನ ಜಾರಿಮಾಡಬೇಕು. ಪಿಂಚಣಿ, ಗ್ರಾಚ್ಯುಟಿ ಮುಂತಾದ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕೊಡಬೇಕು ಮುಂತಾದ ಬೇಡಿಕೆಗಳ ಕುರಿತು ಬಹುತೇಕ ಸರ್ವ ಸಮ್ಮತವಾಗಿ ತೀರ್ಮಾನಿಸಲಾಯಿತು. ಆದರೆ ಕೇಂದ್ರ ಸರಕಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು ಮಾತ್ರ ಈ ತಿರ್ಮಾನಗಳಿಗೆ ವಿರೋ ಧ ವ್ಯಕ್ತಪಡಿಸಿದ್ದಾರೆ. ಇಲಾಖೆಯ ಇಂತಹ ಕಾರ್ಮಿಕ ವಿರೋಧಿ ನಿಲುಮೆಯನ್ನು ಭಾರತ ಕಾರ್ಮಿಕ ಸಮ್ಮೇಳನದ ಪ್ರಧಾನ ಅಧಿವೇಶನದಲ್ಲಿ ಕಾರ್ಮಿಕ ಪ್ರತಿನಿಧಿಗಳು ಒಕ್ಕೊರಲಿನಿಂದ ಖಂಡಿಸಿದರು.

ಸಣ್ಣ ಮತ್ತು ಚಿಕ್ಕ ಉದ್ಯಮಗಳ ಮಾಲೀಕರ ಪರವಾಗಿ ಲಘು ಉದ್ಯೋಗ ಭಾರತಿ ಸಂಘಟನೆಯ ಪ್ರತಿನಿಧಿಗಳು ಈ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳ ಜಾರಿ ಕುರಿತು ಪ್ರತ್ಯೇಕ ಕಾನೂನು ಸಂಸತ್ತಿನಲ್ಲಿ ಅಂಗೀಕರಿಸುವುದಕ್ಕೆ ಒತ್ತಾಯ ಮಾಡಿದರು. ಸಿಐಟಿಯು ಪರವಾಗಿ, ಇಂತಹ ಪ್ರಯತ್ನಗಳು ಸರಿಯಲ್ಲ, ಸದ್ಯ ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಲು ಕ್ರಮವಹಿಸಬೇಕು. ಅದ-ಕ್ಕೆ ಬೇಕಾದಂತೆ ಕಾರ್ಮಿಕ ಇಲಾಖೆಯನ್ನು ಬಲಪಡಿಸಬೇಕೆಂದು ಒತ್ತಾಯಿಸಲಾಯಿತು. 2 ಪ್ರಮುಖ ಒಮ್ಮತದ ತೀರ್ಮಾನಗಳನ್ನು ಮಾಡಲಾಯಿತು. 1. ಪ್ರತ್ಯೇಕ ಕಾನೂನು ಅಗತ್ಯವಿಲ್ಲ. ಬದಲಾಗಿ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ಅಗತ್ಯವಾದರೆ ಸರಳೀಕರಣದ ಕ್ರಮಗಳನ್ನು ಕೈಗೊಳ್ಳುವುದು. 2. ಕಾನೂನುಗಳ ಜಾರಿಯಲ್ಲಿ ಇರುವ ತೊಡಕುಗಳನ್ನು ಪರಿಶೀಲನೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ತ್ರಿಪಕ್ಷೀಯ ಸಮಿತಿಯನ್ನು ರಚನೆ ಮಾಡುವುದು.

ಎಲ್ಲ ಕಾರ್ಮಿಕರಿಗೆ ಪಿಂಚಣಿ ಜಾರಿಗೊಳಿಸುವ ಕುರಿತು ಚರ್ಚೆಯಲ್ಲಿ 6 ಶಿಫಾರಸ್ಸುಗಳನ್ನು ಮಾಡಲಾಗಿದೆ. ಅದರಲ್ಲಿ ಪ್ರಮುಖವಾಗಿ ಇಪಿಎಫ್ (ಭವಿಷ್ಯನಿಧಿ) ಸದಸ್ಯರಾಗಿರುವ ಕಾರ್ಮಿಕರಿಗೆ ಕನಿಷ್ಟ ರೂ. 1000/- ಪಿಂಚಣಿ ನಿಗದಿ ಮಾಡಬೇಕು. ಬಡತನ ರೇಖೆಯ ಕೆಳಗೆ (ಬಿಪಿಎಲ್) ಮತ್ತು ಬಡತನ ರೇಖೆ ಮೇಲೆ (ಎಪಿಎಲ್) ಎಂಬ ವ್ಯತ್ಯಾಸವಿಲ್ಲದೇ ಸಾಮಾಜಿಕ ಭದ್ರತಾ ಯೋಜನೆಗಳನ್ನು ಎಲ್ಲಾ ಕಾರ್ಮಿಕರಿಗೆ ಅಳವಡಿಸಿ ಜಾರಿಗೊಳಿಸಬೇಕು. ಪಿಂಚಣಿಯನ್ನು ಬೆಲೆ ಏರಿಕೆ ಸೂಚ್ಯಂಕ-ಕ್ಕೆ ಸಮನ್ವಯಗೊಳಿಸಿ ತುಟ್ಟಿ ಭತ್ಯೆಯನ್ನು ಜೋಡಿಸಿ ಕೊಡಬೇಕು. (ಎನ್‌ಪಿಎಸ್) ಹೊಸ ಪಿಂಚಣಿ ಯೋಜನೆಯಲ್ಲಿ ಖಚಿತವಾಗಿ ಪಿಂಚಣಿ ಕೊಡುವಂತೆ ಕಾನೂನು ತಿದ್ದುಪಡಿ ಮಾಡಬೇಕು ಇತ್ಯಾದಿ ಶಿಫಾರಸ್ಸುಗಳನ್ನು ಮಾಡಲಾಗಿದೆ.

ಕುಶಲತೆ ಅಭಿವೃದ್ಧಿ ಮತ್ತು ಉದ್ಯೋಗ ಸಾಮರ್ಥ್ಯವನ್ನು ಉನ್ನತೀಕರಿಸುವ ಕುರಿತು ಚರ್ಚೆಯಲ್ಲಿ 11 ಶಿಫಾರಸ್ಸುಗಳನ್ನು ಮಾಡಲಾಗಿದೆ. ಅದರಲ್ಲಿ 44ನೇ ಕಾರ್ಮಿಕ ಸಮ್ಮೇಳನದಲ್ಲಿ ಅಂಗೀಕರಿಸಿದ ಉದ್ಯೋಗ ಅವಕಾಶಗಳನ್ನು ಹೆಚ್ಚು ಮಾಡುವ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕು. ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಜನವಿಭಾಗಗಳಿಗೆ ಅಗತ್ಯ ಮೀಸಲಾತಿ ಒಳಗೊಂಡಿರಬೇಕು. ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೂಡಲೇ ಭರ್ತಿ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು. ಉದ್ಯೋಗ ಭರ್ತಿಗಳ ಮೇಲೆ ವಿಧಿಸಿದ ನಿಷೇಧಗಳನ್ನು ಕೂಡಲೇ ತೆಗೆದು ಹಾಕಬೇಕು. ಕುಶಲತೆಯ ತರಬೇತಿ ನೀಡುವ ಯೋಜನೆಗಳನ್ನು ಖಾಸಗಿ ವಲಯಕ್ಕೆ ನೀಡುವುದರ ಕುರಿತು ಪುನರ್ ಪರಿಶೀಲನೆ ನಡೆಸಬೇಕು. ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಹೆಚ್ಚಿಸಿ ಹೆಚ್ಚಿನ ಯುವಜನರಿಗೆ ತರಬೇತಿಯನ್ನು ನೀಡಬೇಕು ಇತ್ಯಾದಿ ಶಿಫಾರಸ್ಸುಗಳನ್ನು ಮಾಡಲಾಗಿದೆ.


45ನೇ ಭಾರತ ಕಾರ್ಮಿಕ ಸಮ್ಮೇಳನದಲ್ಲಿ ಮೊಟ್ಟಮೊದಲ ಬಾರಿಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಹಾ ನಿರ್ದೇಶಕರು ಶ್ರೀ ಗೈ ರೈಡರ್ ಅವರು ಭಾಗವಹಿಸಿದ್ದರು. ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯು ಸಂಘಟನಾ ಹಕ್ಕು, ಸಾಮೂಹಿಕ ಚೌಕಾಸಿ ಹಕ್ಕು ಮತ್ತು ಗೌರವಾನ್ವಿತ ಕೆಲಸ ಮುಂತಾದ ವಿಚಾರಗಳ ಕುರಿತು ಮಾಡಲಾಗಿರುವ ಠರಾವುಗಳನ್ನು ಭಾರತ ಸರಕಾರವು ಅನುಮೋದನೆ ನೀಡುವುದು ಅಗತ್ಯವೆಂದು ಪ್ರತಿಪಾದಿಸಿದರು. ಒಟ್ಟಾರೆ 45ನೇ ಭಾರತ ಕಾರ್ಮಿಕ ಸಮ್ಮೇಳನದ ಶಿಫಾರಸ್ಸುಗಳನ್ನು ಕೂಡಲೇ ಜಾರಿಗೊಳಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳ ಮೇಲೆ ಇಡೀ ಕಾರ್ಮಿಕ ವರ್ಗ ಬಲಿಷ್ಟ ಚಳುವಳಿ ಮೂಲಕ ಒತ್ತಾಯಿಸುವುದು ಅನಿವಾರ್ಯವಾಗಿದೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಎಲ್ಲವೂ ಅಂಬಾನಿಗಳಿಗಾಗಿ?

ಅದು ಅನಿಲ ಬೆಲೆಯೇ ಇರಬಹುದು, 2ಜಿ ಹಂಚಿಕೆಯೇ ಇರಬಹುದು!


ಇದೀಗ ಪರಿಣಿತರ ಅಭಿಪ್ರಾಯ. ಯುಪಿಎ–2 ಸರಕಾರ ಅನಿಲ ದರಗಳನ್ನು ಏರಿಸುವ ಬಗ್ಗೆ ಯೋಚಿಸುತ್ತಿದೆಯಂತೆ– ದೇಶೀ ಅನಿಲ ಉತ್ಪಾದಕರಿಗೆ ಅಂತರ‍್ರಾಷ್ಟ್ರೀಯ ಬೆಲೆ ಕೊಡಿಸಲು ಇದು ಅಗತ್ಯವಂತೆ. ಇದೇ ಸರಕಾರ ಮೂರು ವರ್ಷಗಳ ಹಿಂದೆ 2ಜಿ ತರಂಗಾಂತರವನ್ನು ಅತ್ಯಂತ ಅಗ್ಗ ದರದಲ್ಲಿ ಹಂಚಿತು; ಆಗ ಅದು ಹೂಡಿದ ತರ್ಕ– ಬಳಕೆದಾರರಿಗೆ ದೂರಸಂಪರ್ಕ ಅಗ್ಗ ದರದಲ್ಲಿ ಸಿಗಲಿಕ್ಕಾಗಿ ಎಂದು. ಮೆಚ್ಚತಕ್ಕ ಕಾಳಜಿಯೇ. ಆದರೆ ಇಂಧನ ಅದಕ್ಕಿಂತ ಹೆಚ್ಚು ಅಗತ್ಯವಾದದ್ದು. ಅದರ ಬಳಕೆದಾರರು ವಿಪರೀತ ಹೆಚ್ಚು ಬೆಲೆ ತೆರಬೇಕಾಗುತ್ತದೆ ಎಂಬ ಬಗ್ಗೆ ಈ ಸರಕಾರಕ್ಕೆ ಕಾಳಜಿಯಿಲ್ಲವೇ? ಈ ವೈರುಧ್ಯಕ್ಕೆ ಉತ್ತರ ಕಷ್ಟವೇನಲ್ಲ. ಈ ನಿರ್ಣಯಗಳ ನಿಜವಾದ ಫಲಾನುಭವಿಗಳು ಯಾರು ಎಂದು ನೋಡಿದರೆ ಸಾಕು–ಎನ್ನುತ್ತಾರೆ ದಿಲ್ಲಿ ಸೈನ್ಸ್ ಫೋರಂನ ಪ್ರಬೀರ್ ಪುರಕಾಯಸ್ಥ. ಆಗ ಅನಿಲ್ ಅಂಬಾನಿಗೆ ಪ್ರಯೋಜನ, ಈಗ ಮುಕೇಶ್ ಅಂಬಾನಿಗೆ.



ಪೆಟ್ರೋಲಿಯಂ ಮಂತ್ರಿ ವೀರಪ್ಪ ಮೊಯಿಲಿಯವರು ಇದನ್ನು 'ಬಲವಾಗಿ' ನಿರಾಕರಿಸಿದ್ದಾರೆ. ತಮ್ಮ ಇಲಾಖೆ ಅನಿಲ ಬೆಲೆಗಳನ್ನು ಪರಿಷ್ಕರಿಸುವ (ಅಂದರೆ ಏರಿಸುವ) ಪ್ರಸ್ತಾವವನ್ನು ಇಟ್ಟಿರುವುದನ್ನು ಅವರು ಒಪ್ಪಿಕೊಂಡಿದ್ದಾರೆ; ಆದರೆ ಇದು ಮುಕೇಶ್ ಅಂಬಾನಿಯ ರೆಲಿಯಂಸ್ ಇಂಡಸ್ಟ್ರೀಸ್‌ಗೆ ಅನುಕೂಲ ಒದಗಿಸಲು ಎಂಬ ಆಪಾದನೆಯನ್ನು ತಳ್ಳಿ ಹಾಕಿದ್ದಾರೆ. ರೆಲಿಯಂಸ್‌ಗೆ ಅನುಕೂಲ ಆಗುತ್ತದೆ ಎಂಬುದನ್ನೇನೂ ತಳ್ಳಿ ಹಾಕಲಿಲ್ಲ. ಆದರೆ ಈ ಬೆಲೆಯೇರಿಕೆಯ ಲಾಭ ಸಾರ್ವಜನಿಕ ವಲಯದ ಅನಿಲ ಕಂಪನಿಗಳಿಗೂ ಸಿಗುತ್ತದಲ್ಲ ಎಂಬುದು ಅವರ ಸಮರ್ಥನೆ. ಆದರೆ **ಪೆಟ್ರೋಲಿಯಂ ಇಲಾಖೆಯ ಈ ಪ್ರಸ್ತಾವವನ್ನು ಅದೇ ಯುಪಿಎ–2 ಸರಕಾರದ ರಸಗೊಬ್ಬರ ಹಾಗೂ ವಿದ್ಯುತ್ ಇಲಾಖೆಗಳು ವಿರೋಧಿಸಿವೆ ಎಂಬುದು** ಗಮನಾರ್ಹ. ಏಕೆಂದರೆ, ಇದರೊಂದಿಗೆ ರಸಗೊಬ್ಬರ ಮತ್ತು ವಿದ್ಯುತ್ ಮೇಲಿನ ಸಬ್ಸಿಡಿಗಳ ಭಾರವೂ ಹೆಚ್ಚುತ್ತದೆ. ಅನಿಲದ ದರಗಳಲ್ಲಿ ಪ್ರತಿಯೊಂದು ಡಾಲರ್ ಏರಿಕೆಯಿಂದ ರಸಗೊಬ್ಬರದ ಉತ್ಪಾದನೆಯ ವೆಚ್ಚ ಏರುತ್ತದೆ; ಇದರಿಂದಾಗಿ ಸರಕಾರದ ಸಬ್ಸಿಡಿ ಹೊರೆ 3,155 ಕೋಟಿ ರೂ. ಗಳಷ್ಟು ಏರುತ್ತದೆ. ವಿದ್ಯುತ್ ಇಲಾಖೆಯ ಸಬ್ಸಿಡಿ ಮೊತ್ತವೂ 10,400 ಕೋಟಿ ರೂ.ಗಳಷ್ಟು ಏರುತ್ತದೆ ಎಂದು ಅವು ಲೆಕ್ಕ ಹಾಕಿವೆ. ಈ ಬೆಲೆಯೇರಿಕೆ ರಂಗರಾಜನ್ ಸಮಿತಿಯ ಶಿಫಾರಸಿನ ಮೇಲೆ ಎಂಬುದು ಪೆಟ್ರೋಲಿಯಂ ಮಂತ್ರಿಗಳ ಇನ್ನೊಂದು ಸಮರ್ಥನೆ. ಇದರ ಪ್ರಕಾರ ಅನಿಲದ ದರಗಳಲ್ಲಿ ಕನಿಷ್ಟ 4 ಡಾಲರುಗಳ ಏರಿಕೆ ಆಗಬೇಕು. ಅಂದರೆ ರಸಗೊಬ್ಬರ ಸಬ್ಸಿಡಿಗಳಲ್ಲಿ 16,992 ಕೋಟಿ ರೂ. ಹೆಚ್ಚಳ ಮತ್ತು ವಿದ್ಯುತ್ ಸಬ್ಸಿಡಿಗಳಲ್ಲಿ 43,360 ಕೋಟಿ ರೂ.ಹೆಚ್ಚಳ, ಒಟ್ಟು ಸುಮಾರು ವರ್ಷಕ್ಕೆ 60ಸಾವಿರ ಕೋಟಿ ರೂ.ಗಳ ಹೆಚ್ಚಳ!

ಆದರೆ ಈ ಹೆಚ್ಚಳವನ್ನು ಅನಿಲ ಉತ್ಪಾದನೆಯ ಮೇಲಿನ ರಾಯಲ್ಟಿಗಳ ಹೆಚ್ಚಳದಿಂದ, ತೆರಿಗೆ ಮೊತ್ತಗಳ ಆದಾಯದಿಂದ ಹೊಂದಿಸಬಹುದು ಎಂಬುದು ಪೆಟ್ರೋಲಿಯಂ ಮಂತ್ರಿಗಳ ಮತ್ತೊಂದು ಸಮರ್ಥನೆ. ಇದೇ ತರ್ಕ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸಬ್ಸಿಡಿಗಳಿಗೆ ಸಂಬಂಧಪಟ್ಟಂತೆಯೂ ಅನ್ವಯವಾಗಬೇಕಲ್ಲವೇ? ಹಾಗಿದ್ದರೆ ಅದನ್ನೇಕೆ ಕಡಿತ ಮಾಡಲು ಇದೇ ಸರಕಾರ ಮುಂದಾಯಿತು ಎಂಬ ಪ್ರಶ್ನೆಯೂ ಅವರಿಗೆ ಹೊಳೆದಿರಲಿಕ್ಕಿಲ್ಲ ಎಂದೇನಲ್ಲ. **ಈ ಬೆಲೆಯೇರಿಕೆಯಿಂದ ರಿಲಯನ್ಸ್ ಕಂಪನಿಗೆ 80,000 ಕೋಟಿ ರೂ.ಗಳಷ್ಟು ಲಾಭವಾಗುತ್ತದೆ ಎಂಬ ಲೆಕ್ಕಾಚಾರ ಮಾತ್ರವೇ ಈ ಏರಿಕೆಯ ಬಗ್ಗೆ ಗುಮಾನಿ ಹುಟ್ಟಿಸಿರುವುದಲ್ಲ; ಪೆಟ್ರೋಲಿಯಂ ಮಂತ್ರಿಗಳ ಬದಲಾವಣೆ, ರಂಗರಾಜನ್ ಸಮಿತಿಯ ನೇಮಕ ಮತ್ತು ಅದು ತನ್ನ ಶಿಫಾರಸಿಗೆ ಕೊಟ್ಟಿರುವ ತರ್ಕವೂ ಅದೇ ಗುಮಾನಿ ಹುಟ್ಟಿಸಿದೆ.**

ಅನಿಲ ಉತ್ಪಾದನೆಯನ್ನು 'ಮಿಲಿಯ ಬ್ರಿಟಿಶ್ ಥರ್ಮಲ್ ಯುನಿಟ್' ಎಂದು ಅಳೆಯುತ್ತಾರೆ. ರೆಲಿಯಂಸ್ ಕಂಪನಿ ಇಂತಹ ಒಂದು ಯುನಿಟ್‌ಗೆ 2.34 ಡಾಲರ್ ದರದಲ್ಲಿ ರಾಷ್ಟ್ರೀಯ ತಾಪ ವಿದ್ಯುತ್ ನಿಗಮ(ಎನ್‌ಟಿಪಿಸಿ)ದ ಕವಸ್ ಮತ್ತು ಗಾಂಧಾರ್ ಸ್ಥಾವರಗಳಿಗೆ 17 ವರ್ಷಗಳ ಕಾಲ ಒದಗಿಸುವ ಭರವಸೆ ನೀಡಿತ್ತು. ಆದರೆ ಪ್ರಣಬ್ ಮುಖರ್ಜಿ ನೇತೃತ್ವದ 'ಮಂತ್ರಿಗಳ ಗುಂಪು'(ಇಜಿಒಎಂ) ಅನಿಲದ ಬೆಲೆಯನ್ನು 4.42 ಡಾಲರು ಎಂದು ನಿಗದಿ ಮಾಡಿದಾಗ ರೆಲಿಯಂಸ್ ಕಂಪನಿ ಒಪ್ಪಂದದಂತೆ ನಡೆದುಕೊಳ್ಳಲಿಲ್ಲ. ಅಷ್ಟೇ ಅಲ್ಲ, ಕೃಷ್ಣ–ಗೋದಾವರಿ ಕಣಿವೆಯ ಡಿ6 ಅನಿಲ ನಿಕ್ಷೇಪದಲ್ಲಿ ಸರಕಾರದೊಡನೆ ಇದ್ದ ಲಾಭ ಹಂಚಿಕೊಳ್ಳುವ ಯೋಜನೆಯಲ್ಲಿ ಮೋಸ ನಡೆಸಲು ಂುಂತ್ರಿಸಿತ್ತಂ – ಬಂಡವಾಳ ಖರ್ಚನ್ನು ಹೆಚ್ಚಾಗಿ ತೋರಿಸಿ, ಮತ್ತೊಂದೆಡೆ ಅನಿಲ ಉತ್ಪಾದನೆಯ ಪ್ರಮಾಣವನ್ನು ಬೇಕೆಂದೇ ಕಡಿತ ಮಾಡಿತು. ಮಹಾಲೆಕ್ಕ ಪರಿಶೋಧಕರ(ಸಿಎಜಿ) ವರದಿ ಈ ಬಗ್ಗೆ ಪೆಟ್ರೋಲಿಯಂ ಇಲಾಖೆ ಮತ್ತು ರೆಲಿಯಂಸ್ ಕಂಪನಿ ಎರಡರ ಬಗ್ಗೆಯೂ ತೀವ್ರ ಟೀಕೆಯನ್ನು ಮಾಡಿದೆ.



ವೇದರಾಜ ಎನ್.ಕೆ.

ಈ ಬಗ್ಗೆ ಕ್ರಮ ವಹಿಸುವುದಂತೂ ದೂರ, ಪ್ರಧಾನ ಮಂತ್ರಿಗಳು ರಿಝರ್ವ್ ಬ್ಯಾಂಕಿನ ನಿವೃತ್ತ ಗವರ್ನರ್ ರಂಗರಾಜನ್ ಅಧ್ಯಕ್ಷತೆಯಲ್ಲಿ ಅನಿಲ ಬೆಲೆ ನಿಗದಿ ಬಗ್ಗೆ ಸೂಚಿಸಲು ಒಂದು ಸಮಿತಿಯನ್ನು ರಚಿಸಿದರು. ಈ ಸಮಿತಿ ಭಾರತದಲ್ಲಿ ಉತ್ಪಾದಿಸುವ ಅನಿಲದ ಬೆಲೆ ಆಮದು ಮಾಡುವ ಅನಿಲದ ಮಾರುಕಟ್ಟೆ ಬೆಲೆಯನ್ನು ಆಧರಿಸಿರಬೇಕು ಎಂಬ ವಿಚಿತ್ರ ಶಿಫಾರಸನ್ನು ಮಾಡಿತು. ಇದರ ಪ್ರಕಾರ ಅನಿಲದ ಬೆಲೆ ದ್ವಿಗುಣಗೊಳ್ಳುತ್ತದೆ, 8.8 ಡಾಲರಿನಿಂದ ಆರಂಭಿಸಿ ನಾಲ್ಕು ವರ್ಷಗಳಲ್ಲಿ 14 ಡಾಲರಿಗೇರಿಸಬೇಕು. ಯಾವುದೇ ಬೆಲೆ ನಿಗದಿಯನ್ನು ಉತ್ಪಾದನೆಗೆ ತಗಲುವ ವೆಚ್ಚ ಮತ್ತು ಒಂದು ತರ್ಕಬದ್ಧ ಲಾಭದ ಪ್ರಮಾಣ ಸಿಗುವಂತೆ ಮಾಡಬೇಕೆಂಬುದು ಒಪ್ಪತಕ್ಕ ಸಂಗತಿ. ಆದರೆ ಇದಕ್ಕೆ ಯಾವುದೇ ಸಂಬಂಧವಿಲ್ಲದ ಅಂತರ‍್ರಾಷ್ಟ್ರೀಯ ಬೆಲೆಗಳನ್ನು ಆಧರಿಸಿರಬೇಕೆಂಬ ಶಿಫಾರಸು ಅರ್ಥವಾಗುವಂತದ್ದಲ್ಲ ; ಸಂಬಂಧಪಟ್ಟ ಉತ್ಪಾದಕರಿಗೆ ಆಕಸ್ಮಿಕ ಧನಲಾಭ ದೊರಕಿಸುವುದೇ ಉದ್ದೇಶವಾಗಿದ್ದರೆ ಮಾತ್ರ ಇದನ್ನು ಅರ್ಥಮಾಡಿಕೊಳ್ಳಬಹುದು ಎನ್ನುತ್ತಾರೆ ಪರಿಣಿತರು.

ಪೆಟ್ರೋಲಿಯಂ ಇಲಾಖೆಯ ಮಂತ್ರಿಗಳ ಬದಲಾವಣೆ ಆದ ಮೇಲೆ, ಆ ಇಲಾಖೆ ರಂಗರಾಜನ್ ಸಮಿತಿಯ ಶಿಫಾರಸನ್ನು ಒಪ್ಪಿಕೊಳ್ಳುತ್ತದೆ ಎಂಬ ನಿರೀಕ್ಷೆ ಈಗ ನಿಜವಾಗಿದೆ. ಮೊಂಟೆಕ್‌ಸಿಂಗ್ ಅಹ್ಲುವಾಲಿಯವರ ನೇತೃತ್ವದ ಯೋಜನಾ

ಪುಟ 15 ಕ್ಕೆ

'ಸಲ್ವ ಜುಡುಂ' ಪರಿಹಾರವೋ, ಸಮಸ್ಯೆಯೋ: ಆಳುವ ಪಕ್ಷದಲ್ಲಿ ಗೊಂದಲ

ಮಾವೋವಾದಿಗಳೆಂದು ಹೇಳಿಕೊಳ್ಳುವವರ ಹಿಂಸಾಚಾರವನ್ನು ಎದುರಿಸುವುದು ಹೇಗೆ? ಈ ಬಗ್ಗೆ ಯುಪಿಎ–2 ಸರಕಾರದ ನೇತೃತ್ವ ವಹಿಸಿರುವ ಪಕ್ಷದಲ್ಲಿನ ಗೊಂದಲ ಇನ್ನೂ ಹೆಚ್ಚಿರುವಂತೆ ಕಾಣುತ್ತದೆ. ಈ ಹಿಂಸಾಚಾರವನ್ನು ಎದುರಿಸಲೆಂದು 'ಸಲ್ವ ಜುಡುಂ' ಎಂಬ ಪಡೆಯನ್ನು ರಚಿಸಿದ ಮಹೇಂದ್ರ ಕರ್ಮ ಸೇರಿದಂತೆ ಛತ್ತೀಸ್‌ಗಡದ ಕಾಂಗ್ರೆಸ್ ಮುಖಂಡರುಗಳ ಹತ್ಯೆ ಮತ್ತೆ ಈ ಪ್ರಶ್ನೆಯನ್ನು ಎತ್ತಿದೆ. ರಾಯಪುರದಲ್ಲಿ 'ಸಲ್ವ ಜುಡುಂ' ಸ್ಥಾಪಕನೆಂದು ಮಹೇಂದ್ರ ಕರ್ಮರವರ ಸ್ಮರಣೆಗೆ ಕಾಲೇಜು ಸ್ಥಾಪಿಸಲು ಅಲ್ಲಿನ ಕಾಂಗ್ರೆಸ್ ಮಂದಿ ಯೋಚಿಸುತ್ತಿದ್ದರೆ, ಯುಪಿಎ–2 ಸರಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಿಗಳು ಸಲ್ವ ಜುಡುಂ ಒಂದು 'ಪಾಪೀ ಕಾರ್ಯತಂತ್ರ' ಎಂದು ತೀವ್ರವಾಗಿ ಟೀಕಿಸಿದ್ದಾರೆ.

ಆರಿಸಿದ ಬುಡಕಟ್ಟು ಯುವಕರಿಗೆ ಹಿಂಸಾಚಾರವನ್ನು 'ಎದುರಿಸುವ' ತರಬೇತಿ ನೀಡಿ ಅವರದ್ದೇ ಒಂದು ಅರೆಸೈನಿಕ ಪಡೆ ರಚಿಸುವ 'ಸಲ್ವ ಜುಡುಂ' ಯೋಜನೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳ ಬೆಂಬಲವಿತ್ತು. ಆದರೆ ವಾಸ್ತವವಾಗಿ ಇದು ಸಮಸ್ಯೆಯನ್ನು ಮತ್ತಷ್ಟು ಉಲ್ಬಗೊಳಿಸಿತು. ಮಾವೋವಾದಿಗಳು ಎಂದು ಹೇಳಿಕೊಳ್ಳುವವರು ಮತ್ತು ಈ 'ಸಲ್ವ ಜುಡುಂ' ಕಾರ್ಯಕರ್ತರ ನಡುವೆ ಸಿಲುಕಿಕೊಂಡು ಸಂಕಷ್ಟಗಳಿಗೀಡಾದವರು ಬಡ, ಮುಗ್ಧ ಬುಡಕಟ್ಟು ಜನಗಳು. ಇದು ತಪ್ಪು ಕಾರ್ಯತಂತ್ರವೋ, ವಿಫಲ ಕಾರ್ಯತಂತ್ರವೋ ಎಂದು ಪತ್ರಕರ್ತರು ಕೇಳಿದಾಗ ಅದೊಂದು 'ಪಾಪಿ ಕಾರ್ಯತಂತ್ರ', ಇದರ ಕರಿನೆರಳು ಇನ್ನೂ ನಮ್ಮ ಬೆನ್ನು ಹತ್ತಿದೆ ಎಂದು ಸ್ವತಃ ಬುಡಕಟ್ಟು ಮುಖಂಡರಾದ ಯುಪಿಎ–2 ಮಂತ್ರಿಗಳು ಟಿಪ್ಪಣಿ ಮಾಡಿದ್ದಾರೆ.

ಈ 'ಪಾಪಿ' ಕಾರ್ಯತಂತ್ರದ ಬಗ್ಗೆ ಪ್ರಜಾಪ್ರಭುತ್ವವಾದಿಗಳು ಬಹಳ ಹಿಂದೆಯೇ ಎಚ್ಚರಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೇಂದ್ರ ಮಾಹಿತಿ ಆಯೋಗದ ಆದೇಶ ಪಕ್ಷ ರಾಜಕಾರಣ ವ್ಯವಸ್ಥೆಯನ್ನೆ ದುರ್ಬಲಗೊಳಿಸುತ್ತದೆ : ಸಿಪಿಐ(ಎಂ)

ರಾಜಕೀಯ ಪಕ್ಷಗಳನ್ನು 'ಸಾರ್ವಜನಿಕ ಪ್ರಾಧಿಕಾರ-ಪಬ್ಲಿಕ್ ಅಥಾರಿಟಿ' ಎಂಬುದಾಗಿ ಪರಿಗಣಿಸಿ ರಾಜಕೀಯ ಪಕ್ಷಗಳನ್ನು ಮಾಹಿತಿ ಹಕ್ಕುಗಳ ಕಾಯ್ದೆಗೆ ಒಳಪಡಿಸಬೇಕು ಎಂಬ ಕೇಂದ್ರ ಮಾಹಿತಿ ಆಯೋಗದ ಆದೇಶವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸ್ಪಷ್ಟವಾಗಿ ಹೇಳಿದೆ. ಈ ತೀರ್ಮಾನವು ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರವನ್ನು ಅರ್ಥೈಸುವಲ್ಲಿನ ಮಾಹಿತಿ ಆಯೋಗದ ಮೂಲಭೂತ ದೋಷಪೂರ್ಣ ಕಣ್ಣೋಟವನ್ನು ಆಧರಿಸಿದೆ ಎಂದು ಪಕ್ಷ ಹೇಳಿದೆ.

'ಆರು ರಾಷ್ಟ್ರೀಯ ಪಕ್ಷಗಳು ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣಕಾಸು ಪಡೆದುಕೊಳ್ಳುತ್ತವೆ. ಹಾಗಾಗಿ ಇವುಗಳನ್ನು 'ಸಾರ್ವಜನಿಕ ಪ್ರಾಧಿಕಾರ' ಎಂದು ಪರಿಗಣಿಸಲಾಗಿದೆ ಎಂಬುದಾಗಿ ಮಾಹಿತಿ ಆಯೋಗದ ಆದೇಶದಲ್ಲಿ ಹೇಳಲಾಗಿದೆ. ಇದು ನಿಜಕ್ಕೂ ಸತ್ಯಕ್ಕೆ ದೂರವಾದ ಹೇಳಿಕೆ. ಏಕೆಂದರೆ ರಾಜಕೀಯ ಪಕ್ಷಗಳಿಗೆ ಕೇಂದ್ರ ಸರ್ಕಾರ ಹಾಗೂ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಿ ಸಂಸ್ಥೆಗಳಿಂದ ದೊಡ್ಡ ಮಟ್ಟದಲ್ಲಿ ಹಣಕಾಸು ಕೊಡುಗೆಗಳು ಬರುವುದಿಲ್ಲ. ಅದರಲ್ಲೂ ಕಾರ್ಪೋರೇಟ್ ಕಂಪೆನಿಗಳ ದೇಣಿಗೆಗಳು ಸಂವಿಧಾನಾತ್ಮಕವಾಗಿ ಕಾನೂನುಬದ್ಧವಾಗಿದ್ದರೂ ಸಿಪಿಐ(ಎಂ) ಯಾವುದೇ ಕಾರ್ಪೋರೇಟ್ ಸಂಸ್ಥೆಗಳಿಂದ ಯಾವುದೇ ನಿಧಿಯನ್ನು ಸ್ವೀಕರಿಸುವುದಿಲ್ಲ. ಬಹುಶಃ ಕೇಂದ್ರ ಮಾಹಿತಿ ಆಯೋಗವು



ರಾಜಕೀಯ ಪಕ್ಷಗಳ ಹಣಕಾಸು ವ್ಯವಸ್ಥೆ ಮತ್ತು ದೇಣಿಗೆಗಳ ಪಾರದರ್ಶಕತೆ ಕುರಿತ ಕಾಳಜಿಯನ್ನು ಹೊಂದಿರಬಹುದು. ಪ್ರಸಕ್ತ ಕಾನೂನು ಪ್ರಕಾರ ಎಲ್ಲ ರಾಜಕೀಯ ಪಕ್ಷಗಳು ತಮ್ಮ ಹಣಕಾಸು ಲೆಕ್ಕಪತ್ರಗಳ ವಿವರವನ್ನು ಚುನಾವಣಾ ಆಯೋಗ ಮತ್ತು ಆದಾಯ ತೆರಿಗೆ ಇಲಾಖೆಗೆ ನೀಡಬೇಕು.

ಮಾಹಿತಿ ಹಕ್ಕುಗಳ ಕಾಯಿದೆ ಪ್ರಕಾರ ಯಾ-ರೇ ಆದರೂ ಚುನಾವಣಾ ಆಯೋಗದಿಂದ ರಾಜಕೀಯ ಪಕ್ಷಗಳ ಲೆಕ್ಕಪತ್ರಗಳನ್ನು ಪಡೆದುಕೊಳ್ಳಬಹುದು. ದೇಣಿಗೆ ಮತ್ತು ಲೆಕ್ಕಪತ್ರಕ್ಕೆ ಸಂಬಂಧಿಸಿದಂತೆ ಇದಕ್ಕೂ ಹೆಚ್ಚಿನ ಮಾಹಿತಿ ಬೇಕಿದ್ದರೆ, ಅದನ್ನು ರಾಜಕೀಯ ಪಕ್ಷಗಳಿಂದ ಪಡೆದುಕೊಳ್ಳಬಹುದು.

ಅದರಲ್ಲೂ ಸಿಪಿಐ(ಎಂ) ಒಂದು ಹೆಜ್ಜೆ ಮುಂದೆ ಹೋಗಿ, ಈಗಾಗಲೇ ತನ್ನ ಲೆಕ್ಕಪತ್ರಗಳನ್ನು ಮತ್ತು ಪಡೆದುಕೊಂಡ ದೇಣಿಗೆಗಳ ವಿವರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವ ನಿರ್ಧಾರವನ್ನು ಕೈಗೊಂಡಿದೆ.

ಆದರೆ, ಇದೇ ಕಾರಣದಿಂದ ರಾಜಕೀಯ ಪಕ್ಷಗಳನ್ನು ಸಾರ್ವಜನಿಕ ಪ್ರಾಧಿಕಾರ ಎಂದು ಪರಿಗಣಿಸಬಹುದು ಎನ್ನುವಂತಿಲ್ಲ. ಈ ನಿರ್ಧಾರ ರಾಜಕೀಯ ಪಕ್ಷಗಳ ಕಾರ್ಯಚಟುವಟಿಕೆಯಲ್ಲಿನ ಹಸ್ತಕ್ಷೇಪವಾಗಿದೆ ಮತ್ತು ಅದು ರಾಜಕೀಯ ಪಕ್ಷಗಳ ಕಾರ್ಯ ನಿರ್ವಹಣೆಯನ್ನು ಹಾನಿಗೊಳಿಸುತ್ತದೆ. ರಾಜಕೀಯ ಪಕ್ಷಗಳು ಸಿದ್ಧಾಂತ, ಕಾರ್ಯಕ್ರಮ ಮತ್ತು ಪಕ್ಷದ ನಾಯಕತ್ವವನ್ನು ಮುಕ್ತವಾಗಿ ಒಪ್ಪಿರುವ ಮತ್ತು ಅದಕ್ಕೆ ಬದ್ಧವಾಗಿರುವ ನಾಗರಿಕರ ಒಂದು ಕೂಟವಾಗಿದೆ. ಆ ಪಕ್ಷ ಅದರ ಸದಸ್ಯತ್ವಕ್ಕೆ ಉತ್ತರದಾಯಿತ್ವ ಹೊಂದಿದೆ.

ಹೀಗಿರುವಾಗ, ರಾಜಕೀಯ ಪಕ್ಷಗಳನ್ನು ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ತರುವುದು ಎಂದರೆ, ಆ ಪಕ್ಷದ ಆಂತರಿಕ ಚರ್ಚೆಗಳು, ನೀತಿ ನಿರ್ಧಾರಕ ವಿಷಯಗಳು, ಸಂಘಟನಾತ್ಮಕ ನಿರ್ಧಾರಗಳು ಮತ್ತು ಅಭ್ಯರ್ಥಿಗಳ ಆಯ್ಕೆ ವಿಚಾರಗಳು, ಆಂತರಿಕ ಗಂಭೀರ ಚರ್ಚೆಗಳು, ಗೌಪ್ಯ ವಿಚಾರಗಳನ್ನು ಮಾಹಿತಿ ಹಕ್ಕಿನ ಅಡಿಯಲ್ಲಿ ಯಾರೂ ಪಡೆಯಬಹುದು ಎಂದರೆ ಅದು ರಾಜಕೀಯ ಪಕ್ಷಗಳ ಆಂತರಿಕ ಕಾರ್ಯನಿರ್ವಹಣೆಯ ಗಂಭೀರ ಅತಿಕ್ರಮಣವಾಗುತ್ತದೆ. ಇದು ಪಕ್ಷ ರಾಜ-ಕಾರಣದ ವ್ಯವಸ್ಥೆಯನ್ನೇ ಶಿಥಿಲಗೊಳಿಸುತ್ತದೆ. ಮಾಹಿತಿ ಹಕ್ಕನ್ನೇ ಬಳಸಿ ರಾಜಕೀಯ ಪಕ್ಷದ ಎದುರಾಳಿ ಸಂಘಟನೆಗಳು, ವ್ಯಕ್ತಿಗಳು ಮತ್ತು ಇತರ ಪಕ್ಷಗಳು ಅದನ್ನು ಅಸ್ಥಿರಗೊಳಿಸುವ ಪ್ರಯತ್ನವನ್ನೂ ಮಾಡಬಹುದು.



ಹಾಗಾಗಿ, ಕೇಂದ್ರ ಮಾಹಿತಿ ಆಯೋಗದ ಆದೇಶದಿಂದ ಸಂಸದೀಯ ಪ್ರಜಾಸತ್ತೆ ಮತ್ತು ರಾಜಕೀಯ ಪಕ್ಷಗಳ ವ್ಯವಸ್ಥೆಗೆ ಉಂಟಾಗುವ ಗಂಭೀರ ಪರಿಣಾಮವನ್ನು ಪರಿಗಣಿಸಿ ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಮತ್ತು ಸರ್ವ ಪಕ್ಷಗಳ ಸಭೆಯಲ್ಲಿ ಈ ವಿಚಾರಕ್ಕೆ ಸಂಬಂಧಿಸಿ ಚರ್ಚೆ ನಡೆಸಲು ಪಕ್ಷ ನಿರ್ಧರಿಸಿದೆ.

ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ಒಂದು ರಾಜಕೀಯ ಪಕ್ಷಗಳ ಪಾತ್ರ ಮತ್ತು ಸಮಗ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಪಕ್ಷ ಒತ್ತಾಯಿಸಲಿದೆ.

ಸೇವೆ ಕಾಯಂಗೊಳಿಸಲು ಆಗ್ರಹಿಸಿ ಪ್ರತಿಭಟನೆ

ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಇರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಎಸ್‌ಸಿ, ಎಸ್‌ಟಿ, ಬಿಸಿಎಂ, ಅಲ್ಪಸಂಖ್ಯಾತ ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸೇವೆಯನ್ನು ಕಾಯಂಗೊಳಿಸುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಿ ವಿದ್ಯಾರ್ಥಿ ನಿಲಯಗಳ ದಿನಗೂಲಿ ನೌಕರರ ಸಂಘ ಇದೇ ಜೂನ್ 3 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿತು.

ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ನೌಕರರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ, ನಗರದ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿ ಅಲ್ಲಿಯೇ ಧರಣಿ ನಡೆಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ, ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆಗಳಲ್ಲಿ ಅಡುಗೆ, ಸ್ವಚ್ಛತೆ, ಕಾವಲು ಮೊದಲಾದ ಕೆಲಸಗಳನ್ನು ಮಾಡುತ್ತಿರುವ ಬಹುತೇಕ ನೌಕರರು ಗುತ್ತಿಗೆದಾರರಾದ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ಗಳಿಂದ ತೀವ್ರ ಶೋಷಣೆಯನ್ನು ಅನುಭವಿಸುತ್ತಿದ್ದಾರೆ ಎಂದರಲ್ಲದೆ ಇವರ ಸೇವೆಯನ್ನು ಕಾಯಂಗೊಳಿಸಿ ಇವರಿಗೆ ತಿಂಗಳಿಗೆ ತುಟ್ಟಿಭತ್ಯೆ ಸಹಿತವಾಗಿ 10 ಸಾವಿರ ರೂ. ಕನಿಷ್ಠ ವೇತನವನ್ನು ನಿಗದಿಪಡಿಸಿ ಜಾರಿಗೊಳಿಸಬೇಕೆಂದು ಆಗ್ರಹಿಸಿದರು. ಅಲ್ಲಿಯವರೆಗೆ ಕಾರ್ಮಿಕ ಇಲಾಖೆ 2009ರಲ್ಲಿ ಹಾಸ್ಟೆಲ್ ನೌಕರರಿಗೆ ನಿಗದಿಪಡಿಸಿರುವ ತುಟ್ಟಿಭತ್ಯೆಸಹಿತದ ಕನಿಷ್ಠ ವೇತನವನ್ನು ನೀಡಬೇಕೆಂದು ಒತ್ತಾಯಿಸಿದ ಅವರು ನೌಕರರ ಮಾಸಿಕ ವೇತನವನ್ನು ತಪ್ಪದೆ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕೆಂದು ಆಗ್ರಹಿಸಿದರು.

ಸಂಘದ ರಾಜ್ಯ ಸಂಚಾಲಕರಾದ ಭೀಮಶೆಟ್ಟಿ ಯಂಪಳ್ಳಿ ಮಾತನಾಡಿ, ಹಾಸ್ಟೆಲ್ ದಿನಗೂಲಿ ನೌಕರರಿಗೆ ಸರ್ಕಾರ ನಿಗದಿಪಡಿಸಿದ ಮಾಸಿಕ ವೇತನದ ಅರ್ಧದಷ್ಟನ್ನು ಸಹ ನೀಡದೆ ಎನ್‌ಜಿಒಗಳು ಮೋಸ ಮಾಡುತ್ತವೆ ಎಂದು ಟೀಕಿಸಿದರಲ್ಲದೆ, ನೌಕರರ ವೇತನದಲ್ಲಿ ಕಡಿತ ಮಾಡಲಾಗುವ ಇಎಸ್‌ಐ ಮತ್ತು ಇಪಿಎಫ್ ಹಣವನ್ನು ಸಂಬಂಧಪಟ್ಟ ಇಲಾಖೆಗೆ ಜಮಾಮಾಡದೆ, ಕಡಿತ ಮಾಡಲಾದ ಹಣದ ಬಾಬ್ತು ದಾಖಲೆಗಳನ್ನು ಒದಗಿಸದೆ ವಂಚಿಸುತ್ತಾರೆ ಎಂದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ಎಸ್‌ಎಫ್‌ಐ ಸಂಘಟನೆಯ ಮುಖಂಡ ಚಿಕ್ಕರಾಜು, ಡಿವೈಎಫ್‌ಐ ಮುಖಂಡ ಪ್ರಸಾದ್ ಹೋರಾಟಕ್ಕೆ ತಮ್ಮ ಸಂಘಟನೆಗಳ ಬೆಂಬಲ ವ್ಯಕ್ತಪಡಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿಯನ್ನು ಸ್ವೀಕರಿಸಿದ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ನವೀನ್ ರಾಜ್ ಸಿಂಗ್, ನೌಕರರ ಸೇವೆಯನ್ನು ಕಾಯಂಗೊಳಿಸುವ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಎಂದರಲ್ಲದೆ ಇದೇ ಜೂನ್ 12 ರಂದು ನೌಕರರ ಸಂಘದ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಇನ್ನುಳಿದ ಸಮಸ್ಯೆಗಳನ್ನು ಇತ್ಯರ್ಥಪಡಿಸುತ್ತೇನೆ ಎಂದು ತಿಳಿಸಿದರು.

ನೂತನ ಸರ್ಕಾರಕ್ಕೆ ಯುವಜನರ.......

ಪುಟ 11 ರಿಂದ

ಸರಳಗೊಳಿಸಬೇಕು. ಶಾಶ್ವತವಾದ ಆರ್ಥಿಕ ಬಲೀಕರಣಕ್ಕೆ ಹೆಚ್ಚು ಒತ್ತು ಕೊಡಬೇಕು. ದಲಿತರಿಗೆ ದಕ್ಕಬೇಕಾದ ಸೌಲಭ್ಯಗಳನ್ನು ನೇರವಾಗಿ ಆಂಧ್ರಪ್ರದೇಶದಲ್ಲಿರುವಂತೆ ಸಮಾಜ ಕಲ್ಯಾಣ ಇಲಾಖೆಯಡಿಯ ಏಕ ಗವಾಕ್ಷಿ ಕ್ರಮದಲ್ಲಿ ಜಾರಿಗೆ ತರಬೇಕು.

ಲಿಂಗ ತಾರತಮ್ಯ ಮತ್ತು ಯುವತಿಯರು:

ಯುವಜನರಿಗೆ ಸರ್ಕಾರ ಒದಗಿಸುವ ಎಲ್ಲಾ ಸೌಲಭ್ಯಗಳನ್ನು ಯುವಕ ವಿವಾಹಿತನಾಗಿದ್ದಲ್ಲಿ 'ಗಂಡ-ಹೆಂಡತಿ'ಯ ಜಂಟಿ ಹೆಸರಿನಲ್ಲಿ ನೀಡಬೇಕು. ಯುವತಿಯರಿಗೆ ಉದ್ಯೋಗದಲ್ಲಿ ಮೀಸಲಾತಿ ಜಾರಿಗೆ ತರಬೇಕು. ಯುತಿಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಸೂಕ್ತ ರಕ್ಷಣೆ ಮತ್ತು ಮೂಲವಾಗಿ ಅವರಿಗೆ ಆರ್ಥಿಕ ಮತ್ತು ಸಾಮಾಜಿಕ ಸ್ವಾವಲಂಬನೆಯ ಅವಕಾಶಗಳನ್ನು ಖಾತ್ರಿಗೊಳಿಸಬೇಕು. ಅದರಲ್ಲೂ ಕರಾವಳಿಯ ಪ್ರದೇಶದಲ್ಲಿ ನೈತಿಕ ಪೋಲಿಸ್ ಹೆಸರಿನಲ್ಲಿ ಯುವಕ ಯುವತಿಯರು ಒಟ್ಟಿಗೆ ಸೇರಿ ಮಾತಾಡಿದರೂ ಹಲ್ಲೆ ದೌರ್ಜನ್ಯ ನಡೆಯುವಂತಹ ಪರಿಸ್ಥಿತಿ ಇದೆ. ಯುವಜನರ ಸ್ನೇಹ ಸೌಹಾರ್ದ ಸಂಬಂಧಗಳಿಗೆ ಹಾಗೂ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಾಗಿದೆ. ಕೋಮುದಂಗೆಗಳನ್ನು ನಡೆಸಲು ಮೂಲಭೂತವಾದಿ ಸಂಘಟನೆಗಳು ಹಲವಾರು ಕೋಮುದ್ವೇಷ ಪ್ರಚೋದಿಸುವ ಕೃತ್ಯಗಳನ್ನು ಎಸಗಿವೆ. ಇಂತಹ ಕಡೆ ದುಷ್ಟ ಶಕ್ತಿಗಳು ತಲೆ ಎತ್ತದಂತೆ ನೋಡಿಕೊಳ್ಳಬೇಕಿದೆ. ಯುವತಿ-ಯುವಕರ ಪ್ರೀತಿ-ಪ್ರೇಮ ಹಾಗೂ ಆಯ್ಕೆ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು.

ಕ್ರೀಡಾ - ಸಾಂಸ್ಕೃತಿಕ ಆಚರಣೆಗಳು ಮತ್ತು ಯುವಜನ: ಕಳೆದ ಬಿಜೆಪಿ ತನ್ನ ಕೋಮುದ್ವೇಷದ ಕೆನ್ನಾಲಿಗೆಯನ್ನು ಎಲ್ಲಾ ಕಡೆಗಳಿಗೂ ವಿಸ್ತರಿಸಲು ಹವಣಿಸಿ ಗಣೇಶ ಉತ್ಸವ, ಹಂಪಿ, ಕದಂಬ, ಕರಾವಳಿ ಉತ್ಸವಗಳು ಹಾಗೂ ವಿವೇಕಾನಂದ ಮುಂತಾದವರ ಹೆಸರಿನಲ್ಲಿ ಕ್ರೀಡಾ-ಸಾಂಸ್ಕೃತಿಕ ಉತ್ಸವಗಳನ್ನು ನಡೆಸಿದೆ. ಜೊತೆಗೆ ಕೆಲ ಸಿನಿಮಾ ನಟ ನಟಿಯರನ್ನು ಕರೆಯಿಸಿ ಅವರಿಂದ ಕುಣಿಸಿ ಇದು ನಮ್ಮ ಸಂಸ್ಕೃತಿ ಎಂಬಂತೆ ಬಿಂಬಿಸಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಿ ಜಾನಪದ ಉತ್ಸವಗಳನ್ನು ಆಚರಿಸುವ ಜೊತೆಗೆ "ಜನೋತ್ಸವ"ಗಳನ್ನು ಆಚರಿಸಬೇಕು. ದೇಶಿಯ ಕ್ರೀಡಾ ಕೂಟಗಳನ್ನು ಜಿಲ್ಲಾ-ರಾಜ್ಯ ಮಟ್ಟದಲ್ಲಿ ಆಚರಿಸಬೇಕು. ನಗರ ಮತ್ತು ಗ್ರಾಮೀಣ ಭಾಗದ ಎಲ್ಲಾ ಯುವಜನರು ಪಾಲ್ಗೊಳ್ಳುವಂತಹ ರೀತಿಯಲ್ಲಿರಬೇಕು. ಇದಕ್ಕಾಗಿ ಅಗತ್ಯ ಹಣಕಾಸಿನ ನೆರವನ್ನು ಒದಗಿಸಬೇಕು.

ಇಂತಹ ಹತ್ತು ಹಲವು ಪ್ರಮುಖ ಯುವಜನ ಪರ ನಿಲುವುಗಳನ್ನು ರಾಜ್ಯ ಸರ್ಕಾರ ಹಂತ ಹಂತವಾಗಿ ಜಾರಿಗೆ ತರಬೇಕು. ನೂತನ ರಾಜ್ಯ ಸರ್ಕಾರ ಜೂನ್‌ನಲ್ಲಿ ಮಂಡಿಸಲಿರುವ ತನ್ನ ಬಜೆಟ್ ಈ ಮೇಲಿನ ಎಲ್ಲ ಅಂಶಗಳನ್ನು ಜಾರಿಗೆ ತರುವ ಹಾದಿಯಲ್ಲಿರಬೇಕು. ಇಂತಹ ಯುವಜನಪರ ನೀತಿಗಳನ್ನು ಜಾರಿಗೆ ತರಲು ಹೊರಟರೆ, ಕೇಂದ್ರದಲ್ಲಿ ಕಾಂಗ್ರೆಸ್ ಆರ್ಥಿಕ ನೀತಿಗಳನ್ನು ಬದಲಾಯಿಸಿಕೊಳ್ಳಲೇ ಬೇಕು. ಆಗ ಮಾತ್ರ ಕಾಂಗ್ರೆಸ್ ತನ್ನ ಪ್ರಣಾಳಿಕೆ ಮತ್ತು ಮುಖ್ಯಮಂತ್ರಿಯವರು ಹೇಳಿಕೆಗಳಿಗೆ ಮಾನ್ಯತೆ ದೊರೆಯುತ್ತದೆ. ಇಲ್ಲವಾದಲ್ಲಿ ಯುವಜನರು ಪ್ರಜಾಸತ್ತಾತ್ಮಕವಾಗಿ ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿಯುವುದು ಅನಿವಾರ್ಯವಾಗುತ್ತದೆ.

- ಬಿ. ರಾಜಶೇಖರ ಮೂರ್ತಿ

ಎಲ್ಲವೂ ಅಂಬಾನಿಗಾಗಿ...

ಪುಟ 13 ರಿಂದ

ಆಯೋಗ ಇದನ್ನು ಬೆಂಬಲಿಸಿದೆ. ಆದರೆ ಈ ಮೇಲೆ ಹೇಳಿದಂತೆ ರಸಗೊಬ್ಬರ ಇಲಾಖೆ ಮತ್ತು ವಿದ್ಯುತ್ ಇಲಾಖೆಗಳು ಇದನ್ನು ವಿರೋಧಿಸಿ ಟಿಪ್ಪಣಿಗಳನ್ನು ಸಲ್ಲಿಸಿವೆ ಎಂದು ವರದಿಯಾಗಿದೆ. ಹಣಕಾಸು ಇಲಾಖೆ ಆರಂಭದಲ್ಲಿ ಈ ಶಿಫಾರಸನ್ನು ವಿರೋಧಿಸಿದ್ದರೂ ಈಗ ಬೆಂಬಲಿಸುತ್ತಿದೆಯಂತೆ. ಈ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲೆಂದೇ ರಕ್ಷಣಾ ಮಂತ್ರಿಗಳ ನೇತೃತ್ವದ 'ಮಂತ್ರಿಗಳ ಗುಂಪ'ನ್ನು ರಚಿಸಿದ್ದರೂ ಈಗ ಒಂದು 'ರಾಜೀಸೂತ್ರ' ಸಿದ್ಧವಾಗಿದೆಯಂತೆ. ರಂಗರಾಜನ್ ಸಮಿತಿ ಶಿಫಾರಿಸಿನಂತೆ 8.8.ಡಾಲರಿಗೆ ಹೆಚ್ಚಿಸದೆ ಸದ್ಯಕ್ಕೆ 6-7 ಡಾಲರುಗಳಿಗೆ ಹೆಚ್ಚಿಸುವುದರೊಂದಿಗೆ ಈ ಹೆಚ್ಚಳದ ಪ್ರಕ್ರಿಯೆಯನ್ನು ಆರಂಭಿಸಬಹುದು ಎಂದು ಪೆಟ್ರೋಲಿಯಂ ಇಲಾಖೆ ಸೂಚಿಸಿದೆಯಂತೆ. ಈ ಮೂಲಕ 'ಮಂತ್ರಿಗಳ ಗುಂಪು' ಈಗ ಈ ಬೆಲೆಯ ವಿವಾದವನ್ನು ಪರಿಹರಿಸಬೇಕಿಲ್ಲ, ಯಾರಿಗೆ ಎಷ್ಟು ನಿಕ್ಷೇಪಗಳನ್ನು ಹಂಚಬೇಕು ಎಂದು ನಿರ್ಧರಿಸಿದರೆ ಸಾಕು ಎನ್ನಲಾಗುತ್ತಿದೆ.

ಆದರೆ ಇಲ್ಲಿ ಪ್ರಶ್ನೆ ಹೆಚ್ಚಳ ಎಷ್ಟಿರಬೇಕೆಂದಲ್ಲ-ಅನಿಲ, ಕಲ್ಲಿದ್ದಲು, ನೀರು, ತರಂಗಾಂತರ ಮುಂತಾದ ನೈಸರ್ಗಿಕ ಸಂಪನ್ಮೂಲಗಳ ಬೆಲೆಗಳನ್ನು ನಿರ್ಧರಿಸಲು ಒಂದು ನ್ಯಾಯಬದ್ಧ, ತರ್ಕಬದ್ಧ ಆಧಾರ ಏನಿರಬೇಕು ಎಂಬುದು.

ರಂಗರಾಜನ್ ಸಮಿತಿ ಹೇಳಿರುವಂತೆ ಅಂತರ್ರಾಷ್ಟ್ರೀಯ ಬೆಲೆಗಳು ಆಧಾರವಾಗಬೇಕು ಎಂಬುದನ್ನು ಬೆಂಬಲಿಸುವ ಪೆಟ್ರೋಲಿಯಂ ಮಂತ್ರಿಗಳ ತರ್ಕವಂತೂ ತಮಾಷೆಯಾಗಿದೆ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥ. "ಅನಿಲ ಬೆಲೆಗಳನ್ನು ಅಂತರ್ರಾಷ್ಟ್ರೀಯ ಮಟ್ಟಗಳಿಗೆ ಏರಿಸದಿದ್ದರೆ, ನಾವು ಅನಿಲವನ್ನು ಆಮದು ಮಾಡಬೇಕಾಗುತ್ತದೆ, ಆಗ ನಾವು ಈಗಿನದಕ್ಕಿಂತ ಹೆಚ್ಚು ತೆರಬೇಕಾಗುತ್ತದೆ." ನಮ್ಮ ದೇಶೀ ಅನಿಲಕ್ಕೆ ವಿದೇಶಿ ಬೆಲೆ ತೆರಬೇಕು, ಇಲ್ಲವಾದರೆ ವಿದೇಶಿ ಅನಿಲಕ್ಕೆ ಅದೇ ವಿದೇಶಿ ಬೆಲೆ ತೆರಬೇಕು!

ದೇಶೀ ಅನಿಲ ಬರುವಾಗ ವಿದೇಶಿ ಅನಿಲದ ಅಂದರೆ ಅದನ್ನು ಆಮದು ಮಾಡುವ ಪ್ರಶ್ನೆಯೇಕೆ? ಏಕೆಂದರೆ ಅದನ್ನೆಲ್ಲ ಖಾಸಗಿಯವರಿಗೆ ಕೊಡಲಾಗಿದೆ- ಅಂಬಾನಿ, ಟಾಟಾ, ಅದಾನಿಗೆ. ಅವರೆಲ್ಲ ಉತ್ಪಾದನೆಯನ್ನು ಕಡಿತ ಮಾಡಿ ಅಂತರ್ರಾಷ್ಟ್ರೀಯ ಬೆಲೆ ಕೊಡಿ ಎಂದು ಬೆದರಿಸುತ್ತಿದ್ದಾರೆ. ಅದೇ, ಕಾರ್ಮಿಕರು ಅಂತರ್ರಾಷ್ಟ್ರೀಯ ಕೂಲಿಯನ್ನೇನೂ ಕೇಳದೆ ಕನಿಷ್ಟ ಕೂಲಿಯನ್ನು ಕೇಳಿ ಮುಷ್ಕರ ನಡೆಸಿದರೆ, ದೇಶದ ಅರ್ಥವ್ಯವಸ್ಥೆಯನ್ನು ಒತ್ತೆ ಇಟ್ಟುಕೊಂಡಿದ್ದಾರೆ ಎಂದು ಬೊಬ್ಬೆ ಹಾಕುವ ಸರಕಾರ, ಮಾಧ್ಯಮಗಳು ಈ ಕೋಟ್ಯಾಧೀಶರುಗಳು ಈ ರೀತಿ ದೇಶದ ಅರ್ಥವ್ಯವಸ್ಥೆಯನ್ನು ಒತ್ತೆ ಇಡುತ್ತಿರುವಾಗ ಅವರ ಬೆದರಿಕೆಗಳಿಗೆ ಮಣಿಯಲು ಹೇಸುವುದಿಲ್ಲ.

ಖಾಸಗಿಯವರು ಈ ರೀತಿ ಬೆದರಿಸುತ್ತಿರುವಾಗ ಸರಕಾರದ ಬಳಿ ಒಂದು ಅಸ್ತ್ರವಂತೂ ಇದೆ- ಒಪ್ಪಂದದಂತೆ ಉತ್ಪಾದನೆ ಮಾಡಿ, ಇಲ್ಲವಾದರೆ ಅದನ್ನು ಸರಕಾರವೇ ವಹಿಸಿಕೊಳ್ಳುತ್ತದೆ ಎಂದು ಎಚ್ಚರಿಸುವುದು. ಆದರೆ ನವ-ಉದಾರವಾದವನ್ನು ಅಪ್ಪಿಕೊಂಡಿರುವ ಸರಕಾರಕ್ಕೆ ಆ ಧೈರ್ಯ ಎಲ್ಲಿಂದ ಬರಬೇಕು? **ಈ ಹಿನ್ನೆಲೆಯಲ್ಲಿ ಯುಪಿಎ-2 ಸರಕಾರದ ನೀತಿಯನ್ನು ಸಮರ್ಥಿಸಿಕೊಳ್ಳುತ್ತಿರುವ ಪೆಟ್ರೋಲಿಯಂ ಮಂತ್ರಿಗಳ ಮಾತುಗಳಲ್ಲಿ ಪೆದ್ದುತನವನ್ನು ಕಾಣಬೇಕೇ, ಅಥವ ಠಕ್ಕುತನವನ್ನು ಕಾಣಬೇಕೇ? ನೀವೇ ನಿರ್ಧರಿಸಿ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥ.**

ಶಿಕ್ಷಣ ಕ್ಷೇತ್ರವನ್ನು ಶುದ್ಧೀಕರಿಸಲು.......

ಪುಟ 10 ರಿಂದ

ಶಿಕ್ಷಣ ಸಂಸ್ಥೆಗಳಿಗೆ ಈಗ ಖಾಸಗಿ ವಿ.ವಿ.ಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಕೇವಲ ಹಣಮಾಡುವ ಒಂದೇ ಉದ್ದೇಶ ಹೊಂದಿರುವ ಈ ವಿಶ್ವವಿದ್ಯಾಲಯಗಳನ್ನು ರದ್ದುಗೊಳಿಸಬೇಕು.

ವೃತ್ತಿ ಶಿಕ್ಷಣ

ರಾಜ್ಯದಲ್ಲಿ ವೃತ್ತಿಶಿಕ್ಷಣ ಅದರಲ್ಲೂ ಪ್ರಮುಖವಾಗಿ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಶಿಕ್ಷಣ ಮಾರಾಟದ ಸರಕಾಗಿದೆ. ಖಾಸಗಿ ಕಾಲೇಜುಗಳ ಪ್ರಾಬಲ್ಯ ಹೆಚ್ಚಾಗಿದ್ದು ಸರ್ಕಾರವನ್ನೇ ನಿಯಂತ್ರಿಸುವ ಮಟ್ಟಕ್ಕೆ ಬೆಳೆದಿವೆ. ನಿರಂತರವಾಗಿ ಸರ್ಕಾರಿ ಸೀಟುಗಳನ್ನು ಕಡಿತಗೊಳಿಸಲಾಗಿದ್ದು, ಶುಲ್ಕ ಏರಿಕೆ ವ್ಯಾಪಕವಾಗಿದೆ. ದನದಾಹಿ ಕಾಮೆಡ್-ಕೆ ಜೊತೆ ಶಾಮೀಲಾಗಿದ್ದ ಹಿಂದಿನ ಸರ್ಕಾರಗಳು ವ್ಯಾಪಕಶುಲ್ಕ ಏರಿಕೆಗೆ ಅವಕಾಶ ನೀಡಿ ವಿದ್ಯಾರ್ಥಿ ಪೋಷಕರನ್ನು ಸುಲಿಗೆ ಮಾಡಲು ಮುಂದಾಗಿದ್ದವು. 2003-04 ರಲ್ಲಿ ಅದು ಸರ್ಕಾರಿ ಸೀಟುಗಳು 40% ಖಾಸಗಿ 60% ಆಗಿದೆ. ಆದ್ದರಿಂದ ಸರ್ಕಾರ ಈ ವಿಚಾರದಲ್ಲಿ ಕಾಮೆಡ್-ಕೆ ಜೊತೆ ರಾಜಿಯಾಗದೇ ವಿದ್ಯಾರ್ಥಿಗಳ ಪರವಾಗಿ ದೃಢನಿರ್ಧಾರ ತೆಗೆದುಕೊಳ್ಳಬೇಕು. ಸೀಟು ಅನುಪಾತ 75:25 ರಲ್ಲಿರಬೇಕು ಬಡ-ದಲಿತ-ಹಿಂದುಳಿದ-ಮಧ್ಯಮ ವರ್ಗದ ವಿದ್ಯಾರ್ಥಿಗಳ ಕೈಗೆಟುಕುವ ರೀತಿಯಲ್ಲಿ ಶುಲ್ಕಗಳನ್ನು ನಿಗದಿಗೊಳಿಸಬೇಕು. ಅಲ್ಲದೇ ಇಂಜಿನಿಯರಿಂಗ್, ಡಿಪ್ಲೋಮೊ ಹಾಗೂ ಐಟಿಐ ವಿದ್ಯಾರ್ಥಿಗಳ ಪಠ್ಯವನ್ನು ಸಮಕಾಲೀನಗೊಳಿಸಿ ಸರಳೀಕರಿಸಬೇಕು. ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ.ಯ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ತಪ್ಪು ನಿರ್ಧಾರಗಳಿಂದಾಗಿ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಪರ ನೀತಿಗಳನ್ನು ಕೈಗೊಳ್ಳುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು. ಇಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್, ಐಟಿಐ ಕಾಲೇಜುಗಳನ್ನು ಅಗತ್ಯಕ್ಕೆ ತಕ್ಕಂತೆ ಪ್ರಾರಂಭಿಸಬೇಕು. ಇರುವ ಕಾಲೇಜುಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ನೀಡಬೇಕು.

ವಿದ್ಯಾರ್ಥಿನಿಯರು

ರಾಜ್ಯದ ಶಾಲಾ ಕಾಲೇಜು ಹಾಗೂ ವಿ.ವಿ.ಗಳಲ್ಲಿ ಮೂಲ ಸೌಕರ್ಯಗಳ ಕೊರತೆಯಿಂದಾಗಿ ವಿದ್ಯಾರ್ಥಿನಿಯರು ಶಿಕ್ಷಣದಿಂದ ಹಿಮ್ಮುಖವಾಗಿ ದೂರ ಸರಿಯುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿವೆ. ವಿದ್ಯಾರ್ಥಿನಿಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಸುಪ್ರೀಂಕೋರ್ಟ್ ನಿರ್ದೇಶನದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ 'ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳನ್ನು' ರಚಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಮತ್ತು ವಿದ್ಯಾರ್ಥಿನಿಯರಿಗೆ ಸೂಕ್ತ ಭದ್ರತೆ ಒದಗಿಸಬೇಕು.

ಡೆಂಗೆ ಮತ್ತು......

ಪುಟ 5 ರಿಂದ

ಭಾಸವಾಗುತ್ತಿದೆ. ಗುಜರಾತ್ ರಾಜ್ಯದ ಸೂರತ್ ನಗರದಲ್ಲಿ ಪ್ಲೇಗ್ ಕಾಯಿಲೆ ಸ್ಫೋಟಿಸಿದ ಮೇಲೆ ಈ ಆಧುನಿಕ ಕಾಲದ ಜನರಿಗೆ 'ಪ್ಲೇಗ್' ಎಂದರೆ ಏನೆಂದು ಗೊತ್ತಾಯಿತು. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ, ರಾಜ್ಯದ ವೈದ್ಯಕೀಯ ಇಲಾಖೆಗಳು ಎಲ್ಲ ಸೇರಿ ನಮ್ಮ ದೇಶಕ್ಕೆ ಇನ್ನು ಯಾವ ಯಾವ ಪುರಾತನ ಮತ್ತು ವಿನೂತನ ಸಾಂಕ್ರಾಮಿಕ ರೋಗಗಳನ್ನು ಪರಿಚಯಿಸುವ ಕಾರ್ಯಕ್ರಮ ಹಾಕಿಕೊಂಡಿವೆಯೋ ಕಾದು ನೋಡಬೇಕಿದೆ.

ಆಮೇಲೆ ಈ ಎಲ್ಲ ಕಸ ವಿಲೇವಾರಿಗಾಗಿ ಸರ್ಕಾರದ ಪ್ರತಿವರ್ಷ ಬಿಬಿಎಂಪಿ 'ಸುರಿಯುತ್ತಿರುವ' ಸುಮಾರು ನಾಲ್ಕು ನೂರು ಕೋಟಿ ರೂಪಾಯಿಗೂ ಮೀರಿದ ಮೊತ್ತ ಯಾವ ಯಾವ ಕಾಂಟ್ರಾಕ್ಟರ್‌ಗಳ ಬಾಯಿಗೆ ಹೋಗಿ ಬೀಳುತ್ತಿದೆ ಅಂತಲೂ ಕೊಂಚ ಹುಡುಕಿ ನೋಡಬೇಕಿದೆ.

JANASHAKTHI KANNADA VARA PATRIKE JUN 16, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satuard
Licensed to Post without prepayment License No. WPP-283

ಚಳುವಳಿಗಳ ಮುಂದಿರುವ ಯಕ್ಷಪ್ರಶ್ನೆ

ಹಿರಿಯ ಬಂಡಾಯ ಸಾಹಿತಿ ಡಾ॥ ಆರ್.ವಿ. ಭಂಡಾರಿಯವರ ನೆನಪಿನಲ್ಲಿ ನಡೆದ ಸಹಯಾನ ಸಾಹಿತ್ಯೋತ್ಸವವು ಜನ ಚಳುವಳಿಗಳ ಮುಂದಿರುವ ಗಂಭೀರ ಪ್ರಶ್ನೆಗಳ ಬಗ್ಗೆ ಹಲವು ಆಯಾಮಗಳ ಮಂಥನಕ್ಕೆ ಇಂಬು ನೀಡಿತು. ಆ ಗಂಭೀರ ಸಂವಾದಗಳ ನೋಟ ಇಲ್ಲಿ.

ವಸಂತರಾಜ ಎನ್.ಕೆ.

ಚಳುವಳಿಗಳು ಸತ್ವಹೀನವಾಗಿವೆ ಅಥವಾ ಇಲ್ಲವಾಗಿವೆ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಅದೇ ಸಮಯದಲ್ಲಿ – ವಿಷಯಾಧಾರಿತ, ಐಡೆಂಟಿಟಿ–ಆಧಾರಿತ, ಪ್ರತ್ಯೇಕ ದ್ವೀಪಗಳಾಗುತ್ತಿರುವ, ಯಾಜಮಾನ್ಯವನ್ನು ಆರೋಪಿಸಿ ಹಲವು ಸಂದರ್ಭಗಳಲ್ಲಿ ಪರಸ್ಪರ ವಿರೋಧಿಸುವ – ಹಲವು ದೊಡ್ಡ ಚಳುವಳಿಗಳೂ ಲಕ್ಷಾಂತರ ಸ್ಥಳೀಯ ಚಳುವಳಿಗಳೂ ನಡೆಯುತ್ತಿವೆ. ಹಾಗಾದರೆ ಎಲ್ಲಾ ರೀತಿಯ ಬಹುತ್ವ ಮತ್ತು ಐಡೆಂಟಿಟಿಗಳನ್ನು ಗೌರವಿಸುತ್ತಾ ಅವನ್ನು ಉಳಿಸಿಕೊಂಡು ಈ ಚಳುವಳಿಗಳ ದ್ವೀಪಗಳ ನಡುವೆ ಸೇತುವೆಯಾಗಬಲ್ಲ ಸಾರ್ವತ್ರಿಕ ಆಯಾಮವುಳ್ಳ ಸಾರ್ವತ್ರಿಕ ಚಳುವಳಿ ಸಾಧ್ಯವಿಲ್ಲವೇ ? ಅಂತಹ ಚಳುವಳಿ ಕಟ್ಟಿಕೊಳ್ಳುವುದು ಹೇಗೆ ? – ಎಂಬುದು ಇವತ್ತಿನ ಯಕ್ಷ ಪ್ರಶ್ನೆ. ಈ ಪ್ರಶ್ನೆಯನ್ನೇ ಆರ್.ವಿ.ಭಂಡಾರಿಯವರು ತಮ್ಮ 'ವರ್ಣದಿಂದ ವರ್ಗದೆಡೆಗೆ' ಪುಸ್ತಕದಲ್ಲಿ ಕೇಳಿದ್ದರು. ಇದು ಮೇ 26ರಂದು ಹೊನ್ನಾವರದ ಕೆರೆಕೋಣದಲ್ಲಿ ನಡೆದ ಈ ವರ್ಷದ ಸಹಯಾನ ಸಾಹಿತ್ಯೋತ್ಸವದಲ್ಲಿ ಪ್ರೊ.ಎಂ.ಜಿ. ಹೆಗಡೆಯವರ ಆಶಯ ನುಡಿಯ ಸಾರವಾಗಿತ್ತು.

ಆರ್.ವಿ.ಭಂಡಾರಿಯವರ ನಿಧನದ ನಂತರ ಅವರ ಆಶಯಗಳನ್ನು ಮುಂದೊಯ್ಯುವ ಉದ್ದೇಶದಿಂದ ಅವರ ಸ್ನೇಹಿತರು, ಸಹಚರರು, ವಿದ್ಯಾರ್ಥಿಗಳು, ಕುಟುಂಬದವರು ಆರಂಭಿಸಿದ ಸಂಸ್ಥೆ 'ಸಹಯಾನ'. ಕಳೆದ ಐದು ವರ್ಷಗಳಿಂದ ಅವರ ಹುಟ್ಟು ಹಬ್ಬದ ದಿನದಂದು (ಮೇ 5 – ಅದು ಮಾರ್ಕ್ಸ್ ಹುಟ್ಟು ದಿನವೂ ಹೌದು) 'ಹೊಸ ತಲೆಮಾರು' ಎಂಬ ಸಾಮಾನ್ಯ ಥೀಮ್ ಮತ್ತು ಪ್ರತಿ ವರ್ಷ ಅದರಡಿಯಲ್ಲಿ ಒಂದು ನಿರ್ದಿಷ್ಟ ಥೀಮ್‌ನೊಂದಿಗೆ ಸಾಹಿತ್ಯೋತ್ಸವ ಹಮ್ಮಿಕೊಳ್ಳುತ್ತಿದೆ. ಈ ಬಾರಿಯ ಥೀಮ್ 'ಚಳುವಳಿ: ಹೊಸ ತಲೆಮಾರು'. ಈ ಬಾರಿ ಚುನಾವಣೆಗಳಿಂದಾಗಿ ಮೇ.26ರ ವರೆಗೆ ಮುಂದಕ್ಕೆ ಹೋಗಿತ್ತು. ಉದ್ಘಾಟನಾ ಭಾಷಣ ಮಾಡಿದ ಬರಗೂರು ರಾಮಚಂದ್ರಪ್ಪನವರು ವಿಷಯವನ್ನು ಇನ್ನಷ್ಟು ವಿಸ್ತಾರವಾಗಿ ವಿಶದಗೊಳಿಸಿದರು.

ಕಣ್ಣಿಗೆ ಕಾಣದ ಜಾಗತಿಕ ಯುದ್ಧ

1970–80ರ ದಶಕದ ಚಳುವಳಿಯ ಹಿನ್ನೆಲೆ ಮತ್ತು ಸ್ವರೂಪ, ಮತ್ತು 1990ರ ದಶಕದ ನಂತರ ಬದಲಾದ ಸನ್ನಿವೇಶ ಮತ್ತು ಅದು ಚಳುವಳಿಗಳ ಮೇಲೆ ಬೀರಿದ ಪರಿಣಾಮಗಳನ್ನು ವಿಶ್ಲೇಷಿಸುತ್ತಾ 'ಚಳುವಳಿ : ಹೊಸ ತಲೆಮಾರು' ಎದುರಿಸುತ್ತಿರುವ ಸಮಸ್ಯೆಗಳನ್ನು ಬರಗೂರು ವಿಶದೀಕರಿಸಿದರು. ಮುಂಬರುವ ಮೂರನೆಯ ಜಾಗತಿಕ ಯುದ್ಧ ಕಣ್ಣಿಗೆ ಕಾಣಿಸದ ಶಬ್ದವಿಲ್ಲದ, ದುಷ್ಪರಿಣಾಮ ಗೊತ್ತೇ ಆಗದ ಯುದ್ಧ. ಅದು ವಿದೇಶಿ ಸಾಲದ ಯುದ್ಧ. ನಮ್ಮ ದೇಶ 1990ರ ದಶಕದಲ್ಲಿ ಕಂಡ ಭಾರೀ ಬದಲಾವಣೆಗಳನ್ನು 1980ರ ದಶಕದಲ್ಲೇ ಕಂಡ ಲ್ಯಾಟಿನ್ ಅಮೆರಿಕದ ಕಾರ್ಮಿಕ ನಾಯಕ ಲೂಯಿ ಸಿಲ್ವಾ 1985ರಲ್ಲಿ ಹೇಳಿದ ಈ ಅರ್ಥಗರ್ಭಿತ ಮಾತುಗಳಲ್ಲಿ ವಿವರಿಸಿದರು.

ಸ್ವಾರ್ಥ ಮತ್ತು ಲಾಭಕೋರತನದ ಮಾರುಕಟ್ಟೆ ಮನೋಧರ್ಮ, ಜಾಹಿರಾತೀಕರಣದಿಂದಾಗಿ ವ್ಯಾಪಕವಾಗಿ ಹರಡಿದೆ. ಏಕ ಧರ್ಮ ಏಕ ಸಂಸ್ಕೃತಿ ಮತ್ತು ಏಕಮುಖ ಆರ್ಥಿಕತೆ–ಯ ಪ್ರತಿಪಾದನೆ ಆಕ್ರಮಿಸಿಕೊಂಡಿದೆ. ಮೋದಿಯಂತಹ 'ಏಕಮುಖ ಅಭಿವೃದ್ಧಿ'ಯ ನಾಯಕರನ್ನು ದೇಶದ ಮುಂದಿನ ನಾಯಕರಾಗಿ ಬಿಂಬಿಸಲಾಗುತ್ತಿದೆ.

ಹಲವರು ಚಳುವಳಿಗಳು ಸತ್ತಿವೆ ಎಂದು ಘೋಷಿಸಿದ್ದಾರೆ. ಅದು ಒಳ್ಳೆಯ ಬೆಳವಣಿಗೆ ಎಂದು ಹೇಳುತ್ತಾ ಅದರ ಶವಪರೀಕ್ಷೆಗೆ ಸಿದ್ಧರಾಗಿದ್ದಾರೆ. ಚಳುವಳಿಗಳ ನ್ಯೂನ್ಯತೆಗಳ ಬಗ್ಗೆ ಖಂಡಿತ ಆತ್ಮಾವಲೋಕನ ಮಾಡಬೇಕು. ಆದರೆ ಅದರ ಹೆಸರಲ್ಲಿ ಆತ್ಮಾಹುತಿ ಬೇಡ. ಬದಲಾಗುತ್ತಿರುವ ಸಮಾಜದಲ್ಲಿ ಯಾವಾಗಲೂ ಚಳುವಳಿಗಳು ಇರುತ್ತವೆ. ಚಳುವಳಿಗಳು ಇರದ ಸಮಾಜ ಆರೋಗ್ಯಕರ ಸಮಾಜ ಅಲ್ಲ. ಅದು ಪ್ರಜಾಪ್ರಭುತ್ವ ಇರುವ ಸಮಾಜವೂ ಅಲ್ಲ. ಹೊಸ ತಲೆಮಾರಿನ ಚಳುವಳಿಗೆ ಮಾರಕವಾದ ಜಾಗತೀಕರಣ ಮತ್ತು ಜಾಹಿರಾತೀಕರಣ ನಿರ್ಮಿಸುವ ಮನೋಧರ್ಮದ ವಿರುದ್ಧ ಹೋರಾಡಬೇಕಾಗಿದೆ ಎಂದರು ಬರಗೂರು.



ನಾಡೋಜ ಡಾ॥ ಬರಗೂರು ರಾಮಚಂದ್ರಪ್ಪನವರು ಮಾತನಾಡುತ್ತಿರುವುದು



ಕುಣಬಿ ರಾಮಾಯಣ ಜಾನಪದ ತಂಡ

ಕರ್ನಾಟಕದ ಚಳುವಳಿಯ ನಿನ್ನೆ–ನಾಳೆಗಳು

'ಕರ್ನಾಟಕ ಕಂಡ ಚಳುವಳಿಗಳು – ನಿನ್ನೆ ಮತ್ತು ನಾಳೆ' ಗೋಷ್ಠಿಯಲ್ಲಿ ಡಾ.ಎಂ.ಡಿ.ಒಕ್ಕುಂದ 'ನಿನ್ನೆ'ಯ ಬಗ್ಗೆ ಮಾತನಾಡಿದರೆ ಡಾ.ಎಚ್.ಎಸ್.ಅನುಪಮ 'ನಾಳೆ'ಯ ಬಗ್ಗೆ ಮಾತನಾಡಿದರು. 'ನಿನ್ನೆ'ಯನ್ನು ಬೌದ್ಧ ಧರ್ಮದ ಕಾಲದವರೆಗೂ ವಿಸ್ತರಿಸಿದ ಒಕ್ಕುಂದ, 'ನಿನ್ನೆ'ಯ ನಾಲ್ಕು ಮಾದರಿಯ ಚಳುವಳಿಗಳಿಂದ ಏನು ಕಲಿಯಬಹುದು ಎಂಬುದರ ಬಗ್ಗೆ ಹೆಚ್ಚು ಒತ್ತು ಕೊಟ್ಟರು. ಬೌದ್ಧ ಮತ್ತು ವೀರಶೈವದಂತಹ ಧಾರ್ಮಿಕ ಚಳುವಳಿಗಳು; ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಬಂಡೆದ್ದ ಕಬೀರ, ತುಕಾರಾ[ಮ] ಮುಂತಾದ ಅನುಭಾವಿ ಚಳುವಳಿಗಳು; ಟಿಪ್ಪು ಕಿತ್ತೂರ ಚೆನ್ನಮ್ಮನಿಂದ ಗಾಂಧಿಯವರೆಗಿ[ನ] ವಸಾಹತುಶಾಹಿ ವಿರೋಧಿ ಚಳುವಳಿಗಳು ವಸಾಹತೋತ್ತರ ಚಳುವಳಿಗಳು – ಅವರ ವಿಶ್ಲೇಷಿಸಿದ ನಾಲ್ಕು ಮಾದರಿಗಳು.

ಚಳುವಳಿ ಸಮಾಜದಲ್ಲಿ ಬದಲಾವಣೆಯ ಪ್ರಕ್ರಿಯೆಯ ಭಾಗ. ಚಳುವಳಿಯ ಸಫಲತೆ ವಿಫಲತೆ, ಪರಿಭಾಷೆ–ವಿಧಾನಗಳ ಬ[ಗ್ಗೆ] ನಿರ್ಧಾರಕ್ಕೆ ಬರುವುದರ ಔಚಿತ್ಯವನ್ನು ಚಿನ[ುವ] ಅಚಿಬೆ ಅವರ ಆಫ್ರಿಕನ್ ಜಾನಪದ ಕತೆ ಮತ್ತು ಸೊಫೊಕ್ಲಿಸನ ಗ್ರೀಕ್ ನಾಟಕದ ದೃಷ್ಟಾಂತದ ಮೂಲಕ ಪ್ರಶ್ನಿಸುತ್ತಾ ಅನುಪಮ ನಾಳೆಯ ಚಳುವಳಿಗಳ ಬ[ಗ್ಗೆ] ತಮ್ಮ ಕೆಲವು ಪ್ರಸ್ತಾವಗಳನ್ನು ಮುಂದಿಟ್ಟರು. ನಾಳೆಯ ಚಳುವಳಿಗಳು ಜಾತಿ–ವರ್ಗ ಲಿಂಗದ ವಿಷಯಗಳ ಬಗ್ಗೆ ಇರುತ್ತವೆ. ಪ್ರಜಾಸತ್ತಾತ್ಮಕ ಅವಕಾಶಗಳನ್ನೇ ಕಸಿಯುವುದರ ವಿರುದ್ಧ. ಇದಕ್ಕಾಗಿ ಚುನಾವಣಾ ಸುಧಾರಣೆಗಳಿಗಾಗಿ ಚಳುವಳಿಗಳು ಬೇಕಾಗಿ[ವೆ] ಎಂದರು. ದಲಿತ–ಕಮ್ಯುನಿಸ್ಟ್ ಮಹಿಳೆ–ಪರಿಸರ–ಬುಡಕಟ್ಟು ಮುಂತಾದ ಚಳುವಳಿಗಳ ದ್ವೀಪಗಳ ನಡುವೆ ಸೇತುವೆಯಾಗಬೇಕು ಎಂಬ ತನ್ನ ಆಸೆ ವ್ಯಕ್ತಪಡಿಸಿದರು.

ಎಂ.ಜಿ.ಹೆಗಡೆ,ಬರಗೂರು ಒಕ್ಕುಂದ ಮತ್ತು ಅನುಪಮ ಮಂಡಿಸಿದ ಈ ವಿಚಾರಗಳ ಮತ್ತು ವಿಷಯದ ಇತರ ಆಯಾಮಗಳ ಬಗ್ಗೆ ಊಟದ ವಿರಾಮದ ನಂತರ ನಡೆದ 'ಚಳುವಳಿ – ಹೊಸ ತಲೆಮಾರಿನ ಪ್ರಶ್ನೆಗಳು' ಸಂವಾದದಲ್ಲಿ ಸಮಾರೋಪದಲ್ಲಿ, ಸಾಹಿತ್ಯೋತ್ಸವದಲ್ಲಿ ಪಾಲ್ಗೊಂಡ ಎಲ್ಲರ ಮಧ್ಯೆ ಚರ್ಚೆ ನಡೆಯಿತು. ಚಳುವಳಿಗಳು ಏಳು ಬೀಳುಗಳ ಕಂಡಿವೆ. ಆದರೆ ಕೆಲವರು ಹೇಳುವಂತೆ ಸತ್ತಿಲ್ಲ. ನಿರಂತರವಾಗಿ ನಡೆಯುತ್ತಲೇ ಇವೆ. ಚಳುವಳಿಗಳ ವರದಿಗಳ ಬಗ್ಗೆ ಮಾಧ್ಯಮಗಳ ಮೌನ–ಉಪೇಕ್ಷೆ, ಅವುಗಳನ್ನು ಸ್ಥಳೀಯ ವರದಿಗೆ ಸೀಮಿತವಾಗಿಸುವ ಪ್ರವೃತ್ತಿ ಅವು ಅಮುಖ್ಯ ಎನ್ನುವ ಮನೋಧರ್ಮ ದೊಡ್ಡ ಚಳುವಳಿಗಳನ್ನೂ (ಉದಾ: ಫೆಬ್ರುವರಿಯಲ್ಲಿ ನಡೆದ ಸಾರ್ವತ್ರಿಕ ಮುಷ್ಕರ, ಪಾರ್ಲಿಮೆಮಂಟಿನ ಮುಂದೆ ಆಹಾರ ಹಕ್ಕಿಗಾಗಿ ನಡೆದ ಭಾರೀ ಪ್ರತಿಭಟನೆ) ಜನಮಾನಸದಿಂದ 'ಇಲ್ಲವಾಗಿಸು[ವ]' ಹುನ್ನಾರದಲ್ಲಿ ತೊಡಗಿವೆ. ಇದು ಚರ್ಚೆಯಲ್ಲಿ ವ್ಯಾಪಕವಾಗಿ ವ್ಯಕ್ತವಾದ ಅಭಿಪ್ರಾಯ.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI